ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 1 ಮಂಗಳವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 107 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ



ಮೈಸೂರು,ಜು.31–ಮೈಸೂರಿನ ಸಾವರ್ಕರ್ ಪ್ರತಿಷ್ಠಾಪನಾ ವತಿಯಿಂದ ಗೋಪಾಲಸ್ವಾಮಿ ಕಾಲೇಜಿನಲ್ಲಿ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸ್ಪರ್ಧೆಯ ಉದ್ಘಾಟನೆಯನ್ನು ಪ್ರತಿಷ್ಠಾನದ ಅಧ್ಯಕ್ಷೆ ಡಾ.ಎಸ್.ಯಶಸ್ವಿನಿ ನೆರವೇರಿಸಿದರು. ಅತಿಥಿಯಾಗಿ ಪ್ರೊ ಹನುಮಂತಾಚಾರ್ ಜೋಶಿ ಭಾಗವಹಿಸಿದ್ದರು. 175 ಸ್ಪರ್ಧಿಗಳು ಭಾಗವಹಿಸಿದ್ದರು. ಅದರಲ್ಲಿ ಮೈಸೂರಿನ ಹೆಬ್ಬಾಳಿನ ಮಂಗಳಮ್ಮ ಪ್ರಥಮ, ಬೈಂದೂರಿನ ಅನ್ನಪೂರ್ಣ ದ್ವಿತೀಯ ಹಾಗೂ ಬೆಳಗಾವಿಯ ಪ್ರವೀಣ್ ಟಿ. ತೃತೀಯ ಬಹುಮಾನ ಪಡೆದರು. ಪಾಂಡವಪುರದ ಬಿ.ನಿಕಿತಾ, ಸಕಲೇಶಪುರದ ರೀಫ, ಹೆಚ್.ಪಿ.ಸೃಜನ್, ಎಸ್.ವಿ. ಮಾನಸ, ವಿಜಯಲಕ್ಷ್ಮಿ ಅವರಿಗೆ ಸಮಾಧಾನಕರ ಬಹುಮಾನಗಳನ್ನು ನೀಡಲಾಯಿತು. ಸಾವರ್ಕರ್ ಪ್ರತಿಷ್ಠಾನದ ಟ್ರಸ್ಟಿಗಳಾದ ಸಂದೇಶ್, ಸಂಜಯ್ ಶರ್ಮಾ, ರಜತ್ ಇನ್ನಿತರರು ಉಪಸ್ಥಿತರಿದ್ದರು.

ಡ್ರೋನ್ ಹಾರಿಸದಂತೆ ನಿಷೇಧಾಜ್ಞೆ ಜಾರಿ



ಮೈಸೂರು,ಜು.31– ಜು.31ರಿಂದ ಆ.3ರವರೆಗೆ ಮೈಸೂರು ನಗರದಲ್ಲಿ ನಡೆಯಲಿರುವ ಜಿ.20 ಕಾರ್ಯಕ್ರಮದಲ್ಲಿ ಭಾಗವಹಿಸುವ ಗಣ್ಯರುಗಳ ಭದ್ರತಾ ಹಿತದೃಷ್ಟಿಯಿಂದ ಜಿ–20 ಕಾರ್ಯಕ್ರಮ ಸ್ಥಳಗಳಾದ ಹೋಟೆಲ್ ರ್‍ಯಾಡಿಸನ್ ಬ್ಲ್ಯೂ, ದಿ ಗ್ರ್ಯಾಂಡ್ ಮರ್ಕ್ಯೂರಿ ಹೋಟೆಲ್ ಹಾಗೂ ಮೈಸೂರು ಅರಮನೆ ಸ್ಥಳಗಳ ಮೇಲಿನ ವಾಯು ಪ್ರದೇಶದಲ್ಲಿ 01 (ಒಂದು) ಕಿ.ಮೀ. ವ್ಯಾಪ್ತಿ ಪ್ರದೇಶದ ಸುತ್ತಲೂ ಯಾವುದೇ ಡ್ರೋನ್ ಮತ್ತು ಇತರೆ ಯಾವುದೇ ಹಾರಾಟ ಮಾಡದಂತೆ ಸೆಕ್ಷನ್ 144 ಸಿ.ಆರ್.ಪಿ.ಸಿ. ವಿಧಿಸಿ Temporary No Flying Zone ಎಂದು ಘೋಷಿಸಿ ಪ್ರತಿಬಂಧಕಾಜ್ಞೆಯನ್ನು ಘೋಷಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವ್ಯಸನ ಮುಕ್ತ ದಿನಾಚರಣೆ; ವಿಚಾರ ಸಂಕಿರಣ

ಮೈಸೂರು,ಜು.31– ಡಾ.ಮಹಾಂತ ಶಿವಯೋಗಿಗಳ ಜನ್ಮದಿನಾಚರಣೆ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ಹಾಗೂ ಮದ್ಯಪಾನ, ಮಾದಕ ವಸ್ತುಗಳು ಹಾಗೂ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ವಿಚಾರ ಸಂಕಿರಣವನ್ನು ಆ.1ರಂದು ಬೆಳಗ್ಗೆ 10.30 ಗಂಟೆಗೆ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಹಾಗೂ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಇವರ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಎಸ್.ಎ.ಧನರಾಜ್ ಅಧ್ಯಕ್ಷತೆ ವಹಿಸುವರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವಸ್ವಾಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಭಾಗವಹಿಸುವರು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.



ಭಾರತೀಯ ಜೀವ ವಿಮಾ ನಿಗಮ, ಶಾರದಾದೇವಿನಗರ ಶಾಖೆಯ ಆಡಳಿತಾಧಿಕಾರಿಯಾಗಿದ್ದ ನಾಗಮಣಿ ಅವರು ಸೋಮವಾರ ವಯೋ ಸಹಜ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ, ಬೀಳ್ಕೊಡಲಾಯಿತು. ಈ ವೇಳೆ ಶಾಖಾಧಿಕಾರಿ ಉಮಾಶಂಕರ್, ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

ಪ್ರಥಮ ಪಿಯುಸಿ ದಾಖಲಾತಿಗೆ ಅರ್ಜಿ ಆಹ್ವಾನ

ಮೈಸೂರು,ಜು.31–ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಯಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಲಗನಹಳ್ಳಿ, ಹಾಲಿ ಬೆಟ್ಟದಪುರ ಶಾಲೆಯನ್ನು 6ನೇ ತರಗತಿಯಿಂದ 12ನೇ ತರಗತಿಯವರೆಗೆ ಇಂಟಿಗ್ರೇಟೆಡ್ ಶಾಲೆಯಾಗಿ ಪರಿವರ್ತಿಸಿರುವ ಸಂಬಂಧ 2023–24ನೇ ಸಾಲಿನಲ್ಲಿ ಪ್ರಥಮ ಪಿಯುಸಿ ಪಿಸಿಎಂಬಿ (ವಿಜ್ಞಾನ ವಿಭಾಗ) ಮತ್ತು ಸಿಇಬಿಎ (ವಾಣಿಜ್ಯ ವಿಭಾಗ)ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸದರಿ ವಸತಿ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇನ್ನಿತರೆ ಸಾಮಗ್ರಿಗಳನ್ನು ನೀಡುವುದರ ಜೊತೆಗೆ ಉತ್ತಮವಾದ ವಿದ್ಯಾಭ್ಯಾಸ ನೀಡಲಾಗುತ್ತದೆ. ಈ ಶಾಲೆಯಲ್ಲಿ ಅಲ್ಪಸಂಖ್ಯಾತ ಸಮುದಾಯ ವರ್ಗದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಪ್ರವೇಶ ಲಭ್ಯವಿದೆ. ಆಸಕ್ತಿಯುಳ್ಳ ಹಾಗೂ ಅರ್ಹ ಅಭ್ಯರ್ಥಿಗಳು ಆ.10ರೊಳಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಕಚೇರಿ ವೇಳೆಯಲ್ಲಿ ಅಥವಾ ಮೊರಾರ್ಜಿ ದೇಸಾಯಿ ವಸತಿ ಶಾಲೆ, (ಬೆಟ್ಟದಪುರ) ಪಿರಿಯಾಪಟ್ಟಣ ಶಾಲೆಯಲ್ಲಿ ಅರ್ಜಿ ಗಳನ್ನು ಪಡೆದು ಸಲ್ಲಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.

ಬೀದರ್‌ನಲ್ಲಿ ಅಪ್ರಾಪ್ತ ಮಗಳ ಮೇಲೆ ಅತ್ಯಾಚಾರ ಎಸಗಿದ ತಂದೆ!

ಬೀದರ್: ಅಪ್ರಾಪ್ತ ಮಗಳ ಮೇಲೆ ತಂದೆ ಅತ್ಯಾಚಾರ ನಡೆಸಿರುವ ಘಟನೆ ಬೀದರ್‌ನಲ್ಲಿ ವರದಿಯಾಗಿದೆ. ಆರೋಪಿ ವ್ಯಕ್ತಿ ನಾಪತ್ತೆಯಾಗಿದ್ದಾನೆ. ಬಸವಕಲ್ಯಾಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮನೆಯಲ್ಲಿ ಎಲ್ಲರೂ ನಿದ್ದೆ ಮಾಡುವಾಗ ಆರೋಪಿ ಮಗಳ ಮೇಲೆ ಅತ್ಯಾಚಾರವೆಸಗುತ್ತಿದ್ದ. ತಂದೆಯಿಂದ ಈ ಪೈಶಾಚಿಕ ಕೃತ್ಯ ಹಲವು ತಿಂಗಳುಗಳಿಂದ ನಡೆಯುತ್ತಿತ್ತು. ಈ ಕೃತ್ಯವನ್ನು ಬಹಿರಂಗಗೊಳಿಸದಂತೆ ಮಗಳಿಗೆ ಬೆದರಿಕೆ ಹಾಕುತ್ತಿದ್ದ ಎಂದು ತಿಳಿದು ಬಂದಿದೆ. ಪ್ರಕರಣವನ್ನು ಪೊಲೀಸರಿಗೆ ವಹಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಆರೋಪಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ನಿಧನ

ಸಿದ್ದಪ್ಪ



ಮೈಸೂರು, ಜು. 31–ಮೈಸೂರಿನ ಐಪಿಎಸ್ ಶ್ರೀನಿವಾಸ್‌ನಗರ ಪೊಲೀಸ್ ಲೇಔಟ್ ಮೂರನೇ ಹಂತದ ನಿವಾಸಿ ಹಾಗೂ ಸಿವಿಲ್ ಕಂಟ್ರಾಕ್ಟರ್ ಸಿದ್ದಪ್ಪ (93) ಭಾನುವಾರ ನಿಧನರಾದರು. ಕೊಳ್ಳೇಗಾಲ ತಾಲೂಕಿನ ಟಗರುಪುರದವರಾದ ಇವರು ಪತ್ನಿ ಸಿದ್ದಮ್ಮ, ಪುತ್ರರಾದ ಪುಟ್ಟಣ್ಣ (ದೇವರಾಜ ಟ್ರಾಫಿಕ್ ಎಎಸ್ಐ), ನಾಗೇಶ್ (ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಹೆಡ್ ಕಾನ್ಸ್‌ಟೇಬಲ್), ಮೋಹನ್, ಮೋಹನ್‌ಕುಮಾರ್‌ಗೌಡ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವಿಕ



ಹೆಚ್.ಡಿ.ಕೋಟೆ: ತಾಲೂಕಿನ ಕೆ.ಬೆಳ್ತೂರು ಗ್ರಾಮದ ನಿವಾಸಿ ದೇವಿಕ (ಮೇರಿ) ಭಾನುವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ 56 ವರ್ಷ ವಯಸ್ಸಾಗಿತ್ತು. ಮೃತರು ಪತಿ ಚಾಮರಾಜು (ನ್ಯಾಯಬೆಲೆ ಅಂಗಡಿ ಮಾಲೀಕ), ಪುತ್ರರಾದ ಯಶ್ವಂತ್, ವಿನಾಯಕ ಮತ್ತು ಪ್ರಶಾಂತ್, ಪುತ್ರಿ ಪ್ರಮೀಳಾ ಕುಮಾರಿ (ಪವಿತ್ರ), ಅಳಿಯ ಕೆ. ಮಹೇಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿರುವ ಕುಟುಂಬದ ತೋಟದಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೃಹಲಕ್ಷ್ಮಿ: ಮೈಸೂರಲ್ಲಿ 4.49 ಲಕ್ಷ ನೋಂದಣಿ

- ರಾಜ್ಯದಲ್ಲೇ ಅರಮನೆ ನಗರಿ ಸೆಕೆಂಡ್, ಬೆಳಗಾವಿ ಫಸ್ಟ್
- ಪಾಲಿಕೆ ವಲಯ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಲು ಸರದಿ ಸಾಲು
- ಪಾಲಿಕೆ ಮುಖ್ಯ ಕಚೇರಿ ಸೇರಿದಂತೆ 10 ಕೌಂಟರ್‌ಗಳಲ್ಲಿ ಅರ್ಜಿ ಸಲ್ಲಿಕೆ

ಮೈಸೂರು, ಜು.31(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ತಿಂಗಳಿಗೆ ಎರಡು ಸಾವಿರ ರೂ. ಆರ್ಥಿಕ ನೆರವು ಪಡೆಯುವ "ಗೃಹಲಕ್ಷ್ಮೀ" ಯೋಜನೆಗೆ ಅರ್ಜಿ ಸಲ್ಲಿಸಲು ಮೈಸೂರಿನಲ್ಲಿ ಮಹಿಳೆಯರು ಮುಗಿಬಿದ್ದಿದ್ದು, ಜು.30ರ ಸಂಜೆವರೆಗೆ ಮೈಸೂರಿನ 4,49,555 ಮಹಿಳೆಯರು ಸೇರಿದಂತೆ ರಾಜ್ಯದಲ್ಲಿ 80,90,234 ಮಹಿಳೆಯರು ಅರ್ಜಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅತಿ ಹೆಚ್ಚು ಮಂದಿ ಅರ್ಜಿ ಸಲ್ಲಿಸಿದವರಲ್ಲಿ ಬೆಳಗಾವಿ (7,61,986) ಮೊದಲ ಸ್ಥಾನ ಪಡೆದರೆ, ಮುಖ್ಯಮಂತ್ರಿ ತವರು ಜಿಲ್ಲೆ ಮೈಸೂರು (4,49,555) ಎರಡನೇ ಸ್ಥಾನ ಪಡೆದಿದೆ.

ತುಮಕೂರು (4,38,529) ತೃತೀಯ, ಬೆಂಗಳೂರು ನಗರ (3,57,299) 4ನೇ ಸ್ಥಾನ ಪಡೆದಿದೆ. ನೆರೆಯ ಮಂಡ್ಯ ಜಿಲ್ಲೆ (3,19,627) 6ನೇ ಸ್ಥಾನ, ಹಾಸನ (3,10,765) 8ನೇ ಸ್ಥಾನ, ಚಾಮರಾಜನಗರ ಜಿಲ್ಲೆ (1,84,386) 24ನೇ ಸ್ಥಾನ ಹಾಗೂ ಕೊಡಗು ಜಿಲ್ಲೆಯಲ್ಲಿ ಕೇವಲ 78,191 ಅರ್ಜಿ ಸಲ್ಲಿಸಿದ್ದು, 31ನೇ ಸ್ಥಾನ ಪಡೆದಿದೆ. ಗೃಹಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜು.19ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಚಾಲನೆ ನೀಡಿದ್ದರು. ಜು.20ರಿಂದ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಅರ್ಜಿ ಸಲ್ಲಿಕೆ ಆರಂಭವಾಯಿತು. ಆರಂಭದ ದಿನದಲ್ಲಿ ಸರ್ವರ್ ಸಮಸ್ಯೆಯಿಂದ ನೋಂದಣಿ ಪ್ರಕ್ರಿಯೆಗೆ ಅಡಚಣೆ ಉಂಟಾಗುತ್ತಿತ್ತು. ಇದೀಗ ನ್ಯೂನತೆ ಸರಿಪಡಿಸಿ ಸುಗಮವಾಗಿ ನೋಂದಣಿಗೆ ಕ್ರಮ ಕೈಗೊಳ್ಳಲಾಗಿದ್ದು, ಜು.30ರವರೆಗೆ ರಾಜ್ಯಾದ್ಯಂತ 80,90,234 ಮಹಿಳೆಯರು ಅರ್ಜಿ ಸಲ್ಲಿಸಿದ್ದಾರೆ. ಮೈಸೂರಲ್ಲಿ ಅರ್ಜಿ ಸಲ್ಲಿಸಲು ಪಾಲಿಕೆ ಮುಖ್ಯ ಕಚೇರಿ, 9 ವಲಯ ಕಚೇರಿ ಸೇರಿದಂತೆ ಒಟ್ಟು 10 ಕೇಂದ್ರ ತೆರೆಯಲಾಗಿದೆ. ಕರ್ನಾಟಕ ಒನ್, ಮೈಸೂರು ಒನ್, ಗ್ರಾಮ ಒನ್ ಕೇಂದ್ರಗಳಲ್ಲೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಪಾಲಿಕೆ ವಲಯ ಕಚೇರಿ ಮುಂದೆ ನೂರಾರು ಮಹಿಳೆಯರು ಯೋಜನೆಗೆ ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳೊಂದಿಗೆ ಸಾಲಿನಲ್ಲಿ ನಿಲ್ಲುತ್ತಿರುವ ದೃಶ್ಯ ಕಂಡು ಬರುತ್ತಿದೆ. ಕಚೇರಿ ಬಾಗಿಲು ತೆರೆಯುವ ಮುನ್ನವೇ ಮಹಿಳೆಯರು ಬಂದು ನಿಲ್ಲುತ್ತಿದ್ದಾರೆ. ಎಲ್ಲಾ ಕೇಂದ್ರಗಳಲ್ಲೂ ಸಣ್ಣಪುಟ್ಟ ಸಮಸ್ಯೆ ಹೊರತುಪಡಿಸಿದರೆ ಬಹುತೇಕ ಸಮಯದಲ್ಲಿ ಸುಲಲಿತವಾಗಿ ನೋಂದಣಿ ಕಾರ್ಯ ಸಾಗುತ್ತಿದೆ. ಇದರಿಂದ ಮೈಸೂರಲ್ಲಿ ಅರ್ಜಿ ಸಲ್ಲಿಸುತ್ತಿರುವವರ ಸಂಖ್ಯೆ ಹೆಚ್ಚಾಗಿದೆ.



ಮೈಸೂರಿನ ಪಾಲಿಕೆ ವಲಯ ಕಚೇರಿ 6ರಲ್ಲಿ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಸಾಲುಗಟ್ಟಿ ನಿಂತಿರುವ ಮಹಿಳೆಯರು.

ಮಾನವ ಕಳ್ಳ ಸಾಗಣೆ ಕುರಿತು ಜನರಿಗೆ ಜಾಗೃತಿ

ಮೈಸೂರು,ಜು.31–ಮಾನವ ಕಳ್ಳ ಸಾಗಣೆ ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರು ಜಾಗರೂಕರಾಗಬೇಕು. ಮಾನವ ಕಳ್ಳ ಸಾಗಣೆ ಮಾರ್ಗಗಳು ಹಾಗೂ ವಿಧಾನಗಳು, ಅಪರಿಚಿತರು ಮತ್ತು ಸಾಗಣೆದಾರರು ಸ್ಥಳೀಯ ವ್ಯಕ್ತಿಗಳ ಸಹಾಯ ಪಡೆದು ಮಾಹಿತಿ ಸಂಗ್ರಹಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ದಿಕ್ಕು ಕಾಣದೆ ನಿಂತ ಅನಾಥ ಅಥವಾ ಒಂಟಿ ಮಕ್ಕಳು ಮತ್ತು ಮಹಿಳೆಯರಿಗೆ ದಾರಿ ತೋರಿಸುವ ನೆಪದಲ್ಲಿ ಸಾಗಣೆ, ಅತೀವ ಸಲುಗೆ ತೋರಿಸಿ ಸ್ನೇಹ ಸಂಪಾದಿಸುವುದು, ಕೆಲಸ ಕೊಡಿಸುವ ಮದುವೆ ಮಾಡಿಸುವ ನೆಪ, ಸುಳ್ಳು ದಾಖಲೆಗಳನ್ನು ಇಟ್ಟುಕೊಂಡು ಪಾಸ್ಪೋರ್ಟ್, ಸಿನಿಮಾದಲ್ಲಿ ಅವಕಾಶ ಕೊಡಿಸುವ ಆಮಿಷ, ಮೋಸ ಮಾಡಿ ಸಾಗಣೆ, ಮನೆ ಜಾತ್ರೆ ಹಬ್ಬಗಳು ಮೇಳಗಳು ಮಾರ್ಕೆಟ್ ಕಾರ್ಖಾನೆ ಹಾಗೂ ಶಾಲಾ ಆವರಣ ಧಾರ್ಮಿಕ ಸ್ಥಳ ಕೊಳಚೆ ಪ್ರದೇಶ ಮಸಾಜ್ ಪಾರ್ಲರ್‌ಗಳ ಮುಖಾಂತರ ಸಾಗಣೆ, ಕೆಲವೊಂದು ಸಂದರ್ಭದಲ್ಲಿ ಸಾಗಣೆಗೊಳಪಟ್ಟ ಮಗುವನ್ನೇ, ಮಹಿಳೆಯರನ್ನೇ ಇತರ ಮಕ್ಕಳು ಮಹಿಳೆಯರ ಮನವೊಲಿಸುವ ಕೃತ್ಯಕ್ಕೆ ಬಳಸಲಾಗುತ್ತದೆ. ಮಾನವ ಕಳ್ಳ ಸಾಗಣೆ ಕುರಿತು ಮಾಹಿತಿ ತಿಳಿದು ಬಂದಲ್ಲಿ ತಕ್ಷಣವೇ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ, ಎಎನ್‌ಎಂ, ಆಶಾ ಕಾರ್ಯಕರ್ತೆ, ಗ್ರಾಮ ಪಂಚಾಯಿತಿ, ಹತ್ತಿರದ ಪೊಲೀಸ್ ಠಾಣೆ, ಮಕ್ಕಳ ಸಹಾಯವಾಣಿ, ಗ್ರಾಮ, ತಾಲೂಕು, ಜಿಲ್ಲಾ ಮಟ್ಟದ ಕಾವಲು ಸಮಿತಿಗಳು, ಸ್ವಯಂ ಸೇವಾ ಸಂಸ್ಥೆಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಬಹುದು.



ಝಿಕ್ರೆ–ಇ–ಇಮಾಮ್–ಇ–ಹುಸೇನ್ ಆಚರಣೆ



ಮೈಸೂರಿನ ಮಸೀದಿ ಆಜ಼ಮ್ ಮರ್ಕಾಜ಼್ ಅಹಲೆ ಸುನ್ನತ್ ಜಮಾತ್‌ನಲ್ಲಿ ಮುಸ್ಲಿಂ ಬಾಂಧವರು ನವಾಜ಼್ ಅಲಿ ಷಾ ಆಮಿರಿ ಸಾಹೆಬ್ ಆಶ್ರಯದಲ್ಲಿ ಝಿಕ್ರೆ–ಇ–ಇಮಾಮ್ –ಇ–ಹುಸೇನ್ ಆಚರಿಸಿದರು.

ಮೈಸೂರು,ಜು.31–ಸಿಲ್‌ಸಿಲ–ಇ–ಆಮಿರಿಯಾ ಭಕ್ತಾದಿಗಳು ಯೂಮ್–ಇ–ಅಶುರಾ ಇಸ್ಲಾಮಿಕ್ ಮೊಹರಂ ತಿಂಗಳು 1445 ಹಿಜರಿ ಅಂಗವಾಗಿ ಮಸೀದಿ ಆಜ಼ಮ್ ಮರ್ಕಾಜ಼್ ಅಹಲೆ ಸುನ್ನತ್ ಜಮಾತ್‌ನಲ್ಲಿ ನವಾಜ಼್ ಅಲಿ ಷಾ ಆಮಿರಿ ಸಾಹೆಬ್‌ರವರ ಆಶ್ರಯದಲ್ಲಿ ಝಿಕ್ರೆ–ಇ–ಇಮಾಮ್–ಇ–ಹುಸೇನ್ ಆಚರಿಸಲಾಯಿತು. ಸೂಫಿ ಸಂತ ಅಲಾಮ ಸೈಯದ್ ಮೊಹಮ್ಮದ್ ರಜ಼ಾ–ಉಲ್–ಹಕ್ ಪೀರ್ ಅಲೀಮಿ ಷಾ ಆಮಿರಿಯಾ, ಸಜ್ಜದಾ ನಷೀನ್, ಸಿಲ್‌ಸಿಲಾ ಆಮಿರಿಯಾ, ಚೆನ್ನೈ, ತಮಿಳುನಾಡು ಅವರು ಕರ್ಬಾಲಾ–ಇ–ಕೈನಾತ್ ಕುರಿತು ಭಾಷಣ ಮಾಡಿದರು. ಸರ್ಕಾರ್ ಮೊಹಬೂಬ್ ಸುಭಾನಿ ಫೌಂಡೇಶನ್ಸ್ ಸಂಚಾಲಕ ಹಫೀಜ಼್ ಉಲ್ಲಾ ಷರೀಫ್ ಖಾದ್ರಿ, ಬಾಬು ಸೇಠ್, ಖೈಜ಼ರ್ ಪಾಷ ಅಮರಿ, ಅಫ್ತಾಬ್ ಅಹಮದ್ ಕುಶಾಲಿ, ಡಾ॥ ತೌಸಿಫ್ ಅಹಮದ್ ಅಶ್ರಫಿ, ಸಮಾಜ ಸೇವಕ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆ.4ರವರೆಗೆ ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು,ಜು.31–ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ವತಿಯಿಂದ ಆ.4ರವರೆಗೆ ಮೈಸೂರು ನಗರದ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಹಾಗೂ ವಸಂತ ಮಹಲ್ ಪರೀಕ್ಷಾ ಕೇಂದ್ರಗಳಲ್ಲಿ ಗಣಕಯಂತ್ರ ಶಿಕ್ಷಣ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರದ ಸುತ್ತಲೂ ಆ.4ರವರೆಗೆ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಆದೇಶ ಹೊರಡಿಸಲಾಗಿದೆ.

ನಾಳೆ ವೈದ್ಯರ ಹುದ್ದೆಗೆ ನೇರ ಸಂದರ್ಶನ

ಮೈಸೂರು, ಜು.31– ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿಯಲ್ಲಿ ಪ್ರಸ್ತುತ ಖಾಲಿ ಇರುವ ತಜ್ಞ ವೈದ್ಯರು–03 (ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು–02, ಅರವಳಿಕೆ ತಜ್ಞರು–01) ಹುದ್ದೆಗಳಿಗೆ ಆ.2ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 2ರವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ನಾಗಮ್ಮ ಆಸ್ಪತ್ರೆ ಆವರಣದಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ. ಆಸಕ್ತರು ಹುದ್ದೆಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ನೇರ ಸಂದರ್ಶನ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.

ಮೈಸೂರಲ್ಲಿ ಆ.5ರಿಂದ ಮದ್ಯವರ್ಜನ ಶಿಬಿರ

ಮೈಸೂರು,ಜು.31–ಬಸವ ಮಾರ್ಗ ಫೌಂಡೇಷನ್ ವತಿಯಿಂದ ಆ.5ರಿಂದ 25ರವರೆಗೆ 30ನೇ ಮದ್ಯವರ್ಜನ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 855311 1999 ಸಂಪರ್ಕಿಸಬಹುದು.

ಪ್ರತಿಭಾ ಪುರಸ್ಕಾರ

ಮೈಸೂರು,ಜು.31–ಮೈಸೂರಿನ ಜೆ.ಪಿ.ನಗರ ಶರಣ ವೇದಿಕೆಯಿಂದ 2022–23ನೇ ಸಾಲಿನ ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಶೇ.90ಕ್ಕಿಂತ ಹೆಚ್ಚಿನ ಅಂಕ ಗಳಿಸಿರುವ ಶರಣ ವೇದಿಕೆ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ನಾಗೇಂದ್ರಕುಮಾರ್, ಮೊ. 962047 8888 ಮೂಲಕ ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜು.31–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಆ.3ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821 –4259259 ಸಂಪರ್ಕಿಸಬಹುದು.

ವಾರ್ಷಿಕ ಮಹಾಸಭೆ

ಮೈಸೂರು,ಜು.31–ಶ್ರೀ ಶಾರದಾ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಆ.6ರಂದು ಬೆಳಗ್ಗೆ 10.30 ಗಂಟೆಗೆ ಆದಿಚುಂಚನಗಿರಿ ರಸ್ತೆಯಲ್ಲಿರುವ ವೀಣೆ ಶೇಷಣ್ಣ ಭವನದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ವಿ.ವೆಂಕಟೇಶ್ ಸಭೆಯ ಅಧ್ಯಕ್ಷತೆ ವಹಿಸುವರು.

ಬಿ.ಸಿ.ನಾಗೇಶ್ ಸೋತದ್ದು ಪಠ್ಯಪರಿಷ್ಕರಣೆ ವಿಚಾರಕ್ಕಲ್ಲ!

ಮೈಸೂರು,ಜು.31(ಎಸ್‌ಪಿಎನ್)–ಮಾಜಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸೋತಿದ್ದು, ಪಠ್ಯಪುಸ್ತಕ ಪರಿಷ್ಕರಣೆ ವಿಚಾರವಾಗಿ ಅಲ್ಲ. ಬದಲಾಗಿ ಕೊಬ್ಬರಿಗೆ ಸೂಕ್ತ ಬೆಂಬಲ ಬೆಲೆ ಕಲ್ಪಿಸುವಲ್ಲಿ ವಿಫಲರಾಗಿದ್ದಕ್ಕೆ ಸೋತಿದ್ದಾರೆ ಎಂದು ಡಾ.ಪುರು ಷೋತ್ತಮ್ ಬಿಳಿಮಲೆ ಅಭಿಪ್ರಾಯಪಟ್ಟರು.

ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ ಭಾಷಾ ತಜ್ಞ ಡಾ.ಪುರುಷೋತ್ತಮ್ ಬಿಳಿಮಲೆ ನೇತೃತ್ವದಲ್ಲಿ ಆಯೋಜಿಸಿದ್ದ ಮೂರನೇ ದಿನದ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ವಿಷಯದ ಕುರಿತ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾನು ಮತ್ತು ಸ್ನೇಹಿತರು ತಿಪಟೂರಿಗೆ ಹೋಗಿದ್ದಾಗ, ಅಲ್ಲಿನ ಹೋಟೆಲ್‌ನಲ್ಲಿ ಮತದಾರರನ್ನು ಸುಮ್ಮನೆ ವಿಚಾರಿಸಿದಾಗ ಈ ಸತ್ಯ ಬಂದಿತು. ಪಠ್ಯ ಪರಿಷ್ಕರಣೆ ಸಮಸ್ಯೆ ಕೆಲವೇ ಕೆಲವು ಮತದಾರರಿಗೆ ತಲುಪಿದೆ. ಕರಾವಳಿಯಲ್ಲಿ ಬಹು ಸಂಸ್ಕೃತಿ, ಬಹು ಪರಂಪರೆ ಬೆಳೆಯಲು ಒಂದು ಇತಿಹಾಸವಿದೆ. ಮಧ್ಯಪ್ರಾಚ್ಯ ದೇಶಗಳಿಂದ 7ನೇ ಶತಮಾನದಲ್ಲಿ ಮುಸ್ಲಿಮರು ಭಾರತಕ್ಕೆ ಮೊದಲು ಕೇರಳಕ್ಕೆ ಬಂದು ನೆಲೆಯೂರಿದರು. ನಂತರ ತೆಂಗಿನ ಬೆಳೆ ಕೇರಳ ಮತ್ತು ಕರಾವಳಿ ಜಿಲ್ಲೆಗಳಿಗೆ ಬಂತು ಎಂದರು.

ನಂತರ ಕರಾವಳಿಯಲ್ಲಿ ಬೆಳೆಯುವ ತೆಂಗಿನ ನಾರಿಗೆ ವಿಶೇಷ ಶಕ್ತಿಯಿದೆ. ದೊಡ್ಡದೊಡ್ಡ ಹಡಗುಗಳನ್ನು ಕಟ್ಟಲು ಈ ತೆಂಗಿನ ನಾರು ಬಹು ಉಪಯುಕ್ತ. ಈ ನಾರಿಂದ ಹೊಸೆದ ಹಗ್ಗಗಳು ನದಿ, ಸಮುದ್ರ ಹಾಗೂ ಬಾವಿ ನೀರಿನಲ್ಲಿದ್ದರೂ ಕಟ್ಟಾಗುತ್ತಿಲ್ಲ. ಈ ಹಗ್ಗಗಳಿಗೆ ವಿದೇಶಗಳಲ್ಲೂ ಭಾರೀ ಬೇಡಿಕೆ ಇದೆ. ಇದರ ಬಗ್ಗೆ ಮಂಗಳೂರಿಗೆ ತೆರಳಿ ವಿಚಾರಿಸಿದರೆ, ಇದರ ಮಹತ್ವ ತಿಳಿಯುತ್ತದೆ ಹಾಗೂ ಇದರ ಮಾರುಕಟ್ಟೆ ವ್ಯವಸ್ಥೆ ದೇಶ–ವಿದೇಶಗಳಲ್ಲಿ ವಿಸ್ತಾರಗೊಂಡಿದೆ ಎಂದು ಎಳೆಎಳೆಯಾಗಿ ಬಿಡಿಸಿದರು.



ಪುರುಷೋತ್ತಮ್ ಬಿಳಿಮಲೆ

7ನೇ ಶತಮಾನದಲ್ಲಿ ವಿದೇಶದಿಂದ ಬಂದ ಕ್ರಿಶ್ಚಿಯನ್ನರು, ಮುಸ್ಲಿಮರಿಂದ ಭಾರತದಲ್ಲಿ ಸಾಕಷ್ಟು ವ್ಯಾಪಾರ ವಹಿವಾಟು ಆರಂಭವಾಯಿತು. ಅದೇ ರೀತಿ ಕ್ರಿಶ್ಚಿಯನ್ನರು ಭಾರತಕ್ಕೆ ಬಂದು ಸಾರ್ವಜನಿಕ ಶಾಲೆಗಳನ್ನು ತೆರೆದು, ಸ್ಥಳೀಯರಿಗೆ ಶಿಕ್ಷಣ ನೀಡಲು ಮುಂದಾದರು. ಇದರ ಮೂಲಕ ಮತಾಂತರಕ್ಕೂ ಪ್ರಯತ್ನಿಸಿದ್ದಾರೆ. ಕ್ರಿಶ್ಚಿಯನ್ನರು ಭಾರತಕ್ಕೆ ಬರದಿದ್ದರೆ, ಆಧುನಿಕ ಶಿಕ್ಷಣ ಪದ್ಧತಿ ಭಾರತೀಯರಿಗೆ ಪರಿಚಯವಾಗುತ್ತಿರಲಿಲ್ಲ ಎಂದರು.

ತದನಂತರ 7ನೇ ಶತಮಾನದಲ್ಲಿ ವೈದಿಕ ಪರಂಪರೆ ಕರಾವಳಿ ಜಿಲ್ಲೆಗಳಿಗೆ ಪರಿಚಯವಾಯಿತು. ಇದರ ಜೊತೆಗೆ ಉಡುಪಿಯ ಮಧ್ವಾಚಾರ್ಯರು ಅಷ್ಟಮಠಗಳನ್ನು ಸ್ಥಾಪಿಸಿ, ದ್ವೈತ ಸಿದ್ಧಾಂತ ಪ್ರತಿಪಾದಿಸಿದರೆ, ಶೃಂಗೇರಿಯಲ್ಲಿ ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪ್ರತಿಪಾದಿಸಿದ್ದಾರೆ. ಮೇಲುಕೋಟೆಯಲ್ಲಿ ರಾಮಾನುಚಾರ್ಯರು ನೆಲೆ ನಿಂತು ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಆಚಾರ್ಯತ್ರಯರು ಕರ್ನಾಟಕದಲ್ಲಿ ನೆಲೆ ನಿಂತು ವಿಶೇಷ ತರ್ಕಗಳ ಮೂಲಕ ದೇಶದ ಗಮನ ಸೆಳೆದಿದ್ದಾರೆ. ಅಲ್ಲದೆ, ಈ ಮೂರು ಸಿದ್ಧಾಂತಗಳು ಒಂದೊಂದು ತದ್ವಿರುದ್ಧವಾಗಿದ್ದು, ವೇದ–ಉಪನಿಷತ್‌ಗಳಿಂದ ತಯಾರಾಗಿದೆ ಎಂದ ಅವರು, ಮುಸ್ಲಿಮರು ವಿದೇಶಗಳಿಂದ ಕರಾವಳಿ ಪ್ರದೇಶಗಳಿಗೆ ಆಗಮಿಸಿ, ಇಂದು ಕರಾವಳಿ ಜಿಲ್ಲೆಯ ಹಗ್ಗದ ಮಾರುಕಟ್ಟೆ ಬೆಳೆದ ಪ್ರಸಂಗವನ್ನು ವಿವರಿಸಿದರು.

ಹೊರದೇಶದಿಂದ ಕ್ರಿಶ್ಚಿಯನ್ನರು ಭಾರತಕ್ಕೆ ಬಂದಿದ್ದರ ಫಲವಾಗಿ, ಸ್ಥಳೀಯರಿಗೆ ಶಿಕ್ಷಣ, ಆರೋಗ್ಯ, ಕೈಗಾರಿಕೆಗಳಲ್ಲಿ ಹೊಸಹೊಸ ಬದಲಾವಣೆ ಬಂದವು. ಅಲ್ಲದೆ, ಮುಸ್ಲಿಮರು ಭಾರತಕ್ಕೆ ಬಂದಿದ್ದರಿಂದ ಸಾಕಷ್ಟು ಕೈಗಾರಿಕೆ, ಕೃಷಿ ಪದಾರ್ಥಗಳು ಭಾರತಕ್ಕೆ ಬಂದಿವೆ. ಹೀಗೆ ವ್ಯಾಪಾರಕ್ಕೆ ಬಂದವರಲ್ಲಿ ಕೆಲವರು, ಇಲ್ಲಿನ ಹೆಣ್ಣು ಮಕ್ಕಳನ್ನು ಮದುವೆಯಾಗಿ ಸ್ಥಳೀಯರಾಗಿದ್ದಾರೆ. ಇದರಿಂದ ಕರಾವಳಿ ಜಿಲ್ಲೆಗಳಲ್ಲಿ ಮಲ್ಟಿ ಸಂಸ್ಕೃತಿಯ ಉದಯವಾಗಿದೆ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.8.2023 ಮಂಗಳವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023 ರಿಂದ 03.08.2023

ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಶ್ರೀ ವ್ಯಾಸರಾಜ ಮಠ, ಶ್ರೀ ವ್ಯಾಸತೀರ್ಥ ವಿದ್ಯಾಮಠ, ಕೃಷ್ಣಮೂರ್ತಿಪುರಂ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀ ವ್ಯಾಸರಾಜ ಮಠ, ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ರಿಂದ.
- **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಮೈಸೂರು ವಿಭಾಗ :** 63ನೇ ವಸಂತದ ಸಫಲಪೂರ್ಣ ಪಯಣ, ಸಂಸ್ಥಾಪನಾ ದಿನಾಚರಣೆ, ಸ್ಥಳ: ಮೈಸೂರು ನಗರ ಬಸ್ ನಿಲ್ದಾಣ, ಬೆಳಗ್ಗೆ.
- **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ :** ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ, ಉಪಸ್ಥಿತರು: ಅಧ್ಯಕ್ಷ ಜಿ.ನಂಜನಗೌಡ, ನಿರ್ದೇಶಕರಾದ ಎಸ್.ಕೆ. ಮಂಜುನಾಥ್, ಶ್ರೀಮತಿ ಭಾರತಿ ಜಿ. ಭಟ್, ಸ್ಥಳ: ಗ್ರೀನ್ ಹೆರಿಟೇಜ್ ಹೋಟೆಲ್ ಸಭಾಂಗಣ, ದಿವಾನ್ಸ್ ರಸ್ತೆ, ಬೆಳಗ್ಗೆ 10ಕ್ಕೆ.
- **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಬಸವ ಮಾರ್ಗ ಫೌಂಡೇಷನ್ :** ವ್ಯಸನಮುಕ್ತ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ, ಉದ್ಘಾಟನೆ: ಎಸ್. ಬಸವರಾಜ್, ಸ್ಥಳ: ಅಭಿಷೇಕ್ ಸರ್ಕಲ್, ಬೆಳಗ್ಗೆ 10.30 ರಿಂದ.
- **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–257, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಅಭಿಷೇಕ್ ರಘುರಾಂ ಅವರಿಂದ ಗಾಯನ, ವಿದ್ವಾನ್ ಆಲಂಕೋಡು ವಿ.ಎಸ್. ಗೋಕುಲ್–ವಯೋಲಿನ್, ವಿದ್ವಾನ್ ಡಾ. ಯೆಲ್ಲಾ ವೆಂಕಟೇಶ್ವರರಾವ್ –ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ಅಯೋಧ್ಯಾ ಕಾಂಡ–ವಿದ್ವಾನ್ ಶ್ರೀ ಶ್ರೀಕಾಂತಾಚಾರ್ಯ ಕಳಸಾಪುರ ಅವರಿಂದ. ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ. ಟಿ.ಎಸ್. ಗೋಪಾಲ್, 6.40 ಪದ ಸಂಸ್ಕೃತಿ ಪ್ರಸ್ತುತಿ–ಡಾ. ಶ್ರೀಧರ್ ಹೆಗಡೆ ಭದ್ರನ್, 7.15ಕಾದಂಬರಿ ವಿಹಾರ–ನಾ ಕಸ್ತೂರಿಯವರ ರಂಗನಾಯಕಿ ಕಾಂದಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್.ಎಸ್.ಎಸ್., 8.30 ಕರೆಗೊಂದು ಗೀತೆ, 9.05 ವಸುದೈವ ಕುಟುಂಬಕಂ–ಭಾರತ ಜಿ–20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಹೆಚ್.ಟಿ.ಹರೀಶ್–ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.00 ವನಿತಾ ವಿಹಾರ, 12.30 ದೇವರ ನಾಮ–ಎನ್.ಶ್ರೀನಾಥ್, 12.45 ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಗಳು–ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಖಜಾಂಚಿ ಶ್ರೀಶೈಲ ರಾಮಣ್ಣವರ್ ಅವರೊಡನೆ ಸಂದರ್ಶನ ಸಂದರ್ಶಕರು ದಿವಾಕರ ಹೆಗಡೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಕೃಪಾ ನಾಡಿಗ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎ.ಎಸ್.ಪದ್ಮಾ–ವೀಣಾವಾದನ, 4.00ಕಥಾ ಕಾಲಕ್ಷೇಪ –ಶ್ರೀರಾಮ ಪಟ್ಟಾಭಿಷೇಕ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ತೋಟಗಾರಿಕಾ ಬೆಳೆಗಳ ಬೇಸಾಯ ಕುರಿತು ಚಂದ್ರಶೇಖರಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 8.00 ಸಂಸದ್ ಸಮೀಕ್ಷಾ, 9.30 ಎನ್.ಆರ್.ಪ್ರಶಾಂತ್–ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 1 ಮಂಗಳವಾರ 2023

ಸಂಪುಟ: 44 | ಸಂಚಿಕೆ: 107 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅದ್ದೂರಿ ದಸರಾ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ನಿರ್ಧಾರ


TWITTER

ಅ.15ರಿಂದ 24ರವರೆಗೆ ಈ ಬಾರಿ ನವರಾತ್ರಿ ಉತ್ಸವ: 15ರ ಬೆಳಗ್ಗೆ 10.15ಕ್ಕೆ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಚಾಲನೆ

- ಹಳೆಯದ್ದಕ್ಕೆ ಅಂತ್ಯ ಹಾಡಿ ಉತ್ಸವದಲ್ಲಿ ಹೊಸತನವಿರಲಿ
- ನೀವು ಕೇಳಿದಷ್ಟು ಅನುದಾನ ನೀಡುತ್ತೇನೆ: ಸಿಎಂ
- ಈ ಬಾರಿ ಅದ್ದೂರಿತನ, ವಿಜೃಂಭಣೆಯಿಂದ ಆಚರಿಸಿ
- ರಾಜ್ಯದಲ್ಲಿ ಮಳೆಯಾಗಿ ಜನ ಸಂತೃಪ್ತರಾಗಿದ್ದಾರೆ
- ದೀಪಾಲಂಕಾರ, ಕಾರ್ಯಕ್ರಮಗಳಲ್ಲಿ ವಿಭಿನ್ನತೆ ಇರಲಿ
- ಯುವ ದಸರಾದಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಿ
- ಸ್ತಬ್ಧ ಚಿತ್ರದ ಮೂಲಕ ಗ್ಯಾರಂಟಿಗಳ ಬಿಂಬಿಸಲು ಸಲಹೆ

ಬೆಂಗಳೂರು, ಜು.31(ಕೆಎಂಶಿ)–ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಸಂಜೆ ನಡೆದ ದಸರಾ ಆಚರಣೆ ಕುರಿತ ಉನ್ನತಮಟ್ಟದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸ್ಥಳೀಯ ಜನಪ್ರತಿನಿಧಿಗಳ ಕೋರಿಕೆಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಈ ನಿರ್ಧಾರ ಕೈಗೊಂಡಿದ್ದಲ್ಲದೆ, ಇದಕ್ಕಾಗಿ ಎಷ್ಟೇ ಹಣ ಖರ್ಚಾದರೂ ಸರ್ಕಾರದಿಂದಲೇ ಭರಿಸುವ ಭರವಸೆ ನೀಡಿದ್ದಾರೆ. ಆದರೆ, ಸರ್ಕಾರ ನೀಡುವ ಹಣವನ್ನು ದುಂದುವೆಚ್ಚ ಮಾಡಬೇಡಿ. ಈ ಹಿಂದೆ ನಡೆದಿರುವ ನಾಡಹಬ್ಬಕ್ಕಿಂತ ಈ ಬಾರಿ ವಿಭಿನ್ನವಾಗಿರಲಿ. ಜತೆಗೆ ಅದ್ದೂರಿತನ ಮತ್ತು ವಿಜೃಂಭಣೆಯಿಂದ ಇರಲಿ ಎಂದು ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

ಕಳೆದ ಬಾರಿ ಮೈಸೂರು ದಸರಾಗೆ 33 ಕೋಟಿ ರೂ.ವೆಚ್ಚವಾಗಿದೆ. ಆದರೆ, ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಕಾರ್ಯಕಾರಿ ಸಮಿತಿ ಕೇಳುವಷ್ಟು ಹಣ ನೀಡುತ್ತೇನೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಅಕ್ಟೋಬರ್ 15ರಿಂದ 24ರವರೆಗೆ 10 ದಿನಗಳ ಕಾಲ ನಡೆಯುವ ನಾಡಹಬ್ಬ ದಸರಾವು ವಿಶ್ವಮಟ್ಟದಲ್ಲಿ ಪ್ರಖ್ಯಾತವಾಗಬೇಕು. ಅಂದು ಬೆಳಗ್ಗೆ 10.15 ಗಂಟೆಗೆ ಚಾಮುಂಡಿಬೆಟ್ಟದಲ್ಲಿ ನಾಡಿನ ಅಧಿದೇವತೆಗೆ ಪೂಜೆ ಸಲ್ಲಿಸಿ ದಸರಾಗೆ ಚಾಲನೆ ನೀಡಲಾಗುವುದು. ದಸರಾವನ್ನು ಯಾವ ಗಣ್ಯರಿಂದ ಉದ್ಘಾಟಿಸಬೇಕು ಎಂಬ ನಿರ್ಧಾರ ಕೈಗೊಳ್ಳುವುದನ್ನು ಸಭೆ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದೆ.

ಜನರ ಹಸನ್ಮುಖ ತೋರಿಸೋಣ: ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜನರು ಸಂತುಷ್ಟರಾಗಿದ್ದು, ಅವರ ಹಸನ್ಮುಖವನ್ನು ಉತ್ಸವದಲ್ಲಿ ತೋರಿಸೋಣ. ಇದಕ್ಕಾಗಿ ಮೈಸೂರು ನಗರವನ್ನು ಈ ಹಿಂದಿನ ದೀಪಾಲಂಕಾರಕ್ಕಿಂತ ವಿಭಿನ್ನ ಮತ್ತು ಆಕರ್ಷಣೀಯವಾಗಿರಬೇಕು ಎಂದು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದ್ದಾರೆ. ವಿದ್ಯುತ್ ದೀಪಾಲಂಕಾರದ ಜತೆಗೆ ಉದ್ಘಾಟನೆಯಂದೇ ವಸ್ತುಪ್ರದರ್ಶನದ ಮಳಿಗೆಗಳು ಆರಂಭಗೊಂಡು, ಸರ್ಕಾರದ ಯೋಜನೆ, ಕಾರ್ಯಕ್ರಮಗಳು ಬಿಂಬಿತವಾಗಬೇಕು. ರಾಜ್ಯ ಸರ್ಕಾರ ಜಾರಿಗೆ ತಂದಿರುವ 5 ಗ್ಯಾರಂಟಿ ಯೋಜನೆಗಳು ಹೆಚ್ಚಿ ಬಿಂಬಿತವಾಗುವಂತೆ ನೋಡಿಕೊಳ್ಳಿ, ಅಲ್ಲದೇ ಈ ಬಾರಿಯ ಸ್ತಬ್ಧ ಚಿತ್ರಗಳು ವೈವಿಧ್ಯಮಯವಾಗಿದ್ದು, ● 6ನೇ ಪುಟಕ್ಕೆ


ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ದಸರಾ ಉನ್ನತ ಮಟ್ಟದ ಸಭೆ ನಡೆಯಿತು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮೇಯರ್ ಶಿವಕುಮಾರ್, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಚಿತ್ರದಲ್ಲಿದ್ದಾರೆ.

ಉದ್ಘಾಟನೆಗೆ ಸುತ್ತೂರು ಶ್ರೀಗಳ ಹೆಸರು ಪ್ರಸ್ತಾಪಿಸಿದ ಶ್ರೀವತ್ಸ

ಮುಖ್ಯಮಂತ್ರಿಗಳ ಅಂತಿಮ ನಿರ್ಧಾರಕ್ಕೆ

● ಶ್ರೀರಂಗಪಟ್ಟಣ, ಚಾ.ನಗರದಲ್ಲೂ ಉತ್ಸವ ● ಏರ್ ಶೋಗೂ ಚಿಂತನೆ



ಬೆಂಗಳೂರು: ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ಸುತ್ತೂರು ಶ್ರೀಗಳ ಹೆಸರು ಪ್ರಸ್ತಾಪವಾಗಿದೆ. ಆದರೆ ಅಂತಿಮಗೊಳಿಸಿಲ್ಲ. ದಸರಾ ಉನ್ನತ ಮಟ್ಟದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯ ತಿಳಿಸಿದರು. ಸಭೆಯಲ್ಲಿ ಕೆಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ದಸರಾ ಉದ್ಘಾಟನೆಗೆ ಸುತ್ತೂರು ಶ್ರೀಗಳ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅದರ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಉದ್ಘಾಟಕರ ಆಯ್ಕೆಯ ಹೊಣೆಯನ್ನು ನನಗೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಕೆಲವರೊಂದಿಗೆ ಚರ್ಚಿಸಿ ಉದ್ಘಾಟಕರ ಹೆಸರನ್ನು ಅಂತಿಮಗೊಳಿಸಲಾಗುವುದು ಎಂದರು. ಮೈಸೂರು ಮಾತ್ರವಲ್ಲದೆ ಶ್ರೀರಂಗಪಟ್ಟಣ ಮತ್ತು ಚಾಮರಾಜನಗರದಲ್ಲೂ ದಸರಾ ಉತ್ಸವ ನಡೆಯಲಿದೆ. ಶಕ್ತಿ ಯೋಜನೆ ಜಾರಿಯಲ್ಲಿರುವುದರಿಂದ ರಾಜ್ಯಾದ್ಯಂತ ಮಹಿಳೆಯರು ದಸರೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಆಗಮಿಸುವ ಸಾಧ್ಯತೆ ಇರುವುದರಿಂದ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು. ಈ ಬಾರಿ ಮೈಸೂರು ನಗರ ಮಾತ್ರವಲ್ಲದೆ ಸುತ್ತಮುತ್ತಲ ಪ್ರದೇಶಗಳಲ್ಲೂ ಆಕರ್ಷಕ ದೀಪಾಲಂಕಾರ ಮಾಡಲಾಗುವುದು. ದಸರಾ ಉದ್ಘಾಟನೆಯ ದಿನದಿಂದ ದಸರಾ ಉತ್ಸವ ಮುಗಿದ ಒಂದು ವಾರದ ತನಕ ದೀಪಾಲಂಕಾರ ಇರಲಿದೆ ಈ ಬಾರಿ ಏರ್ ಶೋ ಆಯೋಜಿಸುವ ಬಗ್ಗೆ ಚಿಂತನೆ ನಡೆಸಲಾಗಿದ್ದು, ರಕ್ಷಣಾ ಸಚಿವ ರಾಜನಾಥಸಿಂಗ್ ಅವರೊಂದಿಗೆ ಮಾತನಾಡುವುದಾಗಿ ತಿಳಿಸಿದ್ದಾರೆ.

ದಸರಾ ಧಾರ್ಮಿಕ ಆಚರಣೆಗಳ ಪಟ್ಟಿ ಪ್ರಕಟ: ಸೆ.1ರಂದು ಗಜಪಡೆ ಆಗಮನ

ಮೈಸೂರು, ಜು.31(ಎಂಕೆ)–ನಾಡಹಬ್ಬ ಮೈಸೂರು ದಸರಾ ಮಹೋತ್ಸವ–2023ರ ಧಾರ್ಮಿಕ ಆಚರಣೆಗಳ ಪಟ್ಟಿ ಪ್ರಕಟವಾಗಿದ್ದು, ಅ.24 ರಂದು ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ನೆರವೇರಲಿದೆ. ಸೆ.15ರಂದು ಬೆಳಗ್ಗೆ 10.15 ರಿಂದ 10.36ರ ಶುಭ ವೃಶ್ಚಿಕ ಲಗ್ನದಲ್ಲಿ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ನಾಡಹಬ್ಬಕ್ಕೆ ಚಾಲನೆ ನೀಡಲಾಗುವುದು. ಸಂಜೆ 6.30 ರಿಂದ 7.15ರ ಶುಭ ಮೇಷ ಲಗ್ನದಲ್ಲಿ ಅರಮನೆಯಲ್ಲಿ ಪೂಜಾ ಕೈಂಕರ್ಯಗಳು ನಡೆಯಲಿವೆ.

ಅ.16ರಂದು ಬ್ರಹ್ಮಚಾರಿಣೀ, 17ರಂದು ಚಂದ್ರ ಘಂಟಾ, 18 ರಂದು ಕೂಷ್ಮಾಂಡಾ, 19 ರಂದು ಸ್ಕಂದ ಮಾತಾ, 20ರಂದು ಕಾತ್ಯಾಯಿನಿ ಮತ್ತು ಸರಸ್ವತಿ ಪೂಜೆ, 21 ರಂದು ಕಾಳರಾತ್ರಿ ಮತ್ತು ಮಹಿಷಾಸುರ ಸಂಹಾರ, 22ರಂದು ದುರ್ಗಾಷ್ಟಮಿ ಮತ್ತು ಸಿದ್ಧಿ ಧಾತ್ರಿ, 23 ರಂದು ಮಹಾನವಮಿ ಮತ್ತು ಆಯುಧ ಪೂಜೆ, ಗಜಾ ಶ್ವಾದಿ ಪೂಜೆ, ಹಯಗ್ರೀವ ಪೂಜೆ, ಅಮಲು ದೇವತಾ ಪೂಜೆ ಮತ್ತು ಮಹಾಗೌರಿ ಪೂಜೆ ನಡೆಯಲಿವೆ.

ಜಂಬೂಸವಾರಿ: ಅ.24ರ ವಿಜಯದಶಮಿ ದಿನದಂದು ಮಧ್ಯಾಹ್ನ 1.46 ರಿಂದ 2.08ರ ನಡುವಿನ ಮಕರ ಲಗ್ನದಲ್ಲಿ ಮುಖ್ಯಮಂತ್ರಿಗಳಿಂದ ನಂದಿಧ್ವಜ ಪೂಜೆ ಹಾಗೂ ಮಧ್ಯಾಹ್ನ 4.40ರಿಂದ 5 ಗಂಟೆ ನಡುವಿನ ಶುಭ ಮೀನ ಲಗ್ನದಲ್ಲಿ ಮುಖ್ಯಮಂತ್ರಿಗಳು ಹಾಗೂ ಇತರೆ ಗಣ್ಯರಿಂದ ಅಂಬಾರಿಗೆ ಪುಷ್ಪಾರ್ಚನೆ ನೆರವೇರುವ ಮೂಲಕ ವಿಶ್ವವಿಖ್ಯಾತ ಜಂಬೂಸವಾರಿ ಮೆರವಣಿಗೆ ಆರಂಭವಾಗಲಿದೆ. ಹಾಗೆಯೇ ಅ.26 ರಂದು ಚಾಮುಂಡಿಬೆಟ್ಟದಲ್ಲಿ ● 6ನೇ ಪುಟಕ್ಕೆ



ಬೆಂಗಳೂರು ವಿಮಾನ ನಿಲ್ದಾಣದಲ್ಲಿ ತೀವ್ರ ಹೃದಯಾಘಾತದಿಂದ ಡಾ.ಕೆ.ಭೈರಪ್ಪ ನಿಧನ

ಅಮೆರಿಕಾದಿಂದ ಮಗ–ಸೊಸೆ ಬಂದ ನಂತರ ಇಂದು ಇಲ್ಲವೆ ನಾಳೆ ಮೈಸೂರಲ್ಲಿ ಅಂತ್ಯಕ್ರಿಯೆ



ಮೈಸೂರು, ಜು.31(ಆರ್‌ಕೆ)– ತೀವ್ರ ಹೃದಯಾಘಾತದಿಂದ ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸಮ ಉಪಕುಲಪತಿ (Pro-Vice Chancellor), ಮೈಸೂರಿನ ಡಾ. ಕೆ.ಭೈರಪ್ಪ (69), ತೀವ್ರ ಹೃದಯಾಘಾತದಿಂದ ಸೋಮವಾರ ಮುಂಜಾನೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಧನರಾದರು. ಮೂಲತಃ ಮೈಸೂರಿನ ಪಡುವಾರಹಳ್ಳಿಯವರಾದ ಇವರು, ವಿಜಯನಗರ 3ನೇ ಹಂತದಲ್ಲಿ ವಾಸವಾಗಿದ್ದರು. ● 6ನೇ ಪುಟಕ್ಕೆ

ಒಂದು ಸಂತಸ; ಎರಡು ಸಂಕಟ

ಇಂದಿನಿಂದ ಗೃಹಜ್ಯೋತಿ ಉಚಿತ ವಿದ್ಯುತ್

ಹಾಲಿನ ದರ 3 ರೂ., ಹೋಟೆಲ್ ತಿಂಡಿ ಶೇ.10ರಷ್ಟು ಹೆಚ್ಚಳ

● ಉಚಿತ ವಿದ್ಯುತ್ ಜುಲೈನಲ್ಲೇ ಘೋಷಣೆಯಾದರೂ ಬಿಲ್ ಬರುವುದು ಆ.1ಕ್ಕೆ ● ಒಂದು ಲಕ್ಷ ಕುಟುಂಬಗಳಿಗೆ ಗೃಹಜ್ಯೋತಿಯ ಫಲ ● ಇದರೊಂದಿಗೆ ಕಾಂಗ್ರೆಸ್ ಸರ್ಕಾರದ 4ನೇ ಗ್ಯಾರಂಟಿ ಜಾರಿ



ಬೆಂಗಳೂರು, ಜು.31(ಕೆಎಂಶಿ)– ಆ.1ರಿಂದಲೇ ಗೃಹಜ್ಯೋತಿ ಯೋಜನೆಯಡಿ ಸುಮಾರು ಒಂದು ಲಕ್ಷ ಕುಟುಂಬಗಳಿಗೆ ಉಚಿತ ವಿದ್ಯುತ್ ಜಾರಿ ಮಾಡಿರುವ ಸರ್ಕಾರ, ಇದೇ ವೇಳೆ ನಂದಿನಿ ಹಾಲಿನ ಬೆಲೆಯನ್ನು ಪ್ರತಿ ಲೀಟರ್‌ಗೆ 3 ರೂ. ಹೆಚ್ಚಳ ಮಾಡಿದೆ.

ಹಾಲಿನ ದರ ಹಾಗೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಹಿನ್ನೆಲೆಯಲ್ಲಿ ಕರ್ನಾಟಕದ ಹೋಟೆಲ್ ಉದ್ಯಮ ಕಾಫಿ, ತಿಂಡಿಗಳ ಬೆಲೆಯನ್ನು ಶೇ.10ರಷ್ಟು ಹೆಚ್ಚಳ ಮಾಡಿದೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಗೃಹಜ್ಯೋತಿ ಸೇರಿದಂತೆ 5 ಗ್ಯಾರಂಟಿಗಳ ಅನುಷ್ಠಾನಕ್ಕೆ ಆದೇಶ ಹೊರಡಿಸಿತ್ತು.

200 ಯುನಿಟ್‌ಗಿಂತ ಕಡಿಮೆ ಬಳಕೆ ಮಾಡುವ ಗ್ರಾಹಕರಿಗೆ ಜುಲೈ ಒಂದರಿಂದಲೇ ಉಚಿತ ವಿದ್ಯುತ್ ಜಾರಿಯಾಗಿದ್ದರೂ ಈ ಮಾಸಿಕ ಬಿಲ್ ಆಗಸ್ಟ್ ಒಂದರ ನಂತರ ಗ್ರಾಹಕರಿಗೆ ತಲುಪಲಿದೆ. ಆಗಸ್ಟ್ ತಿಂಗಳಲ್ಲಿ ಉಚಿತ ವಿದ್ಯುತ್ ಪಡೆಯುವವರು ಜು.27 ರೊಳಗೆ ನೋಂದಣಿ ಮಾಡಿಕೊಳ್ಳುವಂತೆ ಸರ್ಕಾರ ಗ್ರಾಹಕರಿಗೆ ಸೂಚಿಸಿತ್ತು. ಅದರಂತೆ ಇದುವರೆಗೂ 1,23,10,788 ಕುಟುಂಬಗಳು ಅರ್ಜಿ ಸಲ್ಲಿಸಿದ್ದು, ಇದರಲ್ಲಿ ಶೇ.15 ರಷ್ಟು ಕುಟುಂಬಗಳ ಅರ್ಜಿಗಳು ತಿರಸ್ಕೃತಗೊಳ್ಳಲಿವೆ. ಮಾಸಿಕ 200 ಯುನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡುವವರು ಸಲ್ಲಿಸಿರುವ ಈ ಪ್ರಮಾಣದ ಅರ್ಜಿಗಳನ್ನು ಇಲಾಖೆ ತಿರಸ್ಕರಿಸಿ, ಸರ್ಕಾರ ನಿಗದಿಪಡಿಸಿದ ನಿಯಮಾನುಸಾರ 4 ಕೋಟಿ ಜನರಿಗೆ ಇದರ ಲಾಭ ನಾಳೆಯಿಂದ ದೊರೆಯಲಿದೆ.

ಈಗಾಗಲೇ ಭಾಗ್ಯ, ಕುಟೀರ ಸೇರಿದಂತೆ ವಿವಿಧ ಜ್ಯೋತಿಗಳಡಿ ಸರ್ಕಾರದ ಉಚಿತ ಸೌಲಭ್ಯ ಪಡೆಯುವವರು ಗೃಹ ಜ್ಯೋತಿ ಯೋಜನೆಗೆ ಸೇರಲಿದ್ದು, ಅವರಿಗೂ ಇದರ ಲಾಭ ದೊರೆಯಲಿದೆ.

ಜುಲೈ 20ರೊಳಗಾಗಿ ಅರ್ಜಿ ಸಲ್ಲಿಸದವರು ನಂತರದ ದಿನಗಳಲ್ಲಿ ಯೋಜನೆ ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅವರಿಗೆ ಸೆಪ್ಟೆಂಬರ್ ತಿಂಗಳಲ್ಲಿ ಇದರ ಲಾಭ ದೊರೆಯಲಿದೆ. ಗೃಹ ಜ್ಯೋತಿಗೆ ಅರ್ಜಿ ಸಲ್ಲಿಸಲು ಸರ್ಕಾರ ಗಡುವು ನೀಡಿಲ್ಲ. ● 9ನೇ ಪುಟಕ್ಕೆ

ಇಂದಿನಿಂದ ಎಲ್ಲಾ ವಿಧದ ಹಾಲು, ಮೊಸರು ಲೀಟರ್‌ಗೆ 3 ರೂ. ಹೆಚ್ಚಳ

ಬೆಂಗಳೂರು, ಜು.31(ಕೆಎಂಶಿ)– ನಂದಿನಿ ಬ್ರಾಂಡ್‌ನ ಎಲ್ಲಾ ಮಾದರಿಯ ಹಾಲು, ಮೊಸರು ಮಾರಾಟ ದರವನ್ನು ಪ್ರತಿ ಲೀಟರ್‌ಗೆ ಮೂರು ರೂ.ನಂತೆ ಹೆಚ್ಚಿಸಿ ಆದೇಶ ಹೊರಡಿಸಿದ್ದು, ಮಂಗಳವಾರ ಬೆಳಗ್ಗೆಯಿಂದಲೇ ಜಾರಿಗೆ ಬರಲಿದೆ.



ದರ ಹೆಚ್ಚಳದಿಂದ ಸಾಮಾನ್ಯ ಜನರು ಹೆಚ್ಚು ಬಳಸುವ ನೀಲಿ **ಪೊಟ್ಟಣದ ಟೋನ್ಡ್ ಹಾಲು ಲೀಟರ್‌ಗೆ 39ರಿಂದ 42 ರೂ., ಹೋಮೋಜಿನೈಜ್ಡ್ ಟೋನ್ಡ್ ಹಾಲು 40ರಿಂದ 43 ರೂ. ಹಸಿರು ಪೊಟ್ಟಣದ ಹಸುವಿನ ಹಾಲು 43ರಿಂದ 46 ರೂ, ಕೇಸರಿ ಪೊಟ್ಟಣದ ಶುಭಂ ವಿಶೇಷ ಹಾಲು 45ರಿಂದ 48 ರೂಗೆ ಹೆಚ್ಚಳವಾಗಿದೆ.**

ಮೊಸರು ಪ್ರತಿ ಕೆ.ಜಿಗೆ 47ರಿಂದ 50ರೂ. ಮಜ್ಜಿಗೆ ಪ್ರತಿ 200 ಮಿಲಿ ಪೊಟ್ಟಣಕ್ಕೆ 8ರಿಂದ 9 ರೂ. ಹೆಚ್ಚಳ ಮಾಡಲಾಗಿದೆ ಎಂದು ಕೆಎಂಎಫ್ ಅಧ್ಯಕ್ಷ ಭೀಮಾನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹಾಲು ಉತ್ಪಾದಕರು ಸಂಕಷ್ಟದಲ್ಲಿರುವುದರಿಂದ ಅವರಿಗೆ ನೆರವಾಗಲು ದರ ಹೆಚ್ಚಳ ಅನಿವಾರ್ಯ ಎಂದು ಸಮರ್ಥಿಸಿಕೊಂಡಿದ್ದಾರೆ. ನೆರೆ ರಾಜ್ಯಗಳ ಹಾಲಿಗೆ ಹೋಲಿಕೆ ಮಾಡಿದರೆ, ನಾವು ಅತ್ಯಂತ ಕಡಿಮೆ ದರದಲ್ಲೇ ನಾವು ಹಾಲು ಪೂರೈಕೆ ಮಾಡುತ್ತಿದ್ದೇವೆ ಎಂದಿದ್ದಾರೆ.

ಇಂದಿನಿಂದ ದ್ವಿಚಕ್ರ ವಾಹನ, ಆಟೋ, ಟ್ರ್ಯಾಕ್ಟರ್ ಸೇರಿ ಕೆಲ ವಾಹನಕ್ಕೆ ಎಕ್ಸ್‌ಪ್ರೆಸ್ ವೇನಲ್ಲಿ ನಿರ್ಬಂಧ




ಮೈಸೂರು, ಜು.31– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಲ್ಲಿ ನಾಳೆಯಿಂದ(ಆ.1) ದ್ವಿಚಕ್ರ ವಾಹನ, ಆಟೋ, ಟ್ರ್ಯಾಕ್ಟರ್ ಸೇರಿ ಕೆಲವು ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ.

ಈ ರಸ್ತೆಯಲ್ಲಿ ಅಪಘಾತಗಳನ್ನು ತಡೆಯುವ ನಿಟ್ಟಿನಲ್ಲಿ ನಿಧಾನಗತಿಯಿಂದ ಸಂಚರಿಸುವ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದ್ದು, ದ್ವಿಚಕ್ರ ವಾಹನ, ಆಟೋ, ಟ್ರ್ಯಾಕ್ಟರ್, ಇ–ಕಾರ್ಟ್, ಮೋಟಾರ್ ರಹಿತ ವಾಹನಗಳು, ಕೃಷಿ ಯಂತ್ರಗಳು, ಎಕ್ಸೆಲ್ ಹೈಡ್ರಾಲಿಕ್ ವಾಹನಗಳು, ಕ್ವಾಡ್ರಿ ಸೈಕಲ್‌ಗಳು ಈ ರಸ್ತೆಯಲ್ಲಿ ಸಂಚರಿಸುವಂತಿಲ್ಲ. ಈ ವಾಹನಗಳೆಲ್ಲವೂ ಸರ್ವಿಸ್ ರಸ್ತೆಯಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ. ನಿಯಮ ಉಲ್ಲಂಘಿಸಿ ಸದರಿ ವಾಹನಗಳು ಎಕ್ಸ್‌ಪ್ರೆಸ್ ವೇ ಪ್ರವೇಶಿಸಿದರೆ ಪೊಲೀಸ್ ಇಲಾಖೆ ದಂಡ ವಿಧಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹೆಬ್ಬಾಳಲ್ಲಿ ವ್ಯಕ್ತಿ ಕಣ್ಣಿಗೆ ಖಾರದಪುಡಿ ಎರಚಿ ನಗದು ದೋಚಿದ್ದ ಪ್ರಕರಣ

ಐವರು ಸೆಕ್ಯೂರಿಟಿ ಗಾರ್ಡ್‌ಗಳು ಪೊಲೀಸ್ ವಶಕ್ಕೆ

ಮೈಸೂರು, ಜು.31(ಆರ್‌ಕೆ)– ಮೈಸೂರಿನ ಹೆಬ್ಬಾಳು ಕೈಗಾರಿಕಾ ಬಡಾವಣೆಯ ಎಸ್‌ಬಿಐ ಎದುರು ಹಾಡಹಗಲೇ ಖಾಸಗಿ ಸಂಸ್ಥೆಯ ಬಿಲ್ ಕಲೆಕ್ಟರ್ ಕಣ್ಣಿಗೆ ಖಾರದಪುಡಿ ಎರಚಿ 6.05 ಲಕ್ಷ ರೂ. ಇದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದ ಪ್ರಕರಣವನ್ನು ಭೇದಿಸಿರುವ ಪೊಲೀಸರು ವಿವಿಧ ಅಪಾರ್ಟ್‌ಮೆಂಟ್‌ಗಳಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳಾಗಿ ಕೆಲಸ ಮಾಡುತ್ತಿದ್ದ ಐವರನ್ನು ವಶಕ್ಕೆ ಪಡೆದಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ ಜು.26 ರಂದು ಬೆಳಗ್ಗೆ 10.30ಕ್ಕೆ ದರಸಗುಪ್ಪೆ ಎಸ್‌ಎಸ್‌ಸಿ ಪ್ರೈವೇಟ್ ಲಿಮಿಟೆಡ್ ಬಿಲ್‌ಕಲೆಕ್ಟರ್ ತುಳಸಿದಾಸ್ ಎಂಬುವರಿಂದ 6.05 ಲಕ್ಷ ರೂ. ನಗದಿದ್ದ ಬ್ಯಾಗ್ ದೋಚಿ ಇಬ್ಬರು ದುಷ್ಕರ್ಮಿಗಳು ● 9ನೇ ಪುಟಕ್ಕೆ



ಬಡಾವಣೆ ಮಾಡಿ ಕೈಕೊಟ್ಟ ಡೆವಲಪರ್ಸ್: ಮೂಲಸೌಕರ್ಯಕ್ಕೆ ನಾಗರಿಕರು ಜಿಟಿಡಿ ಮೊರೆ

- ಬಡಾವಣೆಗಳ ಅಭಿವೃದ್ಧಿಗೆ ಕನಿಷ್ಠ 2 ಸಾವಿರ ಕೋಟಿ ಬೇಕು: ಜಿಟಿಡಿ
- ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಟ್ಟು 275 ಬಡಾವಣೆಗಳಿವೆ
- 175 ಬಡಾವಣೆಗಳಿಗೆ ಕನಿಷ್ಠ ಮೂಲಸೌಕರ್ಯವೂ ಇಲ್ಲ
- ಅಭಿವೃದ್ಧಿಗೆ ಸರ್ಕಾರ ಹಣ ನೀಡುತ್ತಿಲ್ಲ; ಗುತ್ತಿಗೆದಾರರು ಕಾಮಗಾರಿ ನಿಲ್ಲಿಸಿದ್ದಾರೆ
- ಅಭಿವೃದ್ಧಿಗೆ ಪರ್ಯಾಯ ಮಾರ್ಗದ ಚಿಂತನೆ

ಮೈಸೂರು, ಜು.31(ಬಿಎಲ್‌ಯು)– ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅಭಿವೃದ್ಧಿಗೊಂಡಿರುವ ನೂರಾರು ಬಡಾವಣೆಗಳಲ್ಲಿ ಮೂಲಸೌಕರ್ಯಗಳಿಲ್ಲದೆ ನಾಗರಿಕರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಬಡಾವಣೆ ನಿರ್ಮಿಸಿರುವ ಖಾಸಗಿ ಡೆವಲಪರ್ಸ್‌ಗಳು ಕನಿಷ್ಠ ಮೂಲಸೌಕರ್ಯ ಕಲ್ಪಿಸದೇ ನಿವೇಶನ ಮಾರಾಟ ಮಾಡಿ ನಾಪತ್ತೆಯಾಗಿದ್ದಾರೆ. ಲಕ್ಷಾಂತರ ರೂಪಾಯಿ ಕೊಟ್ಟು ನಿವೇಶನ ಖರೀದಿ ಮಾಡಿರುವ ನಾಗರಿಕರು, ಅಲ್ಲಿ ವಾಸ ಮಾಡಲು ಕಷ್ಟ ಪಡುತ್ತಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಇಂತಹ ಬಡಾವಣೆಗಳ ಸಮಗ್ರ ಅಭಿವೃದ್ಧಿಗೆ ಎರಡು ಸಾವಿರ ಕೋಟಿ ರೂ. ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ.

ಮೈಸೂರು ಸುತ್ತಲಿನ ಹಳ್ಳಿಗಳ ಜೊತೆಗೆ ನಗರದ ಹಲವು ನೂತನ ಬಡಾವಣೆಗಳು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುತ್ತವೆ. ಇಂತಹ ಬಡಾವಣೆಗಳಲ್ಲಿ ಮೂಲಸೌಕರ್ಯ ಕಲ್ಪಿಸಿಲ್ಲವೆಂದು ದೂರುತ್ತಿರುವ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಇಂದು ಬೋಗಾದಿ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಸಭೆ ● 9ನೇ ಪುಟಕ್ಕೆ


ಮೂಲಸೌಕರ್ಯವಿಲ್ಲದ ಖಾಸಗಿ ಬಡಾವಣೆ ನಿವಾಸಿಗಳ ಅಹವಾಲು ಆಲಿಸುತ್ತಿರುವ ಶಾಸಕ ಜಿ.ಟಿ.ದೇವೇಗೌಡ.

ಹೆಚ್.ಡಿ.ದೇವೇಗೌಡರು, ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರ ಬೀಳಿಸಲ್ಲ: ಜಿ.ಟಿ.ದೇವೇಗೌಡರ ಸ್ಪಷ್ಟನೆ

ಮೈಸೂರು, ಜು.31(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಹೆಚ್.ಡಿ. ದೇವೇಗೌಡರು ಅಥವಾ ಹೆಚ್.ಡಿ.ಕುಮಾರಸ್ವಾಮಿ ಬೀಳಿಸುವ ಪ್ರಯತ್ನ ಎಂದಿಗೂ ಮಾಡಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರು ಸ್ಪಷ್ಟಪಡಿಸಿದ್ದಾರೆ. ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ರಾಜ್ಯ ಸರ್ಕಾರದಲ್ಲಿ 137 ಕಾಂಗ್ರೆಸ್ ಶಾಸಕರಿದ್ದಾರೆ. ಹೀಗಿರುವಾಗ ಸರ್ಕಾರ ಬೀಳಿಸಲು ಸಾಧ್ಯವೆ? ಎಂದು ಪ್ರಶ್ನಿಸಿದರು.

ಹೆಚ್.ಡಿ.ದೇವೇಗೌಡರಾಗಲೀ ಅಥವಾ ಹೆಚ್.ಡಿ.ಕುಮಾರಸ್ವಾಮಿ ಅವರಾಗಲೀ ಕಾಂಗ್ರೆಸ್ ಸರ್ಕಾರ ಬೀಳಿಸಲು ಹೋಗುವುದಿಲ್ಲ. ಆದರೆ ಸರ್ಕಾರ ಹಳಿ ತಪ್ಪಿದಾಗ ಎಚ್ಚರಿಸುವ ಹಾಗೂ ಮಾರ್ಗದರ್ಶನ ಮಾಡುವ ಕೆಲಸ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ಅವರ ಹೋರಾಟಕ್ಕೆ ಸದಾ ನಮ್ಮ ಬೆಂಬಲವಿದೆ ಎಂದರು.

ರಾಜ್ಯ ಸರ್ಕಾರದ ಬಗ್ಗೆ ಜೆಡಿಎಸ್ ಹಾಗೂ ಬಿಜೆಪಿ ಶಾಸಕರಿಗೆ ಮಾತ್ರ ಅಸಮಾಧಾನವಿಲ್ಲ. ಕಾಂಗ್ರೆಸ್ ಶಾಸಕರಿಂದಲೂ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಈಗಾಗಲೇ ಅಸಮಾಧಾನಗೊಂಡ 30ಕ್ಕೂ ಹೆಚ್ಚು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಕೂಡ ಬರೆದಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು. ಅಭಿವೃದ್ಧಿ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಒಬ್ಬ : ಈ ಸಲಾನೂ ಎಲ್ಲಾ ಸಬ್ಜೆಕ್ಟ್ ಫೇಲು... ತುಂಬಾ ಬೇಜಾರಾಗ್ತಿದೆ.
ಇನ್ನೊಬ್ಬ : ಹೂ ಕಣೋ. ನಂದೂ ಅಷ್ಟೆ ಆತ್ಮಹತ್ಯೆ ಮಾಡ್ಕೊಂಡ್ ಬಿಡೋಣ್ವ?
ಮತ್ತೊಬ್ಬ : ಬೇಡಪ್ಪಾ... ಆಮೇಲೆ ಮುಂದಿನ ಜನ್ಮದಲ್ಲಿ ಮತ್ತೆ ಎಲ್‌ಕೆಜಿಯಿಂದ ಓದಬೇಕಾಗುತ್ತೆ...!

ಮೈಸೂರು ಮಿತ್ರ

ಮಂಗಳವಾರ, 1 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಮುಗ್ಧತೆ' ಹಾಗೂ 'ಆತ್ಮವಿಶ್ವಾಸ' ಜೀವನದಲ್ಲಿ ಇರಬೇಕಾದ ಎರಡು ಅಂಶಗಳು. ಇವುಗಳಿಂದ ಜೀವನದಲ್ಲಿ ಯಶಸ್ಸು ನಿಶ್ಚಿತ. – ಮಾರ್ಕ್‌ಟ್ವೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರೀತಿ ತಪ್ಪಿದರೂ ನೀತಿ ತಪ್ಪಬಾರದು

ನಿಮ್ಮ ಪತ್ರಗಳು

ಕಲಾಮಂದಿರದಲ್ಲಿ ಅಸಹ್ಯ ತ್ಯಾಜ್ಯ?



ಮಾನ್ಯರೆ,

ಭಾನುವಾರ (ಜು.30) ದಂದು ಸಂಜೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಪ್ರದರ್ಶನಗೊಂಡ ನಾಟಕವೊಂದನ್ನು ನೋಡಲು ಹೋದ ನಮಗೆ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಊಟ ಮಾಡಿ ಎಸೆದ ಸಾವಿರಾರು ಅಡಿಕೆ ಪಟ್ಟೆಯ ಹಾಳೆಗಳ ತಟ್ಟೆಗಳ ಅಸಹ್ಯ ತ್ಯಾಜ್ಯ ದರ್ಶನವಾಯಿತು.

ಕಲಾಮಂದಿರದ ಆವರಣದಲ್ಲಿ ಊಟ ಹಾಕಲು ನಿರ್ಬಂಧವಿದ್ದರೂ ಹೀಗೆ ಸಾವಿರಾರು ಎಲೆಗಳು ಬಂದದ್ದಾದರೂ ಹೇಗೆ? ಅಕಸ್ಮಾತ್ ಊಟ ಮಾಡಿದ್ದರೂ ಕಾರ್ಯಕ್ರಮದ ಆಯೋಜಕರಾಗಲೀ, ಕಲಾಮಂದಿರದ ಸಿಬ್ಬಂದಿಯಾಗಲೀ ಎಂಜಲು ತಟ್ಟೆಗಳನ್ನು ಕಲಾಮಂದಿರದ ಆವರಣದಿಂದ ತಕ್ಷಣ ತೆರವುಗೊಳಿಸದೇ ರಸ್ತೆಯಲ್ಲಿ ಬೇಕಾಬಿಟ್ಟಿ ಹರಡಿದ್ದಾದರೂ ಹೇಗೆಂಬ ಪ್ರಶ್ನೆಗೆ ಉತ್ತರ ಸಿಗಲಿಲ್ಲ.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಇನ್ನು ಮುಂದೆ ವಾಲ್ಮೀಕಿ ರಸ್ತೆಯಿಂದ ಹುಣಸೂರು ರಸ್ತೆಗೆ 'ಫ್ರೀ ಲೆಫ್ಟ್ ಟರ್ನ್'



ಮಾನ್ಯರೆ,

ನಗರದ ಪಡುವಾರಹಳ್ಳಿಯ ಮಹಾರಾಣಿ ಕಾಲೇಜಿನ ಮುಂಭಾಗದ ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯು ಹುಣಸೂರು ರಸ್ತೆಯ ಕೂಡುವಲ್ಲಿ ಈಗ ಸುರಕ್ಷಿತವಾಗಿ ಎಡಕ್ಕೆ ಚಲಿಸಬಹುದಾಗಿದೆ. ಇದು ದಶಕದ ಬೇಡಿಕೆ. ಇಲ್ಲಿ CFTRI ಕಾಂಪೌಂಡ್ ಗೋಡೆಗೆ ಹೊಂದಿಕೊಂಡಂತೆ ಮಸೀದಿಯವರಿಗೆ ಸೇರಿದ್ದೆಂದು ತಕರಾರು ಇತ್ತು. ಇದನ್ನು ಈ ಹಿಂದೆ ಶಾಸಕರಾಗಿದ್ದ ಎಲ್. ನಾಗೇಂದ್ರ ಅವರು, ಅವರಿಗೆ ಬೇರೆ ಜಾಗ ಕೊಡಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದ್ದರು. ಈಗ ರಸ್ತೆ ನಿರ್ಮಾಣವಾಗಿ ಡಾಂಬರೀಕರಣ ಕಾಮಗಾರಿ ನಡೆಯುತ್ತಿದೆ. ಪಡುವಾರಹಳ್ಳಿ, ಒಂಟಿಕೊಪ್ಪಲ್, ಗೋಕುಲಂ, ವಿ.ವಿ.ಮೊಹಲ್ಲಾ, ಕುಂಬಾರಕೊಪ್ಪಲು, ಹೆಬ್ಬಾಳು, ವಿಜಯನಗರ ಭಾಗದವರು ವಾಲ್ಮೀಕಿ ರಸ್ತೆಯ ಎಡಭಾಗದ ಮೂಲಕ ಸರಾಗವಾಗಿ ಹುಣಸೂರು ಮುಖ್ಯ ರಸ್ತೆಗೆ ಚಲಿಸಲು ವಾಹನ ಸವಾರರಿಗೆ ತುಂಬಾ ಅನುಕೂಲಕರವಾಗಿದೆ. ಇದರ ಮಧ್ಯೆ ಬೃಹತ್ ಮರಗಳ ಮಧ್ಯೆ ತಿರುವು ರಸ್ತೆ ಸಾಗಬೇಕಾಗಿದೆ. ಈ ಮರಗಳಿಂದ ಯಾವುದೇ ತೊಂದರೆ ಆಗುವುದಿಲ್ಲ. ಈ ಮರ ಕಡಿಯದೇ ನಗರಪಾಲಿಕೆ, ಸಂಚಾರಿ ಪೊಲೀಸ್ ಇಲಾಖೆಯವರು ಪರಿಸರ ಪ್ರೇಮ ಮೆರೆಯಲಿ.

–ಪಡುವಾರಹಳ್ಳಿಯ ಎಂ ರಾಮಕೃಷ್ಣ, ಮೈಸೂರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸುರಕ್ಷಿತವಾಗಿ ಸಂಚರಿಸೋಣ



ಮಾನ್ಯರೆ,

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ತಪ್ಪಿಸುವ ನಿಟ್ಟಿನಲ್ಲಿ ಕೆಲ ವಾಹನಗಳ ಸಂಚಾರ ನಿರ್ಬಂಧಿಸಿರುವುದು ಸೂಕ್ತ ಕ್ರಮವಾಗಿದೆ. ಆದರೆ ಸರ್ವೀಸ್ ರಸ್ತೆಯನ್ನು ಇನ್ನೂ ಅಚ್ಚುಕಟ್ಟಾಗಿ ರೂಪಿಸುವ ಅಗತ್ಯವಿದೆ. ಅಂಡರ್‌ಪಾಸ್ ಬಳಿ ಬಿಟ್ಟು ಉಳಿದೆಡೆ ಅನಗತ್ಯವಾಗಿರುವ ರಸ್ತೆ ಡುಬ್ಬ(ಹಂಪ್)ಗಳನ್ನು ತೆರವುಗೊಳಿಸುವುದು ಒಳ್ಳೆಯದು. ಹಾಗೆಯೇ ವಾಹನ ಚಾಲಕರು ಜಾಗರೂಕತೆ ವಹಿಸುವುದು ಬಹಳ ಮುಖ್ಯ. ಸರಿಯಾದ ಕ್ರಮದಲ್ಲಿ ವಾಹನ ಚಾಲನೆ ಮಾಡುವುದು ಅವಶ್ಯ.

ನಿತ್ಯವೂ ವಾಹನ ಚಾಲಕರಿಗೆ ಸುರಕ್ಷಾ ವಾಹನ ಚಾಲನೆ ಸಂಬಂಧ ಮನವರಿಕೆ ಮಾಡಿಕೊಡಲು ಸಾಧ್ಯವಿಲ್ಲ. ಅಜಾಗರೂಕತೆಯೇ ಅಪಘಾತಗಳಿಗೆ ಪ್ರಮುಖ ಕಾರಣ ಎನ್ನುವುದು ನೆನಪಿರಲಿ. ನುರಿತ ಚಾಲಕರಲ್ಲದಿದ್ದರೆ ಲೇನ್‌ನ ಎಡಭಾಗದಲ್ಲೇ ಚಾಲಿಸಿದರೆ ಯಾರಿಗೂ ತೊಂದರೆ ಇಲ್ಲ. ಹಲವರು ಡೋರ್ ಮೇಲೆ ಕೈಯಿಟ್ಟುಕೊಂಡು ಒಂದೇ ಕೈಯಲ್ಲಿ ಚಾಲನೆ ಮಾಡುತ್ತಾರೆ. ಕೆಲವರು ಸಿಗರೇಟು ಸೇದಿಕೊಂಡು, ಮೊಬೈಲ್‌ನಲ್ಲಿ ಮಾತನಾಡಿಕೊಂಡು, ಎಲ್ಲೋ ಗಮನವಿರಿಸಿಕೊಂಡು ವಾಹನ ಓಡಿಸುತ್ತಿರುತ್ತಾರೆ. ಇದು ತುಂಬಾ ಅಪಾಯಕಾರಿ. ಮೊಬೈಲ್ ಬಳಸುವ ಅನಿವಾರ್ಯತೆ ಉಂಟಾದರೆ ವಿಶಾಲವಾದ ಪ್ರದೇಶದ ಎಡಭಾಗದಲ್ಲಿ ವಾಹನ ನಿಲ್ಲಿಸಿಕೊಂಡರೆ ಎಲ್ಲರಿಗೂ ಕ್ಷೇಮ. ಸಂಚಾರಿ ನಿಯಮಗಳ ಪಾಲನೆಯೊಂದಿಗೆ ಜಾಗರೂಕತೆಯಿಂದ ಚಾಲನೆ ಮಾಡಿದರೆ ಅಪಘಾತಗಳು ಸಂಭವಿಸುವುದಕ್ಕೆ ಕಾರಣವೇ ಇಲ್ಲ. ವಾಹನ ಚಾಲನೆ ಮಾಡುವಾಗ ತಮ್ಮ ಕುಟುಂಬದವರನ್ನು ನೆನಪಿಸಿಕೊಳ್ಳಿ. ನಮ್ಮ ನಿರ್ಲಕ್ಷ್ಯದಿಂದ ಬೇರೆಯವರಿಗೆ ತೊಂದರೆಯಾಗಬಾರದು. ಮಹತ್ವಾಕಾಂಕ್ಷೆ ಎಕ್ಸ್‌ಪ್ರೆಸ್‌ವೇನಲ್ಲಿ ಸುರಕ್ಷಿತವಾಗಿ ಸಂಚರಿಸೋಣ ಎಂದು ವಾಹನ ಚಾಲಕರಲ್ಲಿ ವಿನಂತಿಸುತ್ತೇನೆ.


–ಎಂ.ಎಸ್.ನಂಜುಂಡಸ್ವಾಮಿ, ಚಾಲಕರು, ಆನಂದನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಜೀವದ ಸೆಲೆಯಲ್ಲಿ ಬಾಂಧವ್ಯ ಬೆಸೆಯುವ ಬೇಂದ್ರೆಯ ಮನದನ್ನೆ



ಬೇಂದ್ರೆ ಕನ್ನಡ ಸಾಹಿತ್ಯ ಲೋಕದಲ್ಲಿ ಅಚ್ಚಳಿಯದ ಹೆಸರು. ಬೆಂದರೆ ಬೇಂದ್ರೆಯಾದನೂ ಎಂಬುವಷ್ಟರ ಮಟ್ಟಿಗೆ ಅವರು ಬದುಕಿನುದ್ದಕ್ಕೂ ಸವಾಲುಗಳನ್ನು ಗೆದ್ದು ಬಂದಿದ್ದಾರೆ. ಇವರ ಕವನಗಳು ಒಂದಕ್ಕಿಂತ ಒಂದು ಭಿನ್ನವಾಗಿದೆ. ಸಾಮಾನ್ಯವಾಗಿ ಇವರ ಕವನಗಳನ್ನು ಪ್ರತಿ ಬಾರಿ ಓದಿದರೂ ಅರ್ಥ ಹೀಗಿರಬಹುದು ಎಂದು ಗ್ರಹಿಸುವಷ್ಟರ ಮಟ್ಟಿಗೆ ಶಬ್ದ ಪ್ರಯೋಗ ಮಾಡಿದ್ದಾರೆ. ಆದ್ದರಿಂದಲೇ ಶಬ್ದ ಗಾರುಡಿಗ ಎಂಬ ಮನ್ನಣೆಗೂ ಇವರು ಪಾತ್ರರಾಗಿದ್ದಾರೆ.

ದ.ರಾ.ಬೇಂದ್ರೆ ಅವರ ನಾದಲೀಲೆ ಎಂಬ ಕವನ ಸಂಕಲನದಲ್ಲಿರುವ ಮನದನ್ನೆ ಕವನ ದಂಪತಿಗಳ ನಡುವಿನ ಬಾಂಧವ್ಯ ಹೇಗಿರಬೇಕೆಂದು ತಿಳಿಸುವಂತಹ ಗೀತೆಯಾಗಿದೆ. ದಾಂಪತ್ಯ ಎಂದ ಮೇಲೆ ಕಲಹಗಳು ಸರ್ವೆಸಾಮಾನ್ಯ, ಆದರೆ ಅದು ತನ್ನ ಮಿತಿಯನ್ನು ಮೀರದಿದ್ದರೆ ಚೆನ್ನ. ಒಬ್ಬರು ಕೋಪ ಮಾಡಿಕೊಂಡಾಗ ಮತ್ತೊಬ್ಬರು ಶಾಂತಚಿತ್ತದಿಂದ ವರ್ತಿಸಿದರೆ ಒಳಿತು, ಇಲ್ಲದಿದ್ದರೆ ಸಂಸಾರವೆಂಬ ಹಡಗು ಮುಳುಗುವುದಂತು ಖಚಿತ.ಪ್ರಸ್ತುತ ಕವನದಲ್ಲಿ ಯಾವುದೋ ಕಾರಣಕ್ಕೆ ಗಂಡ ಹೆಂಡತಿ ನಡುವೆ ಜಗಳವಾಗಿದೆ. ಕೋಪಗೊಂಡಿರುವ ಮಡದಿಯನ್ನು ನಾನಾ ವಿಧದಲ್ಲಿ ಸಂತೈಸುವ ಗಂಡನ ಚಿತ್ರಣ ಇದರಲ್ಲಿದೆ.

ಆಡದಿರು ಮನದನ್ನೆ
ಎನಗೆ ಇದಿರಾಡದಿರು ।ಪಲ್ಲವಿ।

ಕವನದ ಪಲ್ಲವಿಯಲ್ಲಿಯೇ ತನ್ನ ಮಡದಿಗೆ ನನಗೆ ಇದಿರಾಡದಿರು ಎನ್ನುವ ಮೂಲಕ ನನ್ನ ಮಾತುಗಳಿಗೆ ಹಿಂತಿರುಗಿ ಮಾತನಾಡಬೇಡ ಎಂಬ ಎಚ್ಚರಿಕೆಯನ್ನು ಈ ಕವನದ ನಾಯಕ ನೀಡುತ್ತಿದ್ದಾನೆ. ಮೇಲ್ನೋಟಕ್ಕೆ ಇದು ಪುರುಷ ಪ್ರಧಾನತೆಯನ್ನು ಎತ್ತಿ ಹಿಡಿಯುವಂತೆ ಭಾಸವಾದರೂ ಮುಂದಿನ ಸಾಲುಗಳು ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸುವ ಗಂಡನಾಗಿ ಕವನದ ನಾಯಕ ಕಂಡುಬರುತ್ತಾನೆ

(1)

ವಾದಕ್ಕೆ ಬೇಸತ್ತು
ಮರ್ಮ ಘಾತಕೆ ಸತ್ತು
ಉಳಿದು ಬಂದೆ;
ಎಲ್ಲಿಹುದು ತಿಳಿವಳಿಕೆ
ಜೀವನದ ಸಲುವಳಿಕೆ'
ಎಂದು ತಳಮಳಿಸಿ ನೀರಡಿಸಿ ಬಂದೆ;
ಹೇಳುತಿರೆ 'ಹೂಂ' ಎನ್ನು
ಒರೆದು ನೋಡಿ ಹೊನ್ನು
ಹೊಳೆದ ಗೆರೆ ಬಣ್ಣಗಳ ತಿಳಿದು ತಿಳಿದು ನೋಡು
ಎದೆಯ ಆಳದ ಮಾತನಳೆದು ಆಡು;
ಹೀಗೆನಲು ಹಾಗೆಂದು
ಬೆಂದ ಹೆಣವನೆ ಕೊಂದು
ಭೂತಲೀಲೆಯಲೀಗ ತೊಡಗಬೇಡ;
ಅಡಗಿ ಅಡಕದೆ ಮನವ ಮಡಗಬೇಡ
ನಿನ್ನ ತಿಳಿವನು ಹಣಿಸು
ನಿನ್ನ ಹೊಟ್ಟೆಯನುಣಿಸು
ಇದಿರಾಡದಿರು ಗೆಳತಿ ನೀನು ಕೂಡ
ಹೃದಯವನು ರಣರಂಗ ಮಾಡಬೇಡ.

***

ನಮ್ಮಿಬ್ಬರ ನಡುವೆ ವಾದ ವಿವಾದಗಳು ಬೇಡವೆಂದು ವಾದಗಳಿಗೆ ಬೇಸತ್ತು ಮತ್ತೆ ಬದುಕಿನ ಮರ್ಮವನ್ನು ಅರಿತು ಬಂದಿರುವೆ ಎಂದು ಬಾಯಾರಿಕೆಯಾದಾಗ ನೀರನ್ನು ಹುಡುಕಿ ಬರುವವರಂತೆ ನಾನು ನಿನ್ನ ಸಾನ್ನಿಧ್ಯಕ್ಕಾಗಿ ಮರಳಿ ಬಂದಿರುವೆ, ನನ್ನನ್ನು ಸ್ವೀಕರಿಸು ಎಂದು ಪರಿ ಪರಿಯಾಗಿ ಕವನದ ನಾಯಕ ಕೇಳಿಕೊಳ್ಳುತ್ತಿದ್ದಾನೆ. ನಾನು ಹೇಳುವುದನ್ನು ಕೇಳು ಹೂಂ ಎನ್ನುತ್ತಿರು, ಚಿನ್ನವನ್ನು ಅಸಲಿಯೋ ನಕಲಿಯೋ ಎಂದು ಒರೆದು ನೋಡುವಂತೆ ನನ್ನ ಮನದಾಳದ ಮಾತನ್ನೊಮ್ಮೆ ಗಮನವಿಟ್ಟು ಕೇಳಿ ಅರ್ಥಮಾಡಿಕೊ ಎಂದು ಕೇಳಿಕೊಳ್ಳುತ್ತಿದ್ದಾನೆ. ಏನೋ ಕೆಟ್ಟಗಳಿಗೆಯಲ್ಲಿ ಆಡಿದ ಮಾತುಗಳನ್ನೇ ಮತ್ತೆ, ಮತ್ತೆ ನೆನಪಿಸಬೇಡ, ಸತ್ತಿರುವ ವಿಚಾರಗಳನ್ನು ಮತ್ತೆ ಕೆಣಕಬೇಡ, ಬೆಂದಿರುವ ಹೆಣವನ್ನೇ ಮತ್ತೆ ಕೊಂದು ಭೂತಲೀಲೆಯಲ್ಲಿ ತೊಡಗಬೇಡ ಅಂದರೆ ನಡೆದಿರುವ ಗಲಾಟೆಯನ್ನೇ ಮತ್ತೆ ಮತ್ತೆ ಆಡಿ ಕೆಣಕಬೇಡ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎನ್ನುವ ಹಾಗೆ ಏನೋ ವಿಷಮ ಗಳಿಗೆಯಲ್ಲಿ ಮಾತನಾಡಿರುವೆ, ಅದನ್ನೇ ನೆನಪಿಸಿಕೊಂಡು ಮನಸ್ಸಿನಲ್ಲಿಟ್ಟುಕೊಳ್ಳಬೇಡ, ಬೇಡದ ವಿಚಾರಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ಹೃದಯವನ್ನು ರಣರಂಗ ಮಾಡಬೇಡ ಎನ್ನುವುದರ ಮೂಲಕ ನಡೆದಿರುವ/ ಆಗಿ ಹೋದ ವಿಚಾರಗಳನ್ನು ನೆನಪಿಸಿಕೊಳ್ಳುವುದರಲ್ಲಿ ಯಾವುದೇ ಸುಖವಿಲ್ಲ ಅದನ್ನು ಮರೆತು ಬಿಡು, ನನ್ನ ತಪ್ಪನ್ನು ಕ್ಷಮಿಸು ಎಂಬ ಪಶ್ಚಾತ್ತಾಪದ ಮಾತುಗಳನ್ನು ಹೇಳುತ್ತಾ ಆಡಿದ ಮಾತಿಗಿಂತ ನಮ್ಮಿಬ್ಬರ ಬದುಕು, ನೆಮ್ಮದಿ, ಸಂತೋಷ ಮುಖ್ಯ, ಅದಕ್ಕಾಗಿ ಎಲ್ಲವನ್ನೂ ಮರೆತು ಬಿಡು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಗಂಡನ ಚಿತ್ರಣವನ್ನು ಗಮನಿಸಬಹುದು.

ಪ್ರಸ್ತುತ ದಿನಗಳಲ್ಲಿ ಈ ಪದ್ಯದ ಅವಶ್ಯಕತೆ ಇದೆ. ಏಕೆಂದರೆ ಒಂದು ಸಣ್ಣ ಮಾತಿಗೂ ಜಗಳ, ಮನಸ್ತಾಪ ಮಾಡಿಕೊಂಡು ಅದನ್ನು ವಿಚ್ಛೇದನದಹಂತಕ್ಕೆ ತೆಗೆದುಕೊಂಡು ಹೋಗುವಂತಹ ಜನರಿಗೆ ನೀತಿಪಾಠವನ್ನು ಹೇಳಿದಂತಿದೆ. ಸಂಸಾರ ಎಂಬ ಬಂಡಿ ಸರಿಯಾಗಿ ಸಾಗಬೇಕಾದರೆ ಗಂಡ – ಹೆಂಡತಿ ನಡುವೆ ಸಾಮರಸ್ಯ ಬಹು ಮುಖ್ಯ. ಮೂಗು ಇರುವವರೆಗೆ ನೆಗಡಿ ತಪ್ಪಿದ್ದಲ್ಲ, ಮನೆ ಇರುವವರೆಗೆ ಮಾತು ತಪ್ಪಿದ್ದಲ್ಲ ಎಂಬ ಗಾದೆಯಂತೆ ಸಂಸಾರದಲ್ಲಿ ಮಾತುಕತೆ, ಜಗಳ, ಮನಸ್ತಾಪ ಮಾಮೂಲಿ. ಆದರೆ ಅದನ್ನು ದೊಡ್ಡದು ಮಾಡದೆ ಅನುಸರಿಸಿಕೊಂಡು ಹೋದಾಗಲೇ ಸಂಸಾರಕ್ಕೊಂದು ಬೆಲೆ. ಎರಡು ಕೈ ಸೇರಿದರೆ ಚಪ್ಪಾಳೆ, ಎರಡು ಮನಸ್ಸುಗಳು ಪರಸ್ಪರ ಅರ್ಥಮಾಡಿಕೊಂಡು ಬದುಕಿದರೆ ಅದು ಸಂಸಾರ.ಬೇಂದ್ರೆ ಅವರ ಈ ಕವನ ಸಂಸಾರದಲ್ಲಿ ಸಾಮರಸ್ಯ ಮುಖ್ಯ ಎಂಬುದನ್ನು ತಿಳಿಸುತ್ತದೆ.

(2)

ವಾದಕ್ಕೆ ಪ್ರತಿವಾದ
ಸಾಕು ವಾದವಿವಾದ
ಜೀವ ಸಂವಾದಕ್ಕೆ ಹಸಿದು ಬಂದೆ
ನೀಡು ಸಿಪ್ಪೆಯ ಸುಲಿದು ತಿಳಲನೊಂದೆ
ಜೀವ ಜೀವಾಳದಲಿ
ಹೃದಯಾಂತರಾಳದಲಿ
ಇಳಿದು ನೋಡು
ಬಗೆಯ ಬಾನ್ ಬಯಲನ್ನು
ಅಳೆದು ನೋಡು.
ಹಚ್ಚಿ ರೆಕ್ಕೆಗೆ ರೆಕ್ಕೆ ಹಾರಿ ನೋಡು.
ಈಸಾಡು ತೇಲಾಡು ಮುಂದೋಡು ಮೇಲಾಡು
ಅಣಕ ಮೂದಲಿಕೆಯಲಿ ಕಟಕಬೇಡ
ಕೆನ್ನೀರ ಕೆಸರನ್ನು ಕಲಕಬೇಡ.

ಬೇರೆಯವರು ತಪ್ಪು ಮಾಡಿದಾಗ ನಾವು ನ್ಯಾಯಾಧೀಶರಂತೆ ತೀರ್ಪು ನೀಡುತ್ತೇವೆ, ಅದೇ ತಪ್ಪು ನಮ್ಮಿಂದ ನಡೆದರೆ ವಕೀಲರಂತೆ ವಾದ ಮಾಡುತ್ತೇವೆ. ಇಲ್ಲಿಯೂ ಅದನ್ನೇ ನಾಯಕ ಹೇಳುತ್ತಿದ್ದಾನೆ. ವಾದ, ಪ್ರತಿವಾದ, ವಿವಾದಗಳು ಸಾಕಿನ್ನು ಎನ್ನುವ ಮೂಲಕ ಜಗಳಕ್ಕೆ ತಿಲಾಂಜಲಿಯನ್ನಿಡಲು ಬಯಸಿದ್ದಾನೆ. ನಿನ್ನೊಲವಿನ ಸಾಂಗತ್ಯಕ್ಕೆ ಹಸಿದು ಬಂದಿರುವೆನು, ಸಿಪ್ಪೆಗಿಂತ ಹಣ್ಣಿನ ತಿರುಳು ಹೇಗೆ ರುಚಿಕರವೋ ಹಾಗೇ ನಮ್ಮಿಬ್ಬರ ನಡುವೆ ಪ್ರೀತಿ ಮುಖ್ಯ, ಆ ಪ್ರೀತಿ ನಿನಗೆ ಅರ್ಥವಾಗಬೇಕಾದರೆ ನನ್ನ ಹೃದಯಾಂತರಾಳದಲಿ ಇಳಿದು ನೋಡು, ಅಲ್ಲಿ ನಿನ್ನ ಬಗ್ಗೆ ನನಗಿರುವ ಆಕಾಶದಷ್ಟು ಪ್ರೀತಿಯನ್ನು ಅಳೆದು ನೋಡು. ಸಂಸಾರದ ರೆಕ್ಕೆಗೆ ಕೈಜೋಡಿಸಿ ಹಾರು, ಸಂಸಾರವೆಂಬ ಸಾಗರದಲ್ಲಿ ಈಜಾಡು, ತೇಲಾಡು, ಮುಂದೋಡು, ಮೇಲಾಡು ಎನ್ನುವ ಮೂಲಕ ಕ್ಷಣಿಕದ ಕೋಪದ ಮಾತುಗಳಿಗೆ ಬೇಸತ್ತು ಅದನ್ನೇ ಬೆಳೆಸದೆ ನಿನ್ನ ಮೇಲೆ ಬಾನಿನಷ್ಟು ಅಗಲವಾಗಿರುವ ಪ್ರೀತಿಯನ್ನು ಅರ್ಥಮಾಡಿಕೊ, ಆಗ ಸಂಸಾರದಲ್ಲಿ ಸಂತೋಷದಿಂದ ಇರಬಹುದು ಎಂದು ಸೂಚಿಸುತ್ತಾ ಹಿಂದೆ ಆಡಿರುವ ಮಾತನ್ನೇ ಅಣಕವಾಡಬೇಡೆಂದು, ಮನಸ್ತಾಪವನ್ನು ಮರೆತು ಬಿಡು ಎಂದು ಮಡದಿ ಮೇಲೆ ತನಗಿರುವ ಪ್ರೀತಿಯನ್ನು ಅರ್ಥಮಾಡಿ ಸಲು ಪ್ರಯತ್ನಪಡುತ್ತಿರುವ ಗಂಡನ ಚಿತ್ರಣ ಇದರಲ್ಲಿದೆ.

ಪ್ರೀತಿ ಎಲ್ಲಿರುವುದೋ ಅಲ್ಲಿ ಜಗಳವಿರುತ್ತದೆ. ಕೋಪದ ಹಿಂದಿರುವ ಭಾವವನ್ನು ಅರ್ಥಮಾಡಿಕೊಂಡರೆ ಬದುಕು ಸುಂದರ.

ವ್ಯಕ್ತಿ ಮುಖ್ಯ ಎಂದರೆ ಅವರಾಡಿದ ಮಾತನ್ನು ಮರೆಯಿರಿ ಮಾತೇ ಮುಖ್ಯ ಎಂದರೆ ವ್ಯಕ್ತಿಯನ್ನು ಮರೆಯಿರಿ.

ಇದರರ್ಥ ಕೋಪ, ಮನಸ್ತಾಪಗಳು ಕ್ಷಣಿಕವೇ ಹೊರತು ಅದೇ ಶಾಶ್ವತವಲ್ಲ. ಗಂಡ–ಹೆಂಡತಿ ಅಂದ ಮೇಲೆ ಪ್ರೀತಿ, ಸರಸ, ವಿರಸ, ಜಗಳ ಎಲ್ಲಾವೂ ಸರ್ವೆಸಾಮಾನ್ಯ ಕೋಪ ಇರುವ ಕಡೆ ಪ್ರೀತಿ ಇದ್ದೇ ಇರುತ್ತದೆ. ಈ ಸತ್ಯ ಅರಿತುಕೊಂಡಾಗ ಜಗಳ ಕಡಿಮೆಯಾಗಬಲ್ಲದು. ತಾಳ್ಮೆಯಿಂದ ವರ್ತಿಸಿದರೆ ದಾಂಪತ್ಯ ಸುಂದರವಾಗಿರುತ್ತದೆ. ನಡೆದು ಹೋದ ಕೆಟ್ಟ ಗಳಿಗೆಯನ್ನೇ ಮೆಲುಕು ಹಾಕುತ್ತಾ ದುಃಖಿಸುವ ಬದಲು ಸುಮಧುರ ಕ್ಷಣಗಳನ್ನು ನೆನಪಿಸಿಕೊಂಡರೆ ಆ ಬದುಕು ಮತ್ತಷ್ಟು ಮಗದಷ್ಟು ಸುಂದರವಾಗಿರಬಲ್ಲದು.

(3)

ಯುಗ ಯುಗದ ಕಣ್ಣೀರು
ಎದೆಯೊಳಿದೆ ಮುನ್ನೀರು
ಅದರ ತೆರೆಗಳ ತೆರೆದು ಮುಳುಗಿ ನೋಡು
ನೆಲೆಯಿರದ ನೆಲವನ್ನು ಬಗೆದು ನೋಡು,
ನಾಗಲೋಕದ ರತ್ನ–
ರಾಶಿ ತರುವ ಪ್ರಯತ್ನ
ವ್ಯರ್ಥ ಆಯಾಸದಲಿ ಮಾಡಬೇಡ
ನನ್ನದಿದು ನಿನ್ನದಿದು
ಎಂದು ಎರಡನು ಬಗೆದು
ಪಾಲುಗಾರಿಕೆಗಾಗಿ ಹೆಣಗಬೇಡ
ನೀನಗೆ ನೀರಿಲ್ಲೆಂದು ಒಣಗಬೇಡ.
ನಿನ್ನ ಮೈಸಿರಿಯೇನು?
ನನ್ನ ಐಸಿರಿಯೇನು?
ಒಂದುಸಿರೆ ತಾನಾಡಿದಂತೆ ಇಹುದು
ಹೀಗಿರಲು ಬಾಳುದ್ದ ಬದುಕಬಹುದು.
ಗಾಳಿಮಾತುಗಳೆಂದು, ಉಸಿರನೆಳೆದಾಡಿದರೆ
ಪ್ರಾಣವೇ ಬರಿ ಗಾಳಿಯಾಗಲಹುದು.

***

ನನ್ನ ಎದೆಯಾಳದಲ್ಲಿ ಕಡಲಿನಷ್ಟು ಆಳವಾದ ಪ್ರೇಮವಿದೆ. ಆ ಕಡಲಿನ ನೀರಿನ ತೆರೆಗಳ ತೆರದು, ಮುಳುಗಿ ನೋಡು ನನ್ನ ಪ್ರೀತಿಯ ತೀವ್ರತೆ ನಿನಗೆ ಅರ್ಥವಾಗುತ್ತದೆ ಎನ್ನುವ ಮೂಲಕ ಬಾಹ್ಯವಾಗಿ ತೋರುವ ಆಡಂಬರಗಳಿಗೆ ಒಳಗಾಗದೆ, ನನ್ನ ಎದೆಯಾಳದಲ್ಲಿ ನೆಲೆಯಿರದ ನೆಲವನ್ನು ಬಗೆದು ನೋಡು ಅಲ್ಲಿ ನಿನಗೆ ಬೆಲೆಕಟ್ಟಲಾಗದ ಪ್ರೀತಿ ದೊರೆಯಬಲ್ಲದು ಎಂದು ತಿಳಿ ಹೇಳುತ್ತಾ, ನಾವಿಬ್ಬರೂ ಒಂದೇ ಆಗಿರುವಾಗ ಇದು ನನ್ನದು, ಇದು ನಿನ್ನದು ಎಂಬ ಭೇದಭಾವವನ್ನು ಮಾಡಿ ಪಾಲುಗಾರಿಕೆಗಾಗಿ ಹೆಣಗಬೇಡ, ಕಡಲಿನಷ್ಟಿರುವ ಪ್ರೀತಿಯ ನೀರನ್ನು ಕಾಣದೆ ನೀರಿಲ್ಲವೆಂದು ಒಣಗಬೇಡ, ನಿನ್ನ ಸೌಂದರ್ಯ, ನನ್ನ ಶ್ರೀಮಂತಿಕೆ ಏನು ಶಾಶ್ವತವೇ? ನಮ್ಮಿಬ್ಬರ ದೇಹ ಬೇರೆಯಾದರೂ ಉಸಿರೊಂದೆ ಎಂಬಂತಿರುವುದು. ಬಾಳಿನ ಕೊನೆಯವರೆಗೂ ನಾವು ಹೀಗೆಯೇ ಬದುಕಬೇಕು, ಅದನ್ನು ಬಿಟ್ಟು ಇಲ್ಲದ ಗಾಳಿ ಸುದ್ದಿಯ ಮಾತುಗಳಿಗೆ ಉಸಿರನ್ನು ಎಳೆದಾಡಿದರೆ ಪ್ರಾಣವೇ ಬರಿ ಗಾಳಿಯಾಗಲಹುದು ಎನ್ನುವ ಮೂಲಕ ಗಾಳಿ ಸುದ್ದಿಗಳಿಗೆ ಕಿವಿಕೊಟ್ಟರೆ ಸಂಸಾರ ಹಾಳಾಗಬಹುದೆಂಬ ಎಚ್ಚರಿಕೆಯನ್ನು ಗಂಡ ತನ್ನ ಮಡದಿಗೆ ಬುದ್ಧಿ ಮಾತಿನ ರೂಪದಲ್ಲಿ ತಿಳಿಸುತ್ತಿದ್ದಾನೆ.

ಪ್ರಸ್ತುತ ದಿನಗಳಲ್ಲಿ ಬೇರೆಯವರು ಹೇಳಿದ ಚಾಡಿ ಮಾತುಗಳಿಗೆ ಕಿವಿಗೊಟ್ಟು ಉತ್ತಮ ಸಂಸಾರವನ್ನು ಹಾಳುಮಾಡಿಕೊಳ್ಳುವಂತಹವರಿಗೆ, ಚಿನ್ನ, ಬೆಳ್ಳಿ, ಮುತ್ತು, ರತ್ನ, ಆಸ್ತಿ, ಹಣಕಾಸುಗಳನ್ನು ಕೊಟ್ಟರೆ ಮಾತ್ರ ಪ್ರೀತಿ ಇಲ್ಲದಿದ್ದರೆ ಪ್ರೀತಿ, ಪ್ರೇಮವಾಗಲೀ ಇಲ್ಲ ಎಂದು ಭಾವಿಸುವಂತವವರಿಗೆ, ವಸ್ತುಗಳಿಗೆ ಅತಿ ಹೆಚ್ಚಿನ ಮೌಲ್ಯಗಳನ್ನು ನೀಡಿ ವ್ಯಕ್ತಿಗಳನ್ನು ಕಡೆಗಣಿಸುವಂತಹ ಜನರಿಗೆ ಸೂಚ್ಯವಾಗಿ ಸಂದೇಶವನ್ನು ರವಾನಿಸಿದಂತಿದೆ. ಗಂಡ–ಹೆಂಡತಿ ನಡುವೆ ಸಾಮರಸ್ಯ ಮರೆಯಾದರೆ ಎಲ್ಲವೂ ವ್ಯರ್ಥ. ಅದನ್ನೇ ಇಲ್ಲಿ ತಿಳಿಸಿದಂತಿದೆ. ಹೊಂದಾಣಿಕೆ ಸಂಸಾರಕ್ಕೆ ಮುಖ್ಯ ಎಂಬುದನ್ನು ತಿಳಿಸುವ ಮೂಲಕ ಏನೇ ಬಂದರೂ ಅರ್ಥವಾಡಿಕೊಂಡು ಜೀವಿಸಬಹುದೆಂಬ ಬದುಕಿನ ಸಾರವನ್ನು ತಿಳಿಸಿದಂತಿದೆ.

ಆಸ್ತಿ, ಹಣ ಎಲ್ಲವೂ ಇದ್ದು ಪ್ರೀತಿ ಇಲ್ಲದಿದ್ದರೆ, ಗಂಡ–ಹೆಂಡತಿ ನಡುವೆ ಸಾಮರಸ್ಯ ಮರೆಯಾದರೆ ಎಲ್ಲವೂ ವ್ಯರ್ಥ.ಅದನ್ನೇ ಇಲ್ಲಿ ತಿಳಿಸಿದಂತಿದೆ. ಹೊಂದಾಣಿಕೆ ಸಂಸಾರಕ್ಕೆ ಮುಖ್ಯ ಎಂಬುದನ್ನು ತಿಳಿಸುವ ಮೂಲಕ ಏನೇ ಬಂದರೂ ಅರ್ಥ ಮಾಡಿಕೊಂಡು ಜೀವಿಸಬಹುದೆಂಬ ಬದುಕಿನ ಸಾರವನ್ನು ತಿಳಿಸಿದಂತಿದೆ.

(4)

ಗಂಡು ದರ್ಪವ ಹರಿದು
ಬಿರುಸು ಬಿಂಕವ ತೊರೆದು
ತೋಳ ತೊಟ್ಟಿಲ ಮಗುವು ಆಗಿ ಬಂದೆ,
ಗೊಂಬೆಯಾಡಿಸಿದಂತೆ ಆಡಿಸೆಂದೆ.
ನಿನ್ನ ತಾಯ್ತನದ ಸೈರಣೆಯ ವಿತರಣೆ ಬೇಕು.
ನಿನ್ನ ತಾಳ್ಮೆಯ ಸೈಪಿನೊಂದು ಕರುಣೆಯು ಸಾಕು.
ಮಲಗಿರುವ ಹಾವನ್ನು
ಕೆಣಕಬೇಡ
ಕಚ್ಚಿ ವಿಷ ಕಾರಿದರೆ
ತಿಣಕಬೇಡ.

***

ಗಂಡಿಗೆ ಇರಬಹುದಾದ ದರ್ಪ,ಬಿರುಸು, ಬಿಂಕವನ್ನೆಲ್ಲಾ ತೊರೆದು,ನಿನ್ನ ತೋಳಿನಲ್ಲಿ ಆಡುವ ಮಗುವಿನಂತೆ ಬಂದಿರುವುದಾಗಿ ಹೇಳುತ್ತಾ, ಈ ಮಗುವನ್ನು ಗೊಂಬೆ ಆಡಿಸಿದಂತೆ ಬೇಕಿದ್ದರೆ ಆಡಿಸು, ನಿನ್ನ ತಾಯ್ತನದ ತಾಳ್ಮೆಯನ್ನು ನನ್ನ ಮೇಲೆ ತೋರಿಸು, ನಿನ್ನ ಕರುಣೆಯೊಂದೆ ಸಾಕೆಂದು ಇಡೀ ಮನಸ್ತಾಪಗಳಿಗೆ ತಿಲಾಂಜಲಿಯಿಡುವ ಪ್ರಯತ್ನ ಮಾಡಿದ್ದಾನೆ.ಮುಂದುವರೆದು ಕಡಿಮೆಯಾಗಿರುವ ಕೋಪವೆಂಬ ಹಾವನ್ನು ಮತ್ತೆ ಕೆಣಕಬೇಡ, ಕೆಣಕಿ ಆ ಕೋಪವೆಂಬ ಹಾವು ಕಚ್ಚಿ ವಿಷ ಕಾರಿದರೆ ತೊಂದರೆ ಎಂಬ ಎಚ್ಚರಿಕೆಯನ್ನು ನೀಡುತ್ತಿದ್ದಾನೆ.

ಶಾಂತರೀತಿಯಿಂದ ಬಂದಿರುವ ಗಂಡ ನಾನು ನಿನ್ನ ಮಗುವೆಂದು ಭಾವಿಸಿ ತನ್ನ ತಪ್ಪುಗಳನ್ನೆಲ್ಲಾ ಮನ್ನಿಸಬೇಕೆಂದು, ಬೇಕಿದ್ದರೆ ನನ್ನನ್ನು ಗೊಂಬೆಯಾಡಿಸಿದಂತೆ ಆಡಿಸೆಂದು, ತಾಯಿಯಾದವಳಿಗೆ ಇರುವಂತಹ ತಾಳ್ಮೆ, ಕರುಣೆ ನನ್ನ ಮೇಲೆ ತೋರು ಎನ್ನುವ ಮೂಲಕ ಗಂಡೆಂಬ ದರ್ಪವನ್ನು ತೊರೆದು ಬಂದಿರುವುದಾಗಿ ತಿಳಿಸುವ ಗುಣ ಮೆಚ್ಚುವಂತದ್ದು ಎನ್ನಬಹುದು. ತಾನಾಡಿದ ಮಾತನ್ನು ಮರೆತು ಬಿಡೆಂದು ತಿಳಿಹೇಳುತ್ತಾ ಹಳೆಯ ಘಟನೆಗಳನ್ನು ಕೆಣಕಿ ಮತ್ತೆ ಕೋಪಬರುವಂತೆ ಮಾಡಬೇಡ ಎಂಬ ಎಚ್ಚರಿಕೆ ನೀಡುತ್ತಿದ್ದಾನೆ. ಇಲ್ಲಿ ಗಂಡಿನ ದರ್ಪ ಕಾಣುವಂತೆ ಭಾಸವಾದರೂ ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲವೆಂಬಂತೆ, ಆಡಿದ ಮಾತನ್ನು ಬದಲಿಸಲು ಸಾಧ್ಯವಿಲ್ಲದಿರುವುದಿಂದ ಮಾಡಿದ ತಪ್ಪಿಗೆ ಮನ್ನಿಸು ಎಂದು ನಿನ್ನ ಕೈಗೊಂಬೆಯಾಗಿ ಆಡಿಸೆಂದು ತಿಳಿ ಹೇಳಿದರೂ ಕೇಳದೆ ಮತ್ತೆ ಹಳೆಯದನ್ನೇ ಕೆಣಕಿ ಮಾತಾಡಿದರೆ ಎಂತಹವರಿಗಾದರೂ ಕೋಪ ಬರುತ್ತದೆ ಎಂಬ ಭಾವ ಇಲ್ಲಿದೆ.

(5)

ನಗೆಯ ನಾಗಸ್ವರವ
ಅದರದೇ ತರ ತರವ
ಹಚ್ಚಿ ನೋಡು
ನನ್ನೆದೆಯ ಒಲೆದಾಟ
ನನ್ನ ತಲೆದೂಗಾಟ
ಮೆಚ್ಚಿ ನೋಡು.
ಸಿಡುಕಿರಲಿ ಮಿಡುಕಿರಲಿ
ಯಾವುದೇ ಒಡಕಿರಲಿ
ಅದರ ಸಪ್ಪಳವನ್ನ ಮಾಡಬೇಡ
ಹಾಳು ರಾಗವ ಮತ್ತೆ ಹಾಡಬೇಡ.
ಅದಕಾಗಿ ಜೀವದುಸಿರೆತ್ತಬೇಡ.

***

ನೋವಿಗೆ ಮುಲಾಮು ಎಂದರೆ ಅದು ನಗು. ಅಂತಹ ನಗೆಯ ನಾದಸ್ವರವ ಹಚ್ಚಿ ನೋಡು, ನನ್ನದೆಯ ಪ್ರೀತಿಯನ್ನು ಅರ್ಥಮಾಡಿಕೊಂಡು ನನ್ನನ್ನು ಮೆಚ್ಚಿ ನೋಡು, ಕೋಪ, ತಾಪ ಏನಿದ್ದರೂ ಅದರ ಶಬ್ದವನ್ನು ಮಾಡಬೇಡ, ಹೊಡೆದ ಕನ್ನಡಿಯನ್ನು ಹೇಗೆ ಸರಿಪಡಿಸಲು ಸಾಧ್ಯವಿಲ್ಲವೋ ಹಾಗೆ ಆಡಿರುವ ಮಾತನ್ನಾಗಲೀ, ಜಗಳವನ್ನಾಗಲೀ ಸರಿಪಡಿಸಲಾಗದಿರುವುದರಿಂದ ಮತ್ತೆ ಹಳೆಯದನ್ನೇ ಹಾಡಬೇಡೆಂದು ನಡೆದ ಘಟನೆಯನ್ನು ಮರೆತುಬಿಡು ಎಂದು ಹೇಳುವ ಮೂಲಕ ಮನಸ್ತಾಪಗಳಿಗೆ ಪೂರ್ಣವಿರಾಮ ಹಾಕಲು ಸಿದ್ಧನಾದ ಗಂಡನ ನಡವಳಿಕೆಯನ್ನು ಗಮನಿಸಬಹುದು.

ನಡೆದ ಘಟನೆಗಳನ್ನು ಮೆಲುಕು ಹಾಕಿಕೊಂಡು ದುಃಖಿಸುವ ಬದಲು ಅದನ್ನು ಮರೆತು ಮುಂದೆ ಸಾಗಿದರೆ ಬದುಕು ಸುಂದರವಾಗಿರಬಲ್ಲದು ಎಂಬುದನ್ನು ತಿಳಿ ಹೇಳಿದಂತಿದೆ.

(6)

ಹುಟ್ಟ ಹುಸಿನಗೆಯಲ್ಲಿ
ತಿಳಿದವರ ಬಗೆಯಲ್ಲಿ
ನನ್ನ ಜೀವನಕೆ ಬೆಳಕಿತ್ತು ನೋಡು.
ಮುನಿದರೂ ಕ್ಷಮಿಸುವೆನು
ಕೂಸಿನೊಲು ರಮಿಸುವೆನು
ಅಂಗೈ ಹುಣ್ಣಿನಾರೈಕೆ ಕೊಡುವೆ
ಕೂಸೆಂದು ಹುಡುಗನೊಲು ಮುತ್ತನಿಡುವೆ.
ನಿನ್ನ ಕಣ್ಣೀರ್ಮುತ್ತು
ನನ್ನ ಕೊರಳಿನ ಸುತ್ತು
ಆಭರಣವೆಂದು ಮೆರೆದಾಡುತಿರುವೆ
ಸ್ವರ್ಗ ನರಕಕ್ಕೆ ಕರೆದಲ್ಲಿ ಬರುವೆ.
ಇದಿರಾಡದಿರು ಮತ್ತೆ
ಎದಿರಾಡದಿರು ಇತ್ತ
ಮಾಡದಿರು ಬಾಳನ್ನು ಬೇಳೆಯಂತೆ
ಕೂಡಿರಲಿ ಬಾಳು ಇಡಿಗಾಳಿನಂತೆ.
ನಾನೆಂದರೂ ಒಂದೆ
ನೀನೆಂದರೂ ಒಂದೆ
ಹೊಂದುಗೂಡಿಕೆ ಇರದ ಜನಕೆ ನೊಂದೆ
ನೀನು ನನ್ನವಳೆಂದು ಬಳಿಗೆ ಬಂದೆ
ಹೊಸ ಹುಟ್ಟು ಬರುವದಿದೆ ಇನ್ನು ಮುಂದೆ
ಆಗೋಣ ಆ ಜಗದ ತಾಯಿತಂದೆ.

***

ಕತ್ತಲೆಯ ಬಾಳಿಗೆ ಬೆಳಕನ್ನು ನೀಡು, ನನ್ನ ಮನದಾಳದ ಪ್ರೀತಿಯನ್ನು ಅರಿತು ಬಾಳು, ಇಷ್ಟಾದರೂ ನನ್ನ ಮೇಲೆ ನಿನಗೆ ಕೋಪ ತೋರಿದರೂ ನಾ ನಿನ್ನ ಕ್ಷಮಿಸುವೆನು, ಮಗುವಿನಂತೆ ನಿನ್ನ ರಮಿಸುವೆನು, ಅಂಗೈ ಹುಣ್ಣಿನಾರೈಕೆ ಕೊಡುವೆ ಅಂದರೆ ಕಣ್ಣಿಗೆ ಕಾಣುವಂತೆ ಆಗಿರುವ ಗಾಯಕ್ಕೆ ಮುಲಾಮು ನೀಡುವೆ, ಮಗುವಿನಂತೆ ಮುತ್ತನಿಡುವೆ ಮಕ್ಕಳು ಏನೇ ತಪ್ಪು ಮಾಡಿದರೂ ತಾಯಿಯಾದವಳು ಮಗುವನ್ನು ಮನ್ನಿಸುವಂತೆ ನನ್ನ ಮನ್ನಿಸೆಂದು, ನಿನ್ನ ಕಣ್ಣಿಂದ ಬೀಳುವ ಆ ಕಣ್ಣೀರು ಅದು ಕೇವಲ ನೀರಲ್ಲ, ಅದು ಕಣ್ಣೀರ ಮುತ್ತು, ಮತ್ತೆ ಆ ಕಣ್ಣೀರು ಬಾರದಂತೆ ಮಾಡುವೆ, ಈಗ ಬಂದಿರುವ ಕಣ್ಣೀರ ಮುತ್ತನ್ನು ಆಭರಣವೆಂದು ಮೆರೆದಾಡುವೆ ಎಂದೂ, ಸ್ವರ್ಗ–ನರಕ ಎಲ್ಲಿಗೆ ಕರೆದರೂ ಬರುವೆನೆಂದು ಅಂದರೆ ಕಷ್ಟ–ಸುಖ ಏನೇ ಬಂದರೂ ಜೊತೆಗಿರುವೆನೆಂದು ತಿಳಿಸುವ ಮೂಲಕ ನಿನ್ನನ್ನು ಬಿಟ್ಟಿರಲಾರೆನೆಂಬ ಭರವಸೆಯ ನುಡಿಗಳನ್ನಾಡುತ್ತಿದ್ದಾನೆ.

ಇಷ್ಟು ಹೇಳಿದ ನಂತರವೂ ಮತ್ತೆ ಎದಿರಾಡದಿರು, ಮಾಡದಿರು ಬಾಳನ್ನು ಬೇಳೆಯಂತೆ ಕೂಡಿರಲಿ ಬಾಳು ಇಡಿಗಾಳಿನಂತೆ

ಇಲ್ಲಿ ಗಂಡ ಹೆಂಡತಿ ಬೇಳೆಯಂತೆ ಬೇರೆಯಾಗಬಾರದೆಂದು ಇಡಿಗಾಳಿನಂತೆ ಕೂಡಿರಬೇಕೆಂದು ಹೇಳುವ ಮೂಲಕ ಕೂಡಿ ಬಾಳಿದರೆ ಹಿತ ಎಂಬ ಸಂದೇಶವನ್ನು ಪರಿಣಾಮಕಾರಿಯಾಗಿ ತಿಳಿಸಿದ್ದಾರೆ.

ಬೆಂಗಳೂರಲ್ಲಿ 5ನೇ ವಿಶ್ವ ಕಾಫಿ ಸಮ್ಮೇಳನ: ರೋಹನ್ ಬೋಪಣ್ಣ ರಾಯಭಾರಿ!

ಬೆಂಗಳೂರು: ಭಾರತವು ಇದೇ ಮೊದಲ ಬಾರಿಗೆ 'ವಿಶ್ವ ಕಾಫಿ ಸಮ್ಮೇಳನವನ್ನು (ಡಬ್ಲ್ಯುಸಿಸಿ) ಆಯೋಜಿಸುತ್ತಿದ್ದು, ಅದರ 5ನೇ ಆವೃತ್ತಿಯನ್ನು ಇಂಟರ್‌ನ್ಯಾಷನಲ್ ಕಾಫಿ ಸಂಸ್ಥೆಯು (ಐಸಿಒ) ಬೆಂಗಳೂರಿನಲ್ಲಿ ಸೆಪ್ಟೆಂಬರ್ 25ರಿಂದ 28ರವರೆಗೆ ಆಯೋಜಿಸುತ್ತಿದೆ. ಐಸಿಒ ಎಂಬುದು ಕಾಫಿ ವ್ಯಾಪಾರವನ್ನು ಉತ್ತೇಜಿಸಲು ಮತ್ತು ಕಾಫಿ ಉತ್ಪಾದಿಸುವ ಮತ್ತು ಸೇವಿಸುವ ರಾಷ್ಟ್ರಗಳ ನಡುವೆ ಸಹಕಾರವನ್ನು ಉತ್ತೇಜಿಸಲು ಮೀಸಲಾಗಿರುವ ಪ್ರಾಥಮಿಕ ಅಂತರ ಸರ್ಕಾರಿ ಸಂಸ್ಥೆಯಾಗಿದೆ. ಬೆಂಗಳೂರಿನಲ್ಲಿ ನಡೆದ ಡಬ್ಲ್ಯುಸಿಸಿ 2023ರ ಪೂರ್ವವೀಕ್ಷಣೆ ಸಮಾರಂಭದಲ್ಲಿ ಕಾರ್ಯಕ್ರಮದ ಲೋಗೋವನ್ನು ಸೋಮವಾರ ಅನಾವರಣಗೊಳಿಸಲಾಯಿತು. ಟೆನಿಸ್ ಆಟಗಾರ ರೋಹನ್ ಬೋಪಣ್ಣ ಕಾರ್ಯಕ್ರಮದ ಬ್ರಾಂಡ್ ಅಂಬಾಸಿಡರ್ ಆಗಿರುತ್ತಾರೆ ಎಂದು ಕಾಫಿ ಬೋರ್ಡ್ ಆಫ್ ಇಂಡಿಯಾ ಸಿಇಒ ಮತ್ತು ಕಾರ್ಯದರ್ಶಿ ಕೆ.ಜಿ.ಜಗದೀಶ ಘೋಷಿಸಿದರು.



ಐಸಿಒ ಭಾರತದ ಕಾಫಿ ಮಂಡಳಿ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಡಬ್ಲ್ಯುಸಿಸಿ (2023) ಅನ್ನು ಏಷ್ಯಾದಲ್ಲಿ ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸಲಾಗುತ್ತಿದೆ. ಇದು ಭಾರತದ ಕಾಫಿ ರೈತರಿಗೆ ಅಪಾರ ಪ್ರಯೋಜನಗಳನ್ನು ತರಲು ಸಿದ್ಧವಾಗಿದೆ. ಭಾರತದ ಕಾಫಿಯನ್ನು ಜಾಗತಿಕ ವೇದಿಕೆಯಲ್ಲಿ ಪ್ರಚಾರ ಮಾಡುವ ಮೂಲಕ, ಈ ಕಾರ್ಯಕ್ರಮವು ರೈತರಿಗೆ ಹೊಸ ಅವಕಾಶಗಳು ಮತ್ತು ಮಾರುಕಟ್ಟೆಗಳನ್ನು ಸೃಷ್ಟಿಸುತ್ತದೆ ಎಂದರು. ಸರ್ಕ್ಯುಲರ್ ಆರ್ಥಿಕತೆ ಮತ್ತು ಪುನರುತ್ಪಾದಕ ಕೃಷಿಯ ಮೂಲಕ ಸುಸ್ಥಿರತೆ ಎಂಬುದು ಕಾರ್ಯಕ್ರಮದ ಪ್ರಮುಖ ವಿಷಯ. ಕಾರ್ಯಕ್ರಮದಲ್ಲಿ ಸಮ್ಮೇಳನಗಳು, ಪ್ರದರ್ಶನಗಳು, ಕೌಶಲ್ಯ–ನಿರ್ಮಾಣ ಕಾರ್ಯಾಗಾರಗಳು, ಸಿಇಒಗಳು ಮತ್ತು ಜಾಗತಿಕ ನಾಯಕರ ವೇದಿಕೆ ಮತ್ತು ಬೆಳೆಗಾರರ ಸಮಾವೇಶವನ್ನು ಒಳಗೊಂಡಿರುತ್ತದೆ. ಡಬ್ಲ್ಯುಸಿಸಿ 2023 ರಲ್ಲಿ 80ಕ್ಕೂ ಅಧಿಕ ದೇಶಗಳ ನಿರ್ಮಾಪಕರು, ಕ್ಯೂರ್‌ಗಳು, ರೋಸ್ಟರ್‌ಗಳು, ರಫ್ತುದಾರರು, ನೀತಿ ತಯಾರಕರು ಮತ್ತು ಸಂಶೋಧಕರು ಭಾಗವಹಿಸುವ ನಿರೀಕ್ಷೆಯಿದೆ. ಡಬ್ಲ್ಯುಸಿಸಿಯ ಹಿಂದಿನ ಆವೃತ್ತಿಗಳು ಇಂಗ್ಲೆಂಡ್ (2001), ಬ್ರೆಜಿಲ್ (2005), ಗ್ವಾಟೆಮಾಲಾ (2010) ಮತ್ತು ಇಥಿಯೋಪಿಯಾ (2016)ದಲ್ಲಿ ನಡೆದಿದ್ದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಮಂಗಳವಾರ 1 ಆಗಸ್ಟ್ 2023

ಆ.13, ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ



ಮೈಸೂರು,ಜು.31(ಪಿಎಂ)– ಅಂತರ್ ದೃಷ್ಟಿ ಬ್ರೈನ್ ಅಕಾಡೆಮಿ, ಪರಮಹಂಸ ಯೋಗ ಮಹಾವಿದ್ಯಾಲಯ ಹಾಗೂ ಮೈಸೂರು ಯೋಗ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆ.13ರಂದು 76ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಶಾಲಾ ಮಕ್ಕಳಿಗೆ ಪ್ರಕೃತಿಗೆ ಸಂಬಂಧಿಸಿದ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಒಕ್ಕೂಟದ ಉಪಾಧ್ಯಕ್ಷ ಶಿವಪ್ರಕಾಶ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10ಕ್ಕೆ ಮೈಸೂರಿನ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದ ಆವರಣದಲ್ಲಿ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. 1ರಿಂದ 4ನೇ ತರಗತಿ, 5ರಿಂದ 7ನೇ ತರಗತಿ ಮತ್ತು 8ರಿಂದ 10ನೇ ತರಗತಿವರೆಗೆ ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದರು.

ಪ್ರತಿ ವಿಭಾಗದಲ್ಲೂ ಪ್ರಥಮ ಸ್ಥಾನಕ್ಕೆ ಚಿನ್ನದ ಪದಕ, ದ್ವಿತೀಯ ಸ್ಥಾನಕ್ಕೆ ಬೆಳ್ಳಿ ಪದಕ, ತೃತೀಯ ಸ್ಥಾನದಿಂದ 6ನೇ ಸ್ಥಾನದವರೆಗೂ ಕಂಚಿನ ಪದಕಗಳನ್ನು ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರವೇಶ ಉಚಿತವಿದೆ. ಆ.10ರೊಳಗೆ ನೋಂದಣಿ ಮಾಡಿಕೊಳ್ಳಬೇಕಿದ್ದು, ಹೆಚ್ಚಿನ ಮಾಹಿತಿಗೆ ಮೊ.ಸಂ. 90355 06790 ಸಂಪರ್ಕಿಸಬಹುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಯೋಗ ಮಹಾವಿದ್ಯಾಲಯದ 6ನೇ ಇಂದ್ರಿಯ ಜಾಗೃತಗೊಳಿಸುವ ಕೋರ್ಸ್‌ನ 14ನೇ ಬ್ಯಾಚಿನ ಉದ್ಘಾಟನಾ ಸಮಾರಂಭವೂ ನಡೆಯಲಿದೆ. ಶಾಸಕ ಟಿ.ಎಸ್.ಶ್ರೀವತ್ಸ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್, ಕಾರ್ಯಾಧ್ಯಕ್ಷ ಬಿ.ಶಾಂತರಾಂ, ಪ್ರಧಾನ ಕಾರ್ಯದರ್ಶಿ ಕೆ.ಜಿ.ದೇವರಾಜ್, ಕಾರ್ಯದರ್ಶಿ ಡಾ.ಬಿ.ಪಿ.ಮೂರ್ತಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.31– 2023–24ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ ಮತ್ತು ಬಾಲಕಿ ವಿದ್ಯಾರ್ಥಿ ನಿಲಯಗಳ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, ಪ.ಜಾತಿ/ಪ.ವರ್ಗ ಮತ್ತು ಇತರೆ ವಿವಿಧ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಂದ https://shp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗಾಗಿ https://bcwd.karnataka.gov.in ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ದೂ.ಸಂ: 0821–2445447 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd. hostels @karnataka.gov.in ಗೆ ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲೂಕು ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲ್ವೆ ಯೋಜನೆ, ಹೊಸ ರೈಲು, ದೂರಸಂಪರ್ಕ ಟವರ್ ಅಳವಡಿಕೆಗೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್‌ಗೆ ಸಂಸದ ಪ್ರತಾಪ್ ಸಿಂಹ ಮನವಿ

●ನವದೆಹಲಿಯಲ್ಲಿ ಭೇಟಿಯಾದ ಸಂಸದರು ●ತಮಿಳುನಾಡಿನ ರಾಮೇಶ್ವರಂಗೆ ರೈಲು ಆರಂಭಕ್ಕೆ ಮನವಿ ●ಬೆಂಗಳೂರು–ಮುಂಬೈ ಉದ್ಯಾನ್ ಎಕ್ಸ್‌ಪ್ರೆಸ್ ಮೈಸೂರಿಗೆ ವಿಸ್ತರಿಸಿ



ಮೈಸೂರು: ನನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳು, ಹೊಸ ರೈಲು ಹಾಗೂ ರೈಲುಗಳ ವಿಸ್ತರಣೆ, ದೂರಸಂಪರ್ಕ ಟವರ್‌ಗಳ ಅಳವಡಿಕೆಗೆ ಆದ್ಯತೆ ನೀಡಬೇಕೆಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರು ಕೇಂದ್ರ ರೈಲ್ವೆ, ಸಂವಹನ, ಎಲೆಕ್ಟ್ರಾನಿಕ್ಸ್, ಐಟಿ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ರೈಲ್ವೆ, ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿದ ಸಂಸದರು ಮೈಸೂರು, ಕೊಡಗು ಜಿಲ್ಲೆಯಲ್ಲಿನ ಯೋಜನೆಗಳ ಕುರಿತು ಮನವಿ ಸಲ್ಲಿಸಿದರು.

ರಾಮೇಶ್ವರಂಗೆ ರೈಲು: ದಕ್ಷಿಣ ಭಾರತದ ಎರಡು ಪ್ರಮುಖ ಪ್ರವಾಸಿ, ಧಾರ್ಮಿಕ ತಾಣಗಳಾದ ಮೈಸೂರು ಮತ್ತು ರಾಮೇಶ್ವರಂ ನಡುವೆ ಸಂಪರ್ಕ ಕಲ್ಪಿಸಲು ಹೊಸ ರೈಲು ಆರಂಭಿಸುವಂತೆ ಕೇಂದ್ರ ರೈಲ್ವೆ ಸಚಿವರಿಗೆ ಸಂಸದರು ಮನವಿ ಮಾಡಿದ್ದಾರೆ.

ಈ ರೈಲು ಆರಂಭದಿಂದ ಉಭಯ ತಾಣಗಳಲ್ಲಿ ಧಾರ್ಮಿಕ ಪ್ರವಾಸೋದ್ಯಮ, ಆಧ್ಯಾತ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದಂತೆ ಆಗುತ್ತದೆ ಹಾಗೂ ಉಭಯ ನಗರಗಳ ಯಾತ್ರಿಗಳಿಗೆ ನೆರವಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮುಂಬೈ ಉದ್ಯಾನ್ ಎಕ್ಸ್‌ಪ್ರೆಸ್ ವಿಸ್ತರಣೆ: ಬೆಂಗಳೂರು–ಮುಂಬೈ ನಡುವಿನ ಉದ್ಯಾನ್ ಡೈಲಿ ಎಕ್ಸ್‌ಪ್ರೆಸ್ ರೈಲನ್ನು ಮೈಸೂರಿನವರೆಗೆ ವಿಸ್ತರಿಸಬೇಕೆಂದು ಮನವಿ ಮಾಡಲಾಗಿದೆ. ಕರ್ನಾಟಕದಲ್ಲಿ ಮೈಸೂರು ಈಗ ಬೆಂಗಳೂರು ನಂತರ ಐಟಿ ಹಬ್ ಹಾಗೂ ಸ್ಟಾರ್ಟ್ ಅಪ್ ಹಬ್ ಆಗಿ ಹೊರಹೊಮ್ಮುತ್ತಿದೆ. ಮೈಸೂರಿನಲ್ಲೀಗ ದೇಶದ ಮೊದಲ ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ಘಟಕ ಕೂಡ ಆರಂಭವಾಗಲಿದೆ. ಬೃಹತ್ ಜವಳಿ ಪಾರ್ಕ್‌ನಿಂದ ಸಾವಿರಾರು ಉದ್ಯೋಗ ಸೃಷ್ಟಿಯಾಗಲಿದೆ. ಈಗ ಬೆಂಗಳೂರು–ಮೈಸೂರು ನಡುವೆ ಎಕ್ಸ್‌ಪ್ರೆಸ್ ವೇ ಇದೆ. ಮೈಸೂರು ವಿಮಾನ ನಿಲ್ದಾಣ ಮೇಲ್ದರ್ಜೆಗೇರಿ ಇನ್ನಷ್ಟು ವಿಸ್ತರಣೆಯಾಗುತ್ತಿದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಕಾರ್ಮಿಕರಿಗೆ ಅವಕಾಶಗಳು ಹೆಚ್ಚು ಇರುವ ಹಿನ್ನೆಲೆಯಲ್ಲಿ ಮಹಾರಾಷ್ಟ್ರ, ಗುಜರಾತ್‌ನವರಿಗೆ ಅನುಕೂಲವಾಗಲು ಬೆಂಗಳೂರು–ಮುಂಬೈ ಉದ್ಯಾನ್ ಡೈಲಿ ಎಕ್ಸ್‌ಪ್ರೆಸ್ ರೈಲನ್ನು ಮೈಸೂರಿನವರೆಗೆ ವಿಸ್ತರಣೆ ಮಾಡಬೇಕು ಎಂದು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ.

ಬಾರ್ಮೇರ್ ರೈಲು: ಯಶವಂತಪುರ–ಬಾರ್ಮೇರ್–ಯಶವಂತಪುರ ಎಸಿ ಎಕ್ಸ್‌ಪ್ರೆಸ್ ರೈಲನ್ನು ಮೈಸೂರಿನವರೆಗೆ ವಿಸ್ತರಿಸಬೇಕು ಎಂದು ಮನವಿ ಸಲ್ಲಿಸಲಾಗಿದೆ. ಇದರಿಂದ ಬಾದಾಮಿ, ಹುಬ್ಬಳ್ಳಿ, ಬಾಗಲಕೋಟೆ, ಸೋಲಾಪುರ, ಪುಣೆ, ಸೂರತ್, ಅಹಮದಾಬಾದ್ ಹಾಗೂ ಇತರೆ ಊರುಗಳ ಜತೆ ಮೈಸೂರು ಸಂಪರ್ಕ ಸಾಧ್ಯವಾಗಲಿದೆ. ಮೈಸೂರಲ್ಲಿ ರಾಜಸ್ಥಾನ ಮೂಲದ ಹೆಚ್ಚು ಮಂದಿ ಇದ್ದಾರೆ. ಇವರಿಗೆ ಹಾಗೂ ಪ್ರವಾಸಿ, ಧಾರ್ಮಿಕ ತಾಣಗಳಿಗೆ ತೆರಳಲು ಇಚ್ಛಿಸುವವರಿಗೆ ಈ ರೈಲು ನೆರವಾಗಲಿದೆ ಎಂದು ವಿವರಿಸಲಾಗಿದೆ.

ಮಂಗಳೂರು–ಕಾರವಾರ ರೈಲು: ಮಂಗಳೂರು–ಮೈಸೂರು ನಡುವಿನ ರೈಲು ಸಂಚಾರವನ್ನು ಕಾರವಾರದವರೆಗೆ ವಿಸ್ತರಿಸಬೇಕೆಂದು ಮನವಿ ಮಾಡಲಾಗಿದೆ. ಇದರಿಂದ ಮಂಗಳೂರು–ಮಣಿಪಾಲ್‌ನಲ್ಲಿ ಶಿಕ್ಷಣ ಪಡೆಯುವವರಿಗೆ ಹಾಗೂ ಸುಬ್ರಹ್ಮಣ್ಯ, ಉಡುಪಿ, ಬೈಂದೂರು–ಕೊಲ್ಲೂರು ಮೂಕಾಂಬಿಕಾ, ಮುರುಡೇಶ್ವರ, ಗೋಕರ್ಣ ಹಾಗೂ ಗೋವಾಗೆ (ಕಾರವಾರದಿಂದ ಮಡಗಾಂವ್‌ಗೆ 60 ಕಿಲೋ ಮೀಟರ್) ತೆರಳುವ ಪ್ರವಾಸಿಗರಿಗೆ ಅನುಕೂಲವಾಗಲಿದೆ. ಅಲ್ಲದೇ ಈ ರೈಲಿನಿಂದಾಗಿ ಮಹಿಳೆಯರು, ಹಿರಿಯ ನಾಗರಿಕರು ಘಾಟ್ ರಸ್ತೆಗಳಲ್ಲಿ ಪ್ರಯಾಣ ಮಾಡುವುದು ತಪ್ಪುತ್ತದೆ. ಸುರಕ್ಷಿತ ಪ್ರಯಾಣಕ್ಕೆ ಆದ್ಯತೆ ನೀಡಿದಂತಾಗುತ್ತದೆ ಎಂದು ರೈಲ್ವೆ ಸಚಿವರಿಗೆ ನೀಡಲಾದ ಮನವಿ ಪತ್ರದಲ್ಲಿ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ನಂದಿ ಎಕ್ಸ್‌ಪ್ರೆಸ್ ನಾಮಕರಣ: ಈ ಹಿಂದೆ ಮೈಸೂರು–ಬೆಂಗಳೂರು ನಡುವೆ ಮೀಟರ್ ಗೇಜ್ ಹಳಿ ಇತ್ತು. ಅದನ್ನೀಗ ಬ್ರಾಡ್‌ಗೇಜ್ ಮಾಡಲಾಗಿದೆ. ಆಗ ಸಂಚರಿಸುತ್ತಿದ್ದ ರೈಲಿಗೆ ನಂದಿ ಎಕ್ಸ್‌ಪ್ರೆಸ್ ಎಂದು ಹೆಸರಿಡಲಾಗಿತ್ತು. ಕಾಲ ನಂತರ ಅದನ್ನು ರದ್ದುಪಡಿಸಿ ಹೊಸ ರೈಲು ಪರಿಚಯಿಸಲಾಯಿತು. ಈ ಹೆಸರಿನೊಂದಿಗೆ (ನಂದಿ ಎಕ್ಸ್‌ಪ್ರೆಸ್) ಮೈಸೂರು–ಬೆಂಗಳೂರು ಸೇರಿದಂತೆ ರಾಜ್ಯದ ಜನ ಭಾವನಾತ್ಮಕ ನಂಟು ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಹಾಲಿ ಇರುವ ಮೈಸೂರು–ಎಂಜಿಆರ್ ಚೆನ್ನೈ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿಗೆ "ನಂದಿ ಎಕ್ಸ್‌ಪ್ರೆಸ್" ಎಂದು ಮರು ನಾಮಕರಣ ಮಾಡಿ, ಜನರ ಭಾವನೆಗಳಿಗೆ ಸ್ಪಂದಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದ್ದಾರೆ. ಬಹುತೇಕ ಎಲ್ಲ ಮನವಿಗಳಿಗೆ ಕೇಂದ್ರ ಸಚಿವರು ಸಕಾರಾತ್ಮಕ ರೀತಿಯಲ್ಲಿ ಸ್ಪಂದಿಸಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ದೂರ ಸಂಪರ್ಕ ಟವರ್ ಅಳವಡಿಸಿ

4ಜಿ ಸ್ಯಾಚುರೇಷನ್ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ ದೂರ ಸಂಪರ್ಕ ಜಾಲವಿಲ್ಲದ ಗ್ರಾಮಗಳಿಗೆ ದೂರ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಹೊಸದಾದ ಟವರ್‌ಗಳು ಹಾಗೂ ಅಗತ್ಯವಿರುವ ಬ್ಯಾಟರಿಗಳಿಗೆ ಅನುಮೋದನೆ ನೀಡುವಂತೆ ಇದೇ ಸಂದರ್ಭದಲ್ಲಿ ಸಚಿವರಿಗೆ ಸಂಸದರು ಮನವಿ ಸಲ್ಲಿಸಿದರು.

ಜೋಡಿ ಹಳಿ ನಿರ್ಮಿಸಿ

ಮೈಸೂರಿನಲ್ಲಿ ಅಶೋಕಪುರಂ ರೈಲ್ವೆ ನಿಲ್ದಾಣ 2ನೇ ಅತಿ ದೊಡ್ಡ ರೈಲ್ವೆ ನಿಲ್ದಾಣವಾಗಿ ಹೊರಹೊಮ್ಮುತ್ತಿದೆ. ಈ ನಿಟ್ಟಿನಲ್ಲಿ ಮೈಸೂರು ಜಂಕ್ಷನ್ ಹಾಗೂ ಅಶೋಕಪುರಂ ನಡುವೆ ಜೋಡಿ ಹಳಿ ನಿರ್ಮಾಣ ಮಾಡಲು ಅನುಮತಿ ನೀಡಬೇಕೆಂದು ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ. ಮೈಸೂರು ಮುಖ್ಯ ರೈಲ್ವೆ ನಿಲ್ದಾಣ–ಅಶೋಕಪುರಂ ರೈಲ್ವೆ ನಿಲ್ದಾಣದ ನಡುವಿನ 5 ಕಿ.ಮೀ.ಗೆ ಹೆಚ್ಚುವರಿ ರೈಲ್ವೆ ಟ್ರ್ಯಾಕ್ ಅನ್ನು ತ್ವರಿತವಾಗಿ ಮಂಜೂರು ಮಾಡುವಂತೆ ರೈಲ್ವೆ ಸಚಿವರಿಗೆ ಮನವರಿಕೆ ಮಾಡಿಕೊಡಲಾಗಿದೆ.

ರೀ ಅಲೈನ್‌ಮೆಂಟ್‌ಗೆ ಸಂಸದರ ಮನವಿ

ಮೈಸೂರು ವಿಮಾನ ನಿಲ್ದಾಣ ಬಳಿ ಅಳವಡಿಸಲು ಉದ್ದೇಶಿಸಲಾಗಿದ್ದ ಮೈಸೂರು–ಚಾಮರಾಜನಗರ ಮಾರ್ಗದಲ್ಲಿ ಕೆಲವು ಸಮಸ್ಯೆ ಎದುರಾಗಿದೆ. ಈ ಮಾರ್ಗದಿಂದ ವಿಮಾನ ನಿಲ್ದಾಣದ ರಾಡಾರ್‌ಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಇಂಟರ್‌ಫೆರೆನ್ಸ್ ಸಮಸ್ಯೆ ಉಂಟಾಗುವುದರಿಂದ 900 ಮೀಟರ್ ಮಾರ್ಗದಲ್ಲಿ ಮಾರ್ಗ ಅಳವಡಿಕೆಗೆ ವಿಮಾನ ನಿಲ್ದಾಣ ಪ್ರಾಧಿಕಾರ ಆಕ್ಷೇಪಿಸಿದೆ. ಈ ನಿಟ್ಟಿನಲ್ಲಿ ಮಾರ್ಗದಲ್ಲಿ ರೀ ಅಲೈನ್‌ಮೆಂಟ್ ಮಾಡಲು ಅವಕಾಶ ಕಲ್ಪಿಸಿದರೆ ವಿಮಾನ ನಿಲ್ದಾಣ ರಾಡಾರ್ ವ್ಯಾಪ್ತಿಗೆ ತೊಂದರೆಯಾಗುವುದಿಲ್ಲ. ರೈಲ್ವೆ ಮಾರ್ಗ ಹಾಗೂ ವಿಮಾನ ನಿಲ್ದಾಣಗಳ ಸುಸಲಲಿತ ಕಾರ್ಯಾಚರಣೆಗೆ ಅನುಕೂಲವಾಗಲಿದೆ ಎಂದು ಸಂಸದರು ಮನವಿ ಪತ್ರದಲ್ಲಿ ವಿವರಿಸಿದ್ದಾರೆ.

ನಕ್ಷಾ ಹೊಂಡಾ ಶೋರೂಂನ 15ನೇ ವಾರ್ಷಿಕೋತ್ಸವ



ಮೈಸೂರು, ಜು.31– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಉದ್ಯಮಿ ಎಂ.ಡಿ.ಹರೀಶ್‌ಕುಮಾರ್ ಹೆಗಡೆ, ಅಭಿಷೇಕ್ ಹೆಗಡೆ ಮತ್ತು ಅಭಿಜಿತ್ ಹೆಗಡೆ ಮಾಲೀಕತ್ವದ ನಕ್ಷಾ ಹೊಂಡಾ ಶೋರೂಂನ 5ನೇ ವಾರ್ಷಿಕೋತ್ಸವ ಅದ್ಧೂರಿಯಾಗಿ ಆಚರಿಸಲಾಯಿತು.

ಇದೇ ವೇಳೆ ಹೊಂಡಾ ಕಂಪನಿಯ ಹೊಸ ಬೈಕ್ ಶೈನ್–100 ಅನ್ನು ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಾದ ಮಂಜುಳಾ ಚೆಲ್ಲೂರ್, ಸರ್ಕಾರಿ ಅಭಿಯೋಜಕರಾದ ಚಿನ್ನಪ್ಪ, ಹಿರಿಯ ವಕೀಲರೂ ಆದ 'ಲಾಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಂಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಡಿವೈಎಸ್‌ಪಿ ಧರ್ಮೇಂದ್ರ, ನರಸಿಂಹರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್, ಹಿರಿಯ ಪತ್ರಕರ್ತ ಎಂ.ಬಿ.ಮರಮ್‌ಕಲ್, ಕಾರ್ಪೊರೇಟರ್ ಲೋಕೇಶ್ ಪಿಯಾ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು. ಇದೇ ವೇಳೆ ಶೋರೂಂನ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.



ಮೈಸೂರು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಕನ್ನೇಗೌಡನಕೊಪ್ಪಲು ಸಿದ್ದಪ್ಪಾಜಿ ಧರ್ಮದರ್ಶಿಗಳ ಸಮಿತಿ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಗೋಪಾಲಕರ ಸಂಘದ ಉಪಾಧ್ಯಕ್ಷ ಎಂ.ಮೊಗಣ್ಣ, ಬಸಪ್ಪ, ರಂಗಪ್ಪ, ಬೋರಲಿಂಗು, ಸಣ್ಣೇಗೌಡ, ಟಿ.ರವಿಗೌಡ, ತಿಮ್ಮೇಗೌಡ, ರಾಜಣ್ಣ, ಸತೀಶ, ರಾಜಕುಮಾರ್, ಸಂತು ಇನ್ನಿತರರಿದ್ದರು.

ಮೊಹರಂ ದಿನ: ಮುಸ್ಲಿಂ ಬಾಂಧವರಿಂದ ಯೂಮೆ ಅಶೂರ ಆಚರಣೆ



ಮೈಸೂರು: ನಗರದ ಮುಸ್ಲಿಂ ಬಾಂಧವರು ಹಿಜರಿ 1445 ಮೊಹರಂ ಇಸ್ಲಾಮಿಕ್ ತಿಂಗಳ 10ನೇ ದಿನದ ಅಂಗವಾಗಿ ಯೂಮೆ ಅಶ್ರೂರಾವನ್ನು ಹಜ಼ರತ್ ಚಾರ್ ಬರಸ್ ಕೆ ಪೀರ್ ದರ್ಗಾ, ಬಡಾ ಮಕಾನ್, ಟಿಪ್ಪು ಸರ್ಕಲ್, ಮೈಸೂರು–ಬೆಂಗಳೂರು ರಸ್ತೆಯಲ್ಲಿ ಹಜ಼ರತ್ ಮೌಲಾನಾ ಮೌಲ್ವಿ ಸೈಯದ್ ಗೌಸ್ ಪೀರ್ ಶತಾರಿ ಸಾಹೇಬ್, ಸಜ್ಜದ ನಶೀನ್ ಹಜರತ್ ಮೀರ್ ಹಯಾತ್ ಸಾಹೇಬ್ ದರ್ಗಾದಲ್ಲಿ ಆಚರಿಸಲಾಯಿತು. ಈ ವೇಳೆ ಹಜರತ್ ಸೈಯದ್ ಗೌಸ್ ಪೀರ್ ಶತಾರಿ, ಸೈಯದ್ ಇಕ್ಬಾಲ್, ಅಜೀಜ್ ಸೇಟ್ ಬ್ಲಾಕ್ ಕಾಂಗ್ರೆಸ್ ಸಮಿತಿ, ಅಧ್ಯಕ್ಷ ಶೌಕತ್ ಅಲಿ ಖಾನ್, ಸೈಯದ್ ಫಾರೂಖ್, ಅಜ್ಮಲ್ ಪಾಷ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೆರಿಫೆರಲ್ ರಸ್ತೆ

●ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ

●ಇದಕ್ಕೆ ಭೂಮಿ ಒದಗಿಸುವ ರೈತರಿಗೆ ಸೂಕ್ತ ನ್ಯಾಯ

ಬೆಂಗಳೂರು, ಜು.31(ಕೆಎಂಶಿ)–



ಬೆಂಗಳೂರು ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪೆರಿಫೆರಲ್ ರಿಂಗ್ ರಸ್ತೆ ಅಗತ್ಯ ಅದನ್ನು ಕೈಬಿಡುವ ಮಾತಿಲ್ಲ. ಆದರೆ ಭೂಮಿ ಕಳೆದುಕೊಳ್ಳುವ ರೈತರಿಗೆ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಅರಮನೆ ರಸ್ತೆಯ ಜ್ಞಾನಭಾರತಿ ಸಭಾಂಗಣದಲ್ಲಿ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ರೈತರು ಹಾಗೂ ಭೂ ಮಾಲೀಕರ ಜತೆ ಸಂವಾದ ಕಾರ್ಯಕ್ರಮ ನಡೆಸಿದ ಶಿವಕುಮಾರ್ ಅವರು ಯೋಜನೆಯಲ್ಲಿ ಭೂಮಿ ಕಳೆದುಕೊಂಡಿರುವವರ ಸಮಸ್ಯೆ ಆಲಿಸಿ, ಅವರ ಸಲಹೆ ಮತ್ತು ಅಭಿಪ್ರಾಯ ಪಡೆದ ನಂತರ ಮಾತನಾಡಿದರು.

ಜಮೀನು ಉಳಿಸಿಕೊಳ್ಳಬೇಕು, ಮನೆ ಕಟ್ಟಬೇಕು ಎಂಬುದು ಪ್ರತಿಯೊಬ್ಬರ ಕನಸು. ಇಂದಿನ ಸಭೆಯಲ್ಲಿ ನೀವು ಅನೇಕ ಉತ್ತಮ ಸಲಹೆಗಳನ್ನು ನೀಡಿದ್ದೀರಿ. ಕಾಲಮಿತಿಯಲ್ಲಿ ಯೋಜನೆ ಜಾರಿ, ಪರ್ಯಾಯ ಭೂಮಿ ಹಂಚಿಕೆ, ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಎನ್‌ಓಸಿ ನೀಡಬೇಕು, ಬದಲಿ ನಿವೇಶನ ನೀಡುವ ಬಗ್ಗೆ ಸಲಹೆ ನೀಡಿದ್ದೀರಿ. ನಾನು ಸ್ವಾಧೀನ ಆಗಿರುವ ಭೂಮಿ ಎನ್‌ಓಸಿ ನೀಡಲು ಸಾಧ್ಯವಿಲ್ಲ. ಅದನ್ನು ನೇರವಾಗಿ ನಿಮಗೆ ಸ್ಪಷ್ಟಪಡಿಸುತ್ತೇನೆ. ನಾನು ಈ ಯೋಜನೆ ನಿಲ್ಲಿಸಲು ಆಗುವುದಿಲ್ಲ. ಆದರೆ ಯಾವ ರೀತಿ ನಿಮ್ಮ ಹಿತ ಕಾಯಬೇಕು, ಯಾವ ರೀತಿ ನಿಮಗೆ ಹೆಚ್ಚಿನ ಅನುಕೂಲ ಆಗುವಂತೆ ಅಗತ್ಯ ಕ್ರಮ ಕೈಗೊಳ್ಳುತ್ತೇನೆ ಎಂದರು.

ಪ್ರತಿ ತಿಂಗಳ ಮೊದಲ ಶನಿವಾರದಂದು ಮೈಸೂರಲ್ಲಿ ಪಾರಂಪರಿಕ ನಡಿಗೆ

ಮೈಸೂರು,ಜು.31– ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರ ಇಲಾಖೆ ವತಿಯಿಂದ ಪ್ರತಿ ತಿಂಗಳ ಮೊದಲನೇ ಶನಿವಾರದಂದು ವಿದ್ಯಾರ್ಥಿಗಳು ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರಿಗೆ ನಡಿಗೆ ಮೂಲಕ ಪಾರಂ ಪರಿಕ ಕಟ್ಟಡಗಳ ಮಹತ್ವ, ಐತಿಹಾಸಿಕ ಹಿನ್ನೆಲೆ ಹಾಗೂ ವಾಸ್ತುಶಿಲ್ಪಗಳ ಕುರಿತು ಜಾಗೃತಿ ಮೂಡಿಸುವ ಸಂಬಂಧ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯನ್ನು ತಿಳಿಸಿಕೊಡಲಾಗುವುದು. ಇದಕ್ಕೆ ಯಾವುದೇ ಶುಲ್ಕ ಇರುವುದಿಲ್ಲ. ಕಾರ್ಯಕ್ರಮವು ಬೆಳಗ್ಗೆ 6:30ರಿಂದ ಪ್ರಾರಂಭವಾಗಲಿದ್ದು, ಆಸಕ್ತರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ: ಮೃತರ ಸಂಖ್ಯೆ 44ಕ್ಕೆ ಏರಿಕೆ

ಇಸ್ಲಾಮಾಬಾದ್: ಪಾಕಿಸ್ತಾನದ ಬಜೌರ್ ಬುಡಕಟ್ಟು ಜಿಲ್ಲೆಯ ರಾಜಧಾನಿ ಖಾರ್‌ನಲ್ಲಿ ಜಮಿಯತ್ ಉಲೇಮಾ–ಎ–ಇಸ್ಲಾಂ–ಫಜಲ್ ಕಾರ್ಯಕರ್ತರ ಸಮಾವೇಶದಲ್ಲಿ ಭಾನುವಾರ ಪ್ರಬಲ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 44ಕ್ಕೆ ಏರಿಕೆಯಾಗಿದೆ. ಸುಮಾರು 100 ಮಂದಿ ಗಾಯಗೊಂಡಿದ್ದಾರೆ. ಇದು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಕೆಟ್ಟ ದಾಳಿಯಾಗಿದೆ. ಮೃತರ ಸಂಖ್ಯೆ ಹೆಚ್ಚಾಗುವ ಆತಂಕವಿದೆ ಎಂದು ರಕ್ಷಣಾ ಕಾರ್ಯಕರ್ತರು ತಿಳಿಸಿದ್ದಾರೆ.

ಚುಟುಕು ಸಾಹಿತ್ಯ ಪರಿಷತ್‌ನಿಂದ ಪುಸ್ತಕ ವಿತರಣೆ

ಪುಸ್ತಕ ದಾನ ಶ್ರೇಷ್ಠ ದಾನ: ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಮತ



ಮೈಸೂರು, ಜು.31(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಕೃಷ್ಣಧಾಮದಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಪುಸ್ತಕ ವಿತರಣಾ ಸಮಾರಂಭ ನಡೆಸಲಾಯಿತು.

ಈ ವೇಳೆ ಹಲವರಿಗೆ ಪುಸ್ತಕಗಳನ್ನು ನೀಡುವ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಪ್ರಸಿದ್ಧ ದಾನಗಳಲ್ಲಿ ಪುಸ್ತಕಗಳ ದಾನವೂ ಶ್ರೇಷ್ಠವಾದುದು. ಸರಸ್ವತಿಯ ಪ್ರತೀಕವಾದ ಪುಸ್ತಕಗಳನ್ನು ನೀಡುವ ಮೂಲಕ ಚುಟುಕು ಸಾಹಿತ್ಯ ಪರಿಷತ್ತು ಓದುಗರನ್ನು ಹೆಚ್ಚಿಸುವುದರ ಜೊತೆಗೆ ಅವರ ಜ್ಞಾನಾರ್ಜನೆಗೆ ಸಹಕಾರಿಯಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಬ್ದ ಮತ್ತು ಅದರ ಅರ್ಥದ ಸಮ್ಮಿಲನವನ್ನು ಸಾಹಿತ್ಯ ಎನ್ನುತ್ತೇವೆ. ಇಂತಹ ಸಾಹಿತ್ಯ ಕೃತಿಗಳನ್ನು ಸಮಾಜಕ್ಕೆ ದಾನ ಮಾಡುವ ಮೂಲಕ ಸರಸ್ವತಿಯ ಹರಕೆ ತೀರಿಸುವ ಕೆಲಸ ಮಾಡಿದಂತಾಗುತ್ತದೆ. ಮೈಸೂರು ಕೃಷ್ಣಧಾಮದಿಂದ ಆರಂಭವಾಗಿರುವ ಪುಸ್ತಕ ವಿತರಣೆ ಉಡುಪಿಯ ಪೇಜಾವರ ಮಠದಲ್ಲಿ ಮುಕ್ತಾಯಗೊಳ್ಳಲಿದ್ದು, ಶ್ರೀ ಕೃಷ್ಣನ ಸನ್ನಿಧಿಯಲ್ಲೇ ಆರಂಭ ಹಾಗೂ ಮುಕ್ತಾಯಗೊಳ್ಳುವ ಮೂಲಕ ಶ್ರೀ ಕೃಷ್ಣನಿಗೆ ಅರ್ಪಣೆಯಾಗಲಿದೆ. ಒಟ್ಟಾರೆ ಎಲ್ಲರಲ್ಲೂ ಸಾಹಿತ್ಯ ಜ್ಞಾನ ಹೆಚ್ಚಾಗಬೇಕು ಎಂದು ಆಶಿಸಿದರು.

ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ವಿದ್ಯಾಲಯ ಪ್ರಾಂಶುಪಾಲ ಡಾ. ಸರ್ವೇಶ್ವರ್ ಕರ್ ಮಾತನಾಡಿ, ದೇಶದಲ್ಲಿ ಬೇರೆ ರಾಜ್ಯಗಳಿಗೂ ಕರ್ನಾಟಕಕ್ಕೂ ಬಹಳಷ್ಟು ವ್ಯತ್ಯಾಸವಿದೆ. ದೇವರಿಗೆ ಹತ್ತಿರವಿರುವ ಸಂಸ್ಕೃತಿ ಕರ್ನಾಟಕದಲ್ಲಿದೆ ಎಂದರಲ್ಲದೆ ಪುಸ್ತಕ ಸಂಗ್ರಹಣೆ ಮಾಡುವುದು ವಿಶೇಷ ಕಾರ್ಯವಾಗಿದೆ. ನಮ್ಮ ಜ್ಞಾನಕ್ಕೆ ಪುಸ್ತಕಗಳೇ ಆಸ್ತಿ ಎಂದರು. ಉಪನ್ಯಾಸಕ ಶ್ರೀಕಾಂತ ಕಳಸಾಪುರ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ವಿಭಾಗೀಯ ಅಧ್ಯಕ್ಷ ರಮೇಶ್, ಜಿಲ್ಲಾಧ್ಯಕ್ಷ ರಘುಪತಿ ಭಟ್ ಮತ್ತಿತರರಿದ್ದರು.

ತುಳಿತಕ್ಕೊಳಪಟ್ಟವರ ಗುರುಗಳು... ❞

ಉಡುಪಿ ಪೇಜಾವರ ಮಠದ ವಿಶ್ವೇಶತೀರ್ಥ ಸ್ವಾಮೀಜಿಯವರು ತುಳಿತಕ್ಕೊಳಪಟ್ಟವರ ಗುರುಗಳಾಗಿದ್ದರು. ಜಾತಿ–ಮತವೆನ್ನದೆ ಎಲ್ಲಾ ವರ್ಗದ ಜನರ ಗುರುಗಳಾಗಿದ್ದರು. ಯಾರೇ ಮಠಕ್ಕೆ ಬಂದರೂ ವಿಶ್ವಾಸದಿಂದ ಕಾಣುತ್ತಿದ್ದರು. ನಾನು ಮಂತ್ರಿಯಾದಾಗ ಮಠಕ್ಕೆ ಹೋಗಿ ಅವರನ್ನು ಭೇಟಿಯಾಗಿದ್ದೆ. ಈಗ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರನ್ನು ನೋಡಲು ಬಂದಿದ್ದೇನೆ. ಗುರುವನ್ನು ಶಿಷ್ಯರು ಮೀರಿಸುವ ನಾಣ್ನುಡಿಯಂತೆ ವಿಶ್ವೇಶತೀರ್ಥರ ಸಾಧನೆ ಮತ್ತು ಅನುಗ್ರಹ ಸೇವಾ ಕಾರ್ಯವನ್ನು ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ಮಾಡಬೇಕೆಂಬುದು ಎಲ್ಲರ ಆಶಯವಾಗಿದೆ.

– ಎಸ್.ಎಸ್.ಪಾಟೀಲ, ಹಿರಿಯ ರಾಜಕಾರಣಿ

ಇಂದು ಪ್ರಾದೇಶಿಕ ಶಿಕ್ಷಣ ಸಂಸ್ಥೆ 61ನೇ ಸಂಸ್ಥಾಪನಾ ದಿನಾಚರಣೆ

ಮೈಸೂರು,ಜು.31–ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯು ಆ.1ರಂದು 61ನೇ ಸಂಸ್ಥಾಪನಾ ದಿನಾಚರಣೆ ಆಚರಿಸುತ್ತಿದ್ದು, ಬೆಳಗ್ಗೆ 9.15ಕ್ಕೆ ಪ್ರಾದೇಶಿಕ ಶಿಕ್ಷಣ ಸಂಸ್ಥೆ ಅಸೆಂಬ್ಲಿ ಹಾಲ್‌ನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಪ್ರಸಿದ್ಧ ವಿಜ್ಞಾನಿಗಳು, ಡಿಆರ್‌ಡಿಓ ಸಂಸ್ಥೆಯ ಏರೋನಾಟಿಕಲ್ ಸಿಸ್ಟಮ್‌ನ ವಿಶ್ರಾಂತ ಮಹಾನಿರ್ದೇಶಕರು, ಭಾರತ ಸರ್ಕಾರದ ಅಗ್ನಿ IV, ಅಗ್ನಿ V ಮಿಷನ್‌ಗಳ ಯೋಜನಾ ನಿರ್ದೇಶಕರು ಆದ ಡಾ.ಟೆಸ್ಸಿ ಥಾಮಸ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಸರ್ದಾರ್ ಪಣಿಕ್ಕರ್ ಸ್ಮರಣಾರ್ಥ ಉಪನ್ಯಾಸವನ್ನು ನೀಡುವರು. ಹೆಸರಾಂತ ಭಾರತೀಯ ವಕ್ತಾರರು, ಚಿತ್ರೋದ್ಯಮ, ಟೆಲಿವಿಷನ್ ಕಲಾವಿದರು, ಶಾಸ್ತ್ರೀಯ ನೃತ್ಯಪಟು, ಅಂಕಣಕಾರರಾದ ಮಾಳವಿಕಾ ಅವಿನಾಶ್ ಗೌರವ ಅತಿಥಿಗಳಾಗಿ ಭಾಗವಹಿಸುವರು.

ಕೃಷಿ ಸಂಬಂಧಿ ಸೌಲಭ್ಯಗಳ ಅರಿವು ಮೂಡಿಸಲು ರೈತರ ನರೇಗಾ ಮಾಸಾಚರಣೆ



ಮೈಸೂರು, ಜು.31(ಎಂಕೆ)– ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ರೈತರಿಗೆ ದೊರಕುವ ವ್ಯವಸಾಯ ಸಂಬಂಧಿತ ಸೌಲಭ್ಯಗಳ ಅರಿವು ಮೂಡಿಸುವ ನಿಟ್ಟಿನಲ್ಲಿ ಹಾಗೂ ಯೋಜನೆಯ ಪರಿಣಾಕಾರಿ ಅನುಷ್ಠಾನಕ್ಕಾಗಿ ಎರಡು ತಿಂಗಳ 'ರೈತರ ನರೇಗಾ ಮಾಸಾಚರಣೆ' ಕೈಗೊಳ್ಳಲಾಗಿದೆ ಎಂದು ಮೈಸೂರು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ.ಗಿರೀಶ್ ಹೇಳಿದರು.

ಸೋಮವಾರ ತಾಪಂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ರೈತರಿಗೆ ಅನೇಕ ಸೌಲಭ್ಯ ಸಿಗಲಿದ್ದು, ರೈತರು ಹೆಚ್ಚಿನ ಮಟ್ಟದಲ್ಲಿ ಸದುಪಯೋಗ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಆಗಸ್ಟ್ ಹಾಗೂ ಸೆಪ್ಟೆಂಬರ್ ಎರಡು ತಿಂಗಳ ಕಾಲ ರೈತರಿಗೆ ಅನುಕೂಲವಾಗಲೆಂದೇ ಮಾಸಾಚರಣೆ ಕೈಗೊಳ್ಳಲಾಗುತ್ತಿದೆ ಎಂದರು.

ಮಾಸಾಚರಣೆ ವೇಳೆ ನರೇಗಾ ಯೋಜನೆಯ ಅನುಷ್ಠಾನ ಸಂಬಂಧ ಕೃಷಿ, ರೇಷ್ಮೆ, ತೋಟಗಾರಿಕೆ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯ ಅಧಿಕಾರಿಗಳು ಹೆಚ್ಚಿನ ಮಟ್ಟದಲ್ಲಿ ರೈತರಿಗೆ ಸ್ಪಂದಿಸಬೇಕು. ಈಗಾಗಲೇ ಬೇಡಿಕೆ ಪಡೆದು ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಸೌಲಭ್ಯಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಕೃಷಿ ಇಲಾಖೆಯಿಂದ ಕಂದಕ ಬದು ನಿರ್ಮಾಣ, ಎರೆಹುಳು ಘಟಕ, ನೀರುಗಾಲುವೆ ನಿರ್ಮಾಣ ಮತ್ತು ರೇಷ್ಮೆ ಇಲಾಖೆಯಲ್ಲಿ ಹಿಪ್ಪು ನೇರಳೆ ನಾಟಿ, ನರ್ಸರಿ, ಮರಗಡ್ಡಿ ಪದ್ಧತಿ, ಸಾಮಾಜಿಕ ಅರಣ್ಯದಲ್ಲಿ ರೈತರಿಗೆ ಗಿಡ ವಿತರಣೆ ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಬಾಳೆ, ತೆಂಗು, ಪಪ್ಪಾಯ, ಮಾವು, ಸೀಬೆ, ನುಗ್ಗೆ, ಮೈಸೂರು ಮಲ್ಲಿಗೆ, ವೀಳ್ಯದೆಲೆ, ಗುಲಾಬಿ, ಡ್ರಾಗನ್ ಫ್ರೂಟ್, ನಿಂಬೆ ಸೇರಿದಂತೆ ವಿವಿಧ ಬೆಳೆಗಳನ್ನು ನರೇಗಾ ಯೋಜನೆಯಡಿ ಬೆಳೆಯಬಹುದು ಎಂದು ಮಾಹಿತಿ ನೀಡಿದರು.

ಈಗಾಗಲೇ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವ ಫಲಾನುಭವಿಗಳು ಸಂಬಂಧಿಸಿದ ಅಧಿಕಾರಿಗಳು ಮತ್ತು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯಿತಿಯಲ್ಲಿ ಮಾಹಿತಿ ಪಡೆದು ಬೆಳೆಗಳನ್ನು ಬೆಳೆಯುವುದು. ಸೌಲಭ್ಯ ಪಡೆಯಲು ಇಚ್ಛಿಸುವ ರೈತರು ಹೆಚ್ಚುವರಿ ಕ್ರಿಯಾಯೋಜನೆ ಸಿದ್ಧಪಡಿಸಲು ಹೆಸರು ನೋಂದಾಯಿಸಿಕೊಳ್ಳಬಹುದು. ಈ ಎರಡು ತಿಂಗಳ ಅವಧಿಯಲ್ಲೇ ಫಲಾನುಭವಿಗಳಿಗೆ ಕೂಲಿ ಹಾಗೂ ಸಾಮಾಗ್ರಿ ವೆಚ್ಚ ದೊರಕಿಸಿಕೊಡಲಾಗುವುದು ಎಂದರು.

ಮಾಸಾಚರಣೆಯನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಇಲಾಖೆಗಳ ಅಧಿಕಾರಿಗಳು, ಪಿಡಿಓಗಳು ರೈತರಿಗೆ ಸೌಲಭ್ಯ ದೊರಕಿಸಿಕೊಡುವುದನ್ನು ಮೊದಲ ಆದ್ಯತೆಯಾಗಿ ಪರಿಗಣಿಸಿ, ಹೆಚ್ಚಿನ ಸಮಯ ಮೀಸಲಿಡಬೇಕು. ಅದರಂತೆ ರೈತ ಫಲಾನುಭವಿಗಳು ಕೂಡ ಸೌಲಭ್ಯ ಪಡೆಯುವ ಮೂಲಕ ಸಹಕರಿಸಬೇಕು ಎಂದರು. ಸಭೆಯಲ್ಲಿ ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಅನುಷ್ಠಾನ ಇಲಾಖೆಗಳ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಸಹಾಯಕ ತಾಂತ್ರಿಕ ಅಭಿಯಂತರರು ಉಪಸ್ಥಿತರಿದ್ದರು.

ಮಣಿಪುರ ಘಟನೆ ಖಂಡಿಸಿ ಮಂಡ್ಯದಲ್ಲಿ ಪ್ರತಿಭಟನೆ



ಮಂಡ್ಯ, ಜು.31– ಮಣಿಪುರದಲ್ಲಿ ಮಹಿಳೆ ಯರ ಬೆತ್ತಲೆ ಮೆರವಣಿಗೆ ಹಾಗೂ ಸಾಮೂಹಿಕ ಅತ್ಯಾಚಾರ ಪ್ರಕರಣ ಖಂಡಿಸಿ ನಗರದಲ್ಲಿ ಜಿಲ್ಲಾ ಮಹಿಳೋದಯ ಮಹಿಳಾ ಒಕ್ಕೂಟದ ಸದಸ್ಯರು ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದ ಒಕ್ಕೂಟದ ಕಾರ್ಯಕರ್ತೆಯರು ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಹಾಗೂ ಹಿಂಸಾಚಾರ ತಡೆಯಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಿದರು.

ಮಣಿಪುರದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಕಾರ್ಯಾಂಗದ ಅಧಿಕಾರ ಪಡೆದು ಜವಾಬ್ದಾರಿಯುತ ಸ್ಥಾನದಲ್ಲಿರುವವರು, ನಾಗರಿಕರು, ಮಹಿಳೆಯರಿಗೆ ರಕ್ಷಣೆ ನೀಡಬೇಕು. ಅಲ್ಲದೇ ಅಲ್ಲಿನ ಪೊಲೀಸ್ ಇಲಾಖೆ ಸತ್ತಂತೆ ವರ್ತಿಸುತ್ತಿದೆ. ಅಧಿಕಾರಿಗಳ ದರ್ಪ, ದಬ್ಬಾಳಿಕೆಗೆ ಕೊನೆ ಇಲ್ಲದಂತಾಗಿದೆ. ಮಹಿಳೆಯರ ಬೆತ್ತಲೆ ಮೆರವಣಿಗೆ ನಡೆಸಿದ ಸಮಾಜಘಾತಕ ಶಕ್ತಿಗಳ ವಿರುದ್ಧ ಕ್ರಮ ವಹಿಸದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಬೇಜವಾಬ್ದಾರಿತನವನ್ನು ಪ್ರತಿಭಟನಾಕಾರರು ಖಂಡಿಸಿದರು.

ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಮಣಿಪುರ ದಲ್ಲಿ ಹಿಂಸಾಚಾರ ತಡೆದು ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಮುಂದಾಗಬೇಕು. ಮಹಿಳೆಯರ ನಿರ್ಭೀತಿ ಬದುಕಿಗೆ ಕಾನೂನು ರೀತ್ಯಾ ಸೂಕ್ತ ರಕ್ಷಣೆ ನೀಡಬೇಕು. ಮಹಿಳೆಯರ ಮೇಲೆ ದೌರ್ಜನ್ಯ, ಹಿಂಸೆ, ಅತ್ಯಾಚಾರ ಮಾಡುವವರಿಗೆ ತ್ವರಿತ ಗತಿ ಯಲ್ಲಿ ಮರಣ ದಂಡನೆ ಶಿಕ್ಷೆ ವಿಧಿಸಬೇಕು. ಶೋಷಣೆಗೊಳಗಾಗಿರುವ ಕುಟುಂಬಕ್ಕೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ನೀಡಬೇಕು. ಅತ್ಯಾಚಾರಿಗಳಿಗೆ ವಿಧಿಸುವ ಶಿಕ್ಷೆಯನ್ನು ಕಠಿಣಗೊಳಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಒಕ್ಕೂಟದ ಭಾರತಿ, ಮೋಹಿದ್ದಿನ್, ಸೆಲ್ವಿ, ಉಮಾ, ಭಾಗ್ಯಲಕ್ಷ್ಮಿ, ಶೃತಿ, ಲೀಲಾವತಿ ನೂರಾರು ಮಂದಿ ಭಾಗವಹಿಸಿದ್ದರು.

ಕೌಟುಂಬಿಕ ಕಲಹ: ಪತ್ನಿ ಹತ್ಯೆಗೈದ ಪತಿ




ಚಿನಕುರಳಿ, ಜು.31– ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತ್ನಿಯನ್ನು ಹತ್ಯೆಗೈದು ಪತಿ ಪರಾರಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಹುಲ್ಕೆರೆ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಸೌಮ್ಯ(24) ಕೊಲೆಯಾಗಿರುವ ಗೃಹಿಣಿಯಾಗಿದ್ದು, ಈಕೆಯ ಪತಿ ಗ್ರಾಮದ ಪುಟ್ಟೇಗೌಡರ ಪುತ್ರ ಗಣೇಶ್(33) ಹತ್ಯೆ ಆರೋಪಿ.

ವಿವರ: ನಂಜನಗೂಡು ತಾಲೂಕಿನ ಕೊಂಗಹಳ್ಳಿ ಗ್ರಾಮದ ಸೌಮ್ಯಳನ್ನು ಹುಲ್ಕೆರೆ ಗ್ರಾಮದ ಗಣೇಶ್‌ಗೆ ಮದುವೆ ಮಾಡಿ ಕೊಡಲಾಗಿತ್ತು. ಇವರಿಗೆ ಒಂದು ಗಂಡು ಮಗುವಿದ್ದು, ಗಣೇಶ್ ಟಿಪ್ಪರ್ ಚಾಲಕನಾಗಿ ಜೀವನ ನಡೆಸುತ್ತಿದ್ದ. ಸೌಮ್ಯ ಹಾಗೂ ಗಣೇಶ್ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು ಎನ್ನಲಾಗಿದೆ. ಅಲ್ಲದೇ ಈ ಹಿಂದೆ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ರಾಜಿ ಸಂಧಾನದ ಮೂಲಕ ಸೌಮ್ಯಳನ್ನು ಮನೆಗೆ ಕರೆದುಕೊಂಡು ಬರಲಾಗಿತ್ತು. ಸೋಮ ವಾರ ಬೆಳಗ್ಗೆಯೂ ಮನೆಯಲ್ಲಿ ಯಾರೂ ಇಲ್ಲದ ವೇಳೆ ಸೌಮ್ಯ ಹಾಗೂ ಗಣೇಶ್ ನಡುವೆ ಜಗಳ ನಡೆದಿದೆ. ಈ ವೇಳೆ ಜಗಳ ವಿಕೋಪಕ್ಕೆ ಹೋಗಿ ಗಣೇಶ್ ಸೌಮ್ಯಳ ತಲೆಗೆ ಮಾರಕಾಸ್ತ್ರದಿಂದ ಹೊಡೆದಿದ್ದಾನೆ. ಪರಿಣಾಮ ತೀವ್ರ ಗಾಯಗೊಂಡ ಸೌಮ್ಯ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ತಕ್ಷಣ ಗಣೇಶ್ ಮನೆ ಬಾಗಿಲು ಹಾಕಿಕೊಂಡು ಅಲ್ಲಿಂದ ಪರಾರಿಯಾಗಿದ್ದಾನೆ. ಸೌಮ್ಯಳ ಅತ್ತೆ, ಮಾವ ಜಮೀನಿನಿಂದ ಮನೆಗೆ ಊಟಕ್ಕೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದೆ.

ವಿಷಯ ತಿಳಿದ ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕಾಗಮಿಸಿದ ಪಾಂಡವಪುರ ಪೊಲೀಸರು ಪರಿಶೀಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್‌ಪಿ ಎಚ್.ಎಸ್.ಮುರುಳಿ, ಸಿಪಿಐ ವಿವೇಕಾನಂದ, ಪುನೀತ್, ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತ ವಿರೋಧಿ ನೀತಿ ಖಂಡಿಸಿ ಬೃಹತ್ ಪ್ರತಿಭಟನೆ



ಮಂಡ್ಯ, ಜು.31– ಕೇಂದ್ರ ಹಾಗೂ ರಾಜ್ಯ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿ ರೈತ ಸಂಘದ ಕಾರ್ಯಕರ್ತರು ಸೋಮವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ ಕಬ್ಬು ದರ ನಿಗದಿಗೆ ಶೇ.10.25 ಇಳುವರಿ ಮಾನದಂಡದಡಿ ಅವೈಜ್ಞಾನಿಕವಾಗಿ ಟನ್ ಕಬ್ಬಿಗೆ 3150 ರೂ. ನಿಗದಿ ಮಾಡಿರುವುದನ್ನು ಕೈಬಿಟ್ಟು, ಶೇ.8.5 ಮಾನದಂಡ ನಿಗದಿ ಮಾಡಬೇಕು. ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆಗೆ ಶಾಸನಬದ್ಧ ಕಾನೂನು ರೂಪಿಸಬೇಕು. ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆ ವಾಪಸ್ ಪಡೆಯಬೇಕು, ಕೃಷಿ ಬೆಲೆ ಆಯೋಗಕ್ಕೆ ಶಾಸನಬದ್ಧ ಅಧಿಕಾರ ನೀಡಬೇಕು. ಸಕ್ಕರೆ ಕಾರ್ಖಾನೆಗಳಿಗೆ ರೈತರು ಸರಬರಾಜು ಮಾಡುವ ಟನ್ ಕಬ್ಬಿಗೆ 4500 ರೂ. ನಿಗದಿಪಡಿಸಬೇಕು. ರಂಗರಾಜನ್ ವರದಿಯಂತೆ ಉಪ ಉತ್ಪನ್ನಗಳ ಮೇಲಿನ ಲಾಭಾಂಶದಲ್ಲಿ ಕಬ್ಬು ಬೆಳೆಗಾರರಿಗೆ ಶೇ.70 ಲಾಭಾಂಶ ನೀಡಬೇಕು. ಹಗಲು ವೇಳೆ 7 ತಾಸು ಕೃಷಿ ಪಂಪ್‌ಸೆಟ್‌ಗಳಿಗೆ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಬೇಕು. ಗೃಹಬಳಕೆ ವಿದ್ಯುತ್ ಕನಿಷ್ಠ ಶುಲ್ಕವನ್ನು ಹೆಚ್ಚಳ ಮಾಡಿ ಏಕರೂಪ ದರ ನಿಗದಿ ಮಾಡಿರುವುದನ್ನು ಹಿಂಪಡೆದು ಈ ಹಿಂದಿನ ಶುಲ್ಕ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಮನ್‌ಮುಲ್ ಹಾಲಿನ ಖರೀದಿ ದರ ಪ್ರತಿ ಲೀಟರ್‌ಗೆ 1.75 ರೂ. ಕಡಿತ ಮಾಡಿರುವುದನ್ನು ವಾಪಸ್ ಪಡೆಯಬೇಕು. ಮೆಗಾ ಡೈರಿ ಹಗರಣದಲ್ಲಿ ನ್ಯಾಯಾಲಯದ ಆದೇಶದಂತೆ 72 ಕೋಟಿ ರೂ. ವಸೂಲಿ ಮಾಡಲು ಸರ್ಕಾರ ನಿರ್ದೇಶನ ನೀಡಬೇಕು. ಹಾಲಿಗೆ ನೀರು ಬೆರೆಸಿ ಒಕ್ಕೂಟಕ್ಕೆ ನಷ್ಟ ಮಾಡಿರುವ ಹಗರಣ ಕುರಿತು ಸಿಬಿಐ ತನಿಖೆ ನಡೆಸಬೇಕು. ಭತ್ತ, ರಾಗಿ, ಕೊಬ್ಬರಿ ಖರೀದಿಗೆ ವರ್ಷಪೂರ್ತಿ ಕೇಂದ್ರ ತೆರೆಯಬೇಕು. 3 ಜಿಲ್ಲೆಗಳಲ್ಲಿ ನೀಡುತ್ತಿರುವ ಭತ್ತದ ಪ್ರೋತ್ಸಾಹಧನವನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಬೇಕು. ಕೊಬ್ಬರಿ ಕ್ವಿಂಟಾಲ್‌ಗೆ ಕನಿಷ್ಠ 2000 ರೂ. ಬೆಂಬಲ ಬೆಲೆ ನೀಡಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ರೇಷ್ಮೆ ಕೇಂದ್ರಗಳಲ್ಲಿ ಚಾಕಿ ಸಾಕಾಣಿಕೆ ಮುಂದುವರೆಸಬೇಕು. ರೇಷ್ಮೆ ಗೂಡಿಗೆ ಪ್ರತಿ ಕೆಜಿಗೆ 50 ರೂ. ಪ್ರೋತ್ಸಾಹಧನ ನೀಡಬೇಕು. ರೈತರ ಜೀವನಾಡಿ ಕೆಆರ್‌ಎಸ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಡಿಸ್ನಿಲ್ಯಾಂಡ್ ಯೋಜನೆ ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮುಖಂಡರಾದ ಎನ್.ಪ್ರಸನ್ನಗೌಡ, ಬಸವರಾಜ್, ನಿಂಗಪ್ಪಾಜಿ, ರವಿಕುಮಾರ್, ಚಂದ್ರಶೇಖರ್, ಬೊಮ್ಮೇಗೌಡ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಹಕ್ಕುಪತ್ರ ವಿತರಣೆಗೆ ಸಚಿವರಿಗೆ ಮನವಿ ಸಲ್ಲಿಕೆ



ಮಂಡ್ಯ, ಜು.31– ಮಂಡ್ಯ ಸೇರಿದಂತೆ ಜಿಲ್ಲಾದ್ಯಂತ ನಿರಾಶ್ರಿತರಿಗೆ ನಿವೇಶನ ಮಂಜೂರು ಮಾಡಿ ಈವರೆಗೂ ಹಕ್ಕುಪತ್ರ ವಿತರಿಸಿಲ್ಲ. ಜೊತೆಗೆ ಹೊಸದಾಗಿ ಬಡವರಿಗೆ ನಿವೇಶನ ನೀಡುವ ವೇಳೆ ಹಕ್ಕುಪತ್ರ ವಿತರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಹಿರಿಯ ಕಾಂಗ್ರೆಸ್ ಮುಖಂಡ ಅಸಾದುಲ್ಲಾಖಾನ್ ಮನವಿ ಸಲ್ಲಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸಚಿವ ಚಲುವರಾಯಸ್ವಾಮಿ ಹಾಗೂ ಶಾಸಕ ಗಣಿಗ ರವಿಕುಮಾರ್ ಅವರನ್ನು ಭೇಟಿ ಮಾಡಿ ಪ್ರತ್ಯೇಕ ಮನವಿ ಸಲ್ಲಿಸಿದ ಅವರು, ಮಂಡ್ಯ ನಗರದಲ್ಲಿ ನೂರಾರು ಮಂದಿಗೆ ಈವರೆಗೆ ಹಕ್ಕುಪತ್ರ ವಿತರಣೆಯಾಗಿಲ್ಲ. ಜೊತೆಗೆ ಜಿಲ್ಲೆಯ ಯಾವ ತಾಲೂಕಿನಲ್ಲೂ ಹಕ್ಕುಪತ್ರ ವಿತರಣೆಯಾಗಿಲ್ಲ. ಅಷ್ಟೇ ಏಕೆ ರಾಜ್ಯದಲ್ಲೂ ನಿರಾಶ್ರಿತರಿಗೆ ಸೂರು ಕಲ್ಪಿಸಿದ್ದರೂ ಹಕ್ಕುಪತ್ರ ವಿತರಣೆಯಾಗಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷ ಚುನಾವಣೆ ವೇಳೆ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಹಕ್ಕುಪತ್ರ ವಿತರಿಸುವುದಾಗಿ ಹೇಳಿತ್ತು. ಅದರಂತೆ ಸರ್ಕಾರ ಜನರಿಗೆ ಸ್ಪಂದಿಸಬೇಕು. ರಾಜ್ಯದ ಎಲ್ಲಾ ಕಡೆ ಹಕ್ಕುಪತ್ರ ವಿತರಿಸಬೇಕೆಂದು ಸಿಎಂ ಸಿದ್ದರಾಮಯ್ಯ, ಸಂಬಂಧಿಸಿದ ಸಚಿವರು ಹಾಗೂ ಎಲ್ಲಾ ಶಾಸಕರ ಬಳಿ ಮನವಿ ಮಾಡಿಕೊಳ್ಳುವುದಾಗಿ ತಿಳಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಸಚಿವ ಚಲುವರಾಯಸ್ವಾಮಿ, ಹಕ್ಕುಪತ್ರ ವಿತರಣೆ ಪ್ರಮುಖ ಸಮಸ್ಯೆಯಾಗಿದೆ. ಈ ಸಮಸ್ಯೆ ಕೇವಲ ಮಂಡ್ಯ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಬಡವರಿಗೆ ಹಕ್ಕುಪತ್ರ ವಿತರಿಸಲು ಮೊದಲ ಆದ್ಯತೆ ನೀಡಲಾಗುವುದು. ಜೊತೆಗೆ ರಾಜ್ಯದ ಎಲ್ಲಾ ಕಡೆ ಹಕ್ಕುಪತ್ರ ವಿತರಣೆಗೆ ಸಂಬಂಧಿಸಿದ ಸಚಿವರ ಬಳಿ ಮಾತನಾಡುತ್ತೇನೆ ಎಂದು ಭರವಸೆ ನೀಡಿದರು. ಶಾಸಕ ಗಣಿಗ ರವಿಕುಮಾರ್ ಸಹ ಹಕ್ಕುಪತ್ರ ವಿತರಣೆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ನಾಳೆ ಶ್ರೀರಂಗಪಟ್ಟಣಕ್ಕೆ ಜಿ.20 ಪ್ರತಿನಿಧಿಗಳು ಭೇಟಿ

ಮಂಡ್ಯ, ಜು.31– ಈ ಬಾರಿಯ ಜಿ.20 ಶೃಂಗಸಭೆ ಅಧ್ಯಕ್ಷತೆಯನ್ನು ಭಾರತ ವಹಿಸಿದ್ದು, ದೇಶ ಮತ್ತು ವಿದೇಶದ ಗಣ್ಯರು ಆ.2ರಂದು ಶ್ರೀರಂಗ ಪಟ್ಟಣಕ್ಕೆ ಭೇಟಿ ನೀಡಲಿದ್ದಾರೆ. ಹೀಗಾಗಿ ಜಿಲ್ಲಾಡಳಿತದಿಂದ ಅವರನ್ನು ಸ್ವಾಗತಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ಅಧಿಕಾರಿಗಳಿಗೆ ತಿಳಿಸಿದರು.

ಸೋಮವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆ.3ರವರೆಗೆ ಮೈಸೂರಿನಲ್ಲಿ ಥಿಂಕ್ 20 ಸಮಿಟ್ ನಡೆಯಲಿದೆ. ಇದರಲ್ಲಿ ಭಾಗವಹಿಸುವ 150ಕ್ಕೂ ಹೆಚ್ಚು ಗಣ್ಯರು ಆ.2ರಂದು ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಲಿದ್ದಾರೆ ಎಂದರು.

ಅಂದು ಸಂಜೆ 6 ಗಂಟೆಗೆ ದರಿಯಾ ದೌಲತ್, 6.30ಕ್ಕೆ ಶ್ರೀರಂಗನಾಥ ಸ್ವಾಮಿ ದೇವಾಲಯ, 7.15ಕ್ಕೆ ಬೃಂದಾವನ ಗಾರ್ಡನ್‌ಗೆ ಭೇಟಿ ನೀಡಲಿದ್ದಾರೆ. ಈ ಸಂದರ್ಭ ಅವರನ್ನು ಸ್ವಾಗತಿಸಿ, ಭದ್ರತೆಯ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಿದರು. ಅತಿಥಿಗಳು ಭೇಟಿ ನೀಡುವ ಸ್ಥಳಗಳಿಗೆ ಅಧಿಕಾರಿಗಳು ಮೊದಲೇ ಭೇಟಿ ನೀಡಿ ಸ್ಥಳ ಪರಿಶೀಲಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸುತ್ತಮುತ್ತಲು ವಿದ್ಯುತ್ ದೀಪಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿರು ವುದನ್ನು ಖಾತ್ರಿ ಪಡಿಸಿಕೊಳ್ಳಿ, ರಸ್ತೆಗಳನ್ನು ಸರಿಪಡಿಸಬೇಕು. ದರಿಯಾ ದೌಲತ್ ಹಾಗೂ ಕೆಆರ್‌ಎಸ್‌ನಲ್ಲಿ ಅತಿಥಿಗಳನ್ನು ಸ್ವಾಗತಿಸಲು ಉತ್ತಮ ಕಲಾ ತಂಡವನ್ನು ನಿಯೋಜಿಸಿ. ಅತಿಥಿಗಳಿಗೆ ಉಪಹಾರದ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಸಭೆಯಲ್ಲಿ ಪಾಂಡವಪುರ ಎಸಿ ನಂದೀಶ್, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ರಂಗಸ್ವಾಮಿ, ಕಾವೇರಿ ನೀರಾವರಿ ನಿಗಮ ನಿಯಮಿತದ ಅಧೀಕ್ಷಕ ಅಭಿಯಂತರ ರಘುರಾಮ್, ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್ ಇತರರಿದ್ದರು.

ಸ್ವಚ್ಛತೆ ಆರಂಭ: ಜಿ.20 ಶೃಂಗಸಭೆಯ ಗಣ್ಯರು ಆ.2ರಂದು ಶ್ರೀರಂಗಪಟ್ಟಣಕ್ಕೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕೋಟೆಗಳ ಶುಚಿತ್ವದ ಕೆಲಸ ಆರಂಭಿಸಿದೆ.

ಕಾಡಾನೆ ದಾಳಿಗೆ ತೆಂಗು ನಾಶ

ಹಲಗೂರು, ಜು.31– ಕಾಡಾನೆಗಳ ದಾಳಿಗೆ ಹತ್ತಾರು ತೆಂಗಿನ ಮರಗಳು ಧರೆಗುರುಳಿದ ಘಟನೆ ಇಲ್ಲಿಗೆ ಸಮೀಪದ ನಂದೀಪುರ ಗ್ರಾಮದಲ್ಲಿ ಭಾನುವಾರ ತಡರಾತ್ರಿ ನಡೆದಿದೆ.

ಬಸವನಬೆಟ್ಟ ಕಾಡಿನಿಂದ ಹಲಗೂರು ಕಡೆಗೆ ಬಂದಿರುವ ಎರಡು ಕಾಡಾನೆಗಳು ಗ್ರಾಮದ ನಿವಾಸಿ ಜಯರಾಂ ಅವರಿಗೆ ಸೇರಿದ ಹತ್ತಾರು ತೆಂಗಿನ ಮರಗಳನ್ನು ನಾಶಗೊಳಿಸಿವೆ. ರೈತ ಜಯರಾಂ ಮಾತನಾಡಿ, ಕೆಲದಿನಗಳಿಂದ ಗ್ರಾಮದಲ್ಲಿ ಕಾಡಾನೆಗಳ ಕಾಟ ಹೆಚ್ಚಾಗಿದೆ. ಭಾನುವಾರ ರಾತ್ರಿ ನಮ್ಮ ಜಮೀನಿನಲ್ಲಿದ್ದ ತೆಂಗಿನ ಮರಗಳನ್ನು ಮುರಿದು ಹಾಕಿವೆ. ಬಸವನಬೆಟ್ಟದ ತಪ್ಪಲಿನಲ್ಲಿರುವ ನಮ್ಮ ಗ್ರಾಮದಲ್ಲಿ ಆನೆ, ಚಿರತೆ ಹಾವಳಿ ಹೆಚ್ಚಾಗಿದ್ದು, ರೈತರು ಕಷ್ಟಪಟ್ಟು ಬೆಳೆದ ಬೆಳೆಗಳು ನಾಶವಾಗಿವೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ನೀಡುವ ಜೊತೆಗೆ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಮಂಡ್ಯ ಜಿಲ್ಲಾ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಅಧ್ಯಕ್ಷ ಚಿಕ್ಕುಚ್ಚಯ್ಯ ಅಧ್ಯಕ್ಷತೆಯಲ್ಲಿ ಸಹ ಕಾರ್ಯದರ್ಶಿ ಲಿಂಗೇಗೌಡರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಉಪಾಧ್ಯಕ್ಷ ಎಂ.ಆರ್.ನಾಗರಾಜ್, ಶ್ರೀನಿವಾಸ್, ಕಾರ್ಯದರ್ಶಿ ಚಿಕ್ಕಸಿದ್ದೇಗೌಡ, ಖಜಾಂಚಿ ಟಿ.ಕೆ.ಪುಟ್ಟಸ್ವಾಮಿ, ಸಂಘಟನಾ ಕಾರ್ಯದರ್ಶಿ ಚಿಕ್ಕನಾಗೇಗೌಡ, ನಿರ್ದೇಶಕರಾದ ಚಿಕ್ಕಚೆನ್ನಯ್ಯ, ಶಿವಲಿಂಗಯ್ಯ ಇನ್ನಿತರರಿದ್ದರು.

ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಹಣ ಪೂರ್ಣ ಬಳಕೆ ಮಾಡದ ನೀವು ನಾಲಾಯಕ್

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಲಾಸ್

ಹಣ ಬಳಕೆಯ ಮಾಹಿತಿಯೂ ಇಲ್ಲ ಎಂದ ಮೇಲೆ ನಿಮ್ಮೊಂದಿಗೆ ಸಭೆ ನಡೆಸುವ ಔಚಿತ್ಯವಾದರೂ ಏನು?



ಬೆಂಗಳೂರು, ಜು.31(ಕೆಎಂಶಿ)– ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ವಿಫಲರಾದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಸಮಾಜಕ್ಕೆ ಮೀಸಲಿಟ್ಟಿರುವ ಹಣವನ್ನು ಬಳಕೆ ಮಾಡದೇ ಇರುವ ನೀವು ನಾಲಾಯಕ್ ಎಂದು ಹರಿಹಾಯ್ದಿದ್ದಾರೆ.

ಕಳೆದ ಮೂರು ತಿಂಗಳಲ್ಲಿ ಯಾವ ರೀತಿ ಹಣ ಬಳಕೆ ಮಾಡಲಾಗಿದೆ ಎಂಬ ಮಾಹಿತಿ ಇಲ್ಲವೆಂದ ಮೇಲೆ ನಾವು ಈ ಸಭೆ ನಡೆಸುವುದರ ಔಚಿತ್ಯವೇನು? ನಿಮ್ಮ ಮೇಲೆ ಏಕೆ ಕಾನೂನು ರೀತಿ ಕ್ರಮ ಜರುಗಿಸ ಬಾರದು ಎಂದು ಎಚ್ಚರಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ಸಭೆ ನಡೆಸಿ 2023–24ನೇ ಸಾಲಿನ ಎಸ್.ಸಿ. ಎಸ್.ಪಿ./ ಟಿ.ಎಸ್.ಪಿ. ಅಡಿ 34,293.69 ಕೋಟಿ ರೂ. ಗಳ ಕ್ರಿಯಾ ಯೋಜನೆಯನ್ನು ಅನುಮೋದನೆ ಪಡೆದುಕೊಂಡಿದ್ದಾರೆ. ಕಳೆದ ಸಾಲಿನ ಶೇ.60ರಷ್ಟು ಮಾತ್ರ ಬಳಕೆಯಾಗಿದೆ. ಒಂದು ವರ್ಷದಿಂದ ಇಂಥ ಸಭೆ ನಡೆಸಿಲ್ಲ. ತುಳಿತಕ್ಕೆ ಒಳಗಾದ ಜನರ ಸೇವೆ ಮಾಡುವ ಕಾರ್ಯಕ್ಕೆ ಏಕೆ ತಾತ್ಸಾರ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದೇ ರೀತಿ ಮುಂದುವರೆದರೆ ಎಲ್ಲರ ಮೇಲೂ ಕ್ರಮ ಕೈಗೊಳ್ಳಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ. ಸರ್ಕಾರ ಅನುಷ್ಠಾನಗೊಳಿಸಿರುವ 5 ಗ್ಯಾರಂಟಿ ಯೋಜನೆಗಳಿಗೆ ನಿಗದಿಪಡಿಸಿರುವ ಎಸ್.ಸಿ. ಎಸ್.ಪಿ./ ಟಿ.ಎಸ್.ಪಿ. ಅಡಿ 11 ಸಾವಿರ ಕೋಟಿ ರೂ. ಹಣ ಬಳಕೆ ಮಾಡಿಕೊಂಡು, ಆ ವರ್ಗದವರಿಗಾಗಿಯೇ ಈ ಹಣ ಬಳಸೋಣ ಎಂದಿದ್ದಾರೆ. ಅನುದಾನದ ಸಂಪೂರ್ಣ ಸದ್ಬಳಕೆಗಾಗಿ ಅನುಮೋದಿಸಿದ ಕ್ರಿಯಾ ಯೋಜನೆಯಂತೆ ಅನುಷ್ಠಾನಗೊಳಿಸಲಾಗುವುದು. ಸಂಬಂಧಿಸಿದ ಇಲಾಖೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಅನುದಾನ ಉಳಿದರೆ, ಅದರ ಮರು ಹಂಚಿಕೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನಮ್ಮ ಸರ್ಕಾರದ ಹಿಂದಿನ ಅವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಯೋಜನಾ ಉಸ್ತುವಾರಿ ಕೋಶ ರಚನೆ ಪ್ರಸ್ತಾವನೆ ಮಾಡಲಾಗಿತ್ತು ಮತ್ತು ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳ ಅತ್ಯುತ್ತಮ ನಿರ್ವಹಣೆಗೆ ಶ್ರೀಮತಿ ರೇಣುಕಾ ಚಿದಂಬರಂ ಅಧ್ಯಕ್ಷತೆಯ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಗಣಿಸುವಂತೆ ಪರಿಷತ್‌ನ ಸದಸ್ಯರು ಸಲಹೆ ನೀಡಿದರು.

ಇದರಲ್ಲಿ ಹಳ್ಳಿಗಾಡಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶ. ವಸತಿ ಶಾಲೆಗಳಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಶೇ. 60 ಹಾಗೂ ಹೊರಗಿನ ವಿದ್ಯಾರ್ಥಿಗಳಿಗೆ ಶೇ.40ರಷ್ಟು ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಲು ಸೂಚಿಸಲಾಯಿತು.

ಪರಿಶಿಷ್ಟ ಜಾತಿ, ಪಂಗಡದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಸೌಲಭ್ಯ ಕಲ್ಪಿಸಬೇಕು. ಯಾವುದೇ ಕಾರಣಕ್ಕೆ ದಲಿತರ ಮಕ್ಕಳು drop out ಆಗಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ದಲಿತರಿಗೆ ಎಲ್ಲೆಲ್ಲಿ ರುದ್ರಭೂಮಿ ಬೇಡಿಕೆ ಇದೆಯೋ ಅಲ್ಲಿ ರುದ್ರಭೂಮಿ ಒದಗಿಸಬೇಕು. ಹಾಸ್ಟೆಲ್ ಮತ್ತು ವಸತಿ ಶಾಲೆಗಳಿಗೆ ಆದ್ಯತೆ ಮೇರೆಗೆ ಜಾಗ ಒದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

ಪರಿಷತ್ ಸಭೆ ಆರಂಭವಾಗುತ್ತಿದ್ದಂತೆ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರು ತಮ್ಮ ಆರಂಭಿಕ ಮಾತುಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ,"ಸಂವಿಧಾನದ ಗಂಭೀರ ವಿದ್ಯಾರ್ಥಿ" ಎಂದು ಉಲ್ಲೇಖಿಸಿದರು. ಈ ಕಾಯ್ದೆ ಜಾರಿಗೆ ತರುವುದರ ಹಿಂದೆ ಮುಖ್ಯಮಂತ್ರಿಗಳ ಸಾಮಾಜಿಕ ಬದ್ಧತೆಯನ್ನು ಅರ್ಥ ಮಾಡಿಕೊಳ್ಳಬೇಕು. ಮುಖ್ಯಮಂತ್ರಿಗಳ ಮತ್ತು ಕಾಯ್ದೆಯ ಆಶಯ ಮತ್ತು ಉದ್ದೇಶಕ್ಕೆ ಧಕ್ಕೆ ಆಗದಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾಯ್ದೆಯನ್ವಯ ನಿಮ್ಮ ಮೇಲೆ ಕ್ರಮ ಕೈಗೊಳ್ಳುತ್ತೇವೆ

ಎಸ್.ಸಿ.ಎಸ್.ಪಿ./ ಟಿಎಸ್.ಪಿ. ಅನುದಾನ ಖರ್ಚು ಮಾಡದಿದ್ದರೆ, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾಯ್ದೆ ಹೇಳುತ್ತದೆ. ಕಾಯ್ದೆ ಗಂಭೀರವಾಗಿದೆ. ಅದರಂತೆ ಯಾರು ನಿರ್ಲಕ್ಷ್ಯ ಮಾಡುತ್ತಾರೆ, ಅವರ ವಿರುದ್ಧ ಕಾಯ್ದೆಯನ್ವಯ ಕ್ರಮ ಕೈಗೊಳ್ಳುತ್ತೇನೆ ಎಂದು ಎಚ್ಚರಿಕೆ ನೀಡಿದರು.


ಪ್ರತಿ ಇಲಾಖೆಯು ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಯೋಜನೆಗಳ ಅನುಷ್ಠಾನದ ನಂತರ ಪರಿಣಾಮದ ಮೌಲ್ಯಮಾಪನ ವರದಿಯನ್ನೂ ಸಿದ್ಧಪಡಿಸಿ ಫಲಾನುಭವಿಗಳ ಸ್ಥಿತಿಗತಿಯಲ್ಲಿ ಆಗಿರುವ ಬದಲಾವಣೆ ಕುರಿತು ಮಾಹಿತಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು. ತಮ್ಮ ಸರ್ಕಾರದ ಹಿಂದಿನ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಸಮಗ್ರ ಅಭಿವೃದ್ಧಿಗಾಗಿ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ. ಅಧಿನಿಯಮ 2013 ಮತ್ತು ನಿಯಮ 2017 ನ್ನು ಜಾರಿಗೆ ತರಲಾಗಿದೆ. ಇದರನ್ವಯ ಅಭಿವೃದ್ಧಿ ಯೋಜನೆಗಳಿಗೆ ಹಂಚಿಕೆ ಮಾಡಿರುವ ಅನುದಾನದ ಶೇ. 24.10 ರಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಗಳಡಿ ಒದಗಿಸಲಾಗುತ್ತಿದೆ. ಈ ಯೋಜನೆಯ ಅನುದಾನ ನೇರವಾಗಿ ಈ ಸಮುದಾಯಗಳಿಗೇ ತಲುಪಬೇಕು ಎಂಬ ಉದ್ದೇಶದಿಂದ ಕಾಯ್ದೆ ರೂಪಿಸಲಾಗಿದೆ. ಆದ್ದರಿಂದ ಈ ಯೋಜನೆಗಳ ಅನುಷ್ಠಾನಕ್ಕೆ ಅಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡಬೇಕು ಎಂದು ತಿಳಿಸಿದರು.

ಅರ್ಜಿ ಆಹ್ವಾನ

ಮಂಡ್ಯ, ಜು.31– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ/ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆ.16 ಕೊನೆ ದಿನ. ತಾಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆ ವೆಬ್‌ಸೈಟ್ https://bcwd.karnataka.gov.in ಅನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.hostels@karnataka.gov.in ಮೂಲಕ ಅಥವಾ ಜಿಲ್ಲಾ/ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಹಾಯವಾಣಿ 8050770005 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಶಕ್ತಿ ಯೋಜನೆ; ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳ ಮೊದಲ ವಾರದಲ್ಲಿ ಟಿಕೆಟ್ ಮೌಲ್ಯ ಪಾವತಿಗೆ ಸರ್ಕಾರ ನಿರ್ಧಾರ



ಬೆಂಗಳೂರು: ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣವನ್ನು ಒದಗಿಸುವ ಶಕ್ತಿ ಯೋಜನೆ ಪ್ರಾರಂಭವಾದ ಸುಮಾರು ಎರಡು ತಿಂಗಳ ನಂತರ, ರಾಜ್ಯ ಸರ್ಕಾರವು ಕೆಎಸ್‌ಆರ್‌ಟಿಸಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ), ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಮತ್ತು ಬಿಎಂಟಿಸಿ ನಿಗಮಗಳಿಗೆ ಪ್ರತಿ ತಿಂಗಳ ಮೊದಲ ವಾರದಲ್ಲಿ ಯೋಜನೆಯ ಟಿಕೆಟ್ ಮೌಲ್ಯವನ್ನು ಮರುಪಾವತಿಸಲು ನಿರ್ಧರಿಸಿದೆ.

ಕೆಎಸ್‌ಆರ್‌ಟಿಸಿ ಅಧಿಕಾರಿಯೊಬ್ಬರು ಮಾತನಾಡಿ, ಜೂನ್ ತಿಂಗಳ 248.30 ಕೋಟಿ ರೂ.ಗಳನ್ನು ಆಗಸ್ಟ್ ಮೊದಲ ವಾರದಲ್ಲಿ ಪಡೆಯಲಿದ್ದಾರೆ ಮತ್ತು ಜುಲೈ ತಿಂಗಳ ಮೊತ್ತವನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ಬಿಡುಗಡೆ ಮಾಡಲಾಗುತ್ತದೆ ಎಂದರು.

ಶಕ್ತಿ ಯೋಜನೆ ಪ್ರಾರಂಭವಾದ ನಂತರ ನಾಲ್ಕು ಬಸ್ ನಿಗಮಗಳ ಸರಾಸರಿ ದೈನಂದಿನ ಪ್ರಯಾಣಿಕರ ಸಂಖ್ಯೆ ಗಗನಕ್ಕೇರಿದೆ. ಈ ಹಿಂದೆ ದಿನಕ್ಕೆ ಸುಮಾರು 84 ಲಕ್ಷ ಮಂದಿ ಪ್ರಯಾಣಿಸುತ್ತಿದ್ದರು. ಶಕ್ತಿ ಯೋಜನೆ ಪ್ರಾರಂಭವಾದ ನಂತರ ಇದು ಒಂದು ಕೋಟಿ ದಾಟಿದೆ. ಮಹಿಳಾ ಪ್ರಯಾಣಿಕರು ಮಾತ್ರವಲ್ಲದೆ, ಬಸ್‌ಗಳಲ್ಲಿ ಪ್ರಯಾಣಿಸುವ ಪುರುಷರ ಸಂಖ್ಯೆಯೂ ಹೆಚ್ಚಾಗಿದೆ.

ರಾಜ್ಯ ಬಜೆಟ್‌ನಲ್ಲಿ ಶಕ್ತಿ ಯೋಜನೆಗೆ 2,800 ಕೋಟಿ ರೂ.ಗಳನ್ನು ಕಾಯ್ದಿರಿಸಿದ್ದರೂ, ಈವರೆಗೆ ಶಕ್ತಿ ಯೋಜನೆಯಡಿಯಲ್ಲಿ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಮಾಡಿದ್ದ ಮಹಿಳೆಯರ ಟಿಕೆಟ್ ಮೌಲ್ಯವನ್ನು ಬಸ್ ನಿಗಮಗಳಿಗೆ ಮರುಪಾವತಿ ಮಾಡಿರಲಿಲ್ಲ. ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಬಸ್ ನಿಗಮಗಳನ್ನು ಆರ್ಥಿಕ ಬಿಕ್ಕಟ್ಟಿಗೆ ತಳ್ಳುವುದಿಲ್ಲ ಮತ್ತು ಮಹಿಳೆಯರಿಗೆ ನೀಡಲಾದ ಶೂನ್ಯ ಟಿಕೆಟ್ ನಿಂದ ಉತ್ಪತ್ತಿಯಾಗುವ ಒಟ್ಟು ಟಿಕೆಟ್ ಮೌಲ್ಯದ ಆಧಾರದ ಮೇಲೆ ನಿಗಮಗಳಿಗೆ ಮರುಪಾವತಿ ಮಾಡಲಾಗುವುದು ಎಂದು ಹೇಳಿದ್ದಾರೆ. ಬಜೆಟ್‌ನಲ್ಲಿ ಶಕ್ತಿ ಯೋಜನೆಗೆ ಸರ್ಕಾರ 2,800 ಕೋಟಿ ರೂ.ಗಳನ್ನು ಕಾಯ್ದಿರಿಸಿದೆ. ಈ ಯೋಜನೆಯು ಜೂನ್ 11 ರಂದು ಪ್ರಾರಂಭವಾಗಿರುವುದರಿಂದ, ಈ ಆರ್ಥಿಕ ವರ್ಷದ ಅಂತ್ಯದವರೆಗೆ ಈ ಮೊತ್ತವು ಸಾಕಾಗುತ್ತದೆ ಎಂದು ನಾವು ಭಾವಿಸುತ್ತೇವೆ' ಎಂದು ಅಧಿಕಾರಿ ಹೇಳಿದರು.

ಬಸ್ ನಿಗಮಗಳು ಹಣದ ಕೊರತೆಯನ್ನು ಎದುರಿಸುತ್ತಿರುವುದರಿಂದ ಮುಂಗಡವಾಗಿ ಮೊತ್ತವನ್ನು ಪಡೆಯಲು ಬಯಸುತ್ತೀರಾ ಎಂದು ಅಧಿಕಾರಿಯನ್ನು ಕೇಳಿದಾಗ, ನಾವು ಶಕ್ತಿ ಯೋಜನೆಯ ವೆಚ್ಚವನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರವೇ ಅವರು ಅದನ್ನು ಮರುಪಾವತಿ ಮಾಡಬಹುದು ಎಂದರು.

ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ಬಸ್ ನಿಗಮದ ಆದಾಯವೂ ಹೆಚ್ಚಿದೆ. ಯೋಜನೆಯು ಯಶಸ್ವಿಯಾಗುತ್ತದೆ ಎಂದು ನಾವು ನಿರೀಕ್ಷಿಸಿದ್ದೆವು. ಆದರೆ, ಈ ಪ್ರಮಾಣದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ. ಈ ಹಠಾತ್ ಜಿಗಿತವನ್ನು ನಿರೀಕ್ಷಿಸಲಾಗಿತ್ತು. ಏಕೆಂದರೆ, ಇಂತಹ ಯೋಜನೆಗಳಿಗೆ ಯಾವಾಗಲೂ ಅಂತಹ ಶಕ್ತಿ ಇರುತ್ತದೆ. ಶಕ್ತಿ ಯೋಜನೆಯಡಿಲ್ಲಿನ ಪ್ರಯಾಣಿಕರ ಸಂಖ್ಯೆಯ ಮೇಲೆ ನಿಗಾ ಇಡುತ್ತಿದ್ದೇವೆ. ಸದ್ಯ ಪ್ರಯಾಣಿಕರ ಸಂಖ್ಯೆಯೊಂದಿಗೆ, ಈ ಯೋಜನೆಗಾಗಿ ಬಸ್ ನಿಗಮಗಳಿಗೆ ತಿಂಗಳಿಗೆ ಸುಮಾರು 400 ಕೋಟಿ ರೂ. ಅಗತ್ಯವಿದೆ ಎಂದರು.

ಮೂರನೇ ಪುಟದಿಂದ

ಅದ್ದೂರಿ ದಸರಾ

ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿ ಸುವಂತಿರಬೇಕು. ನಿಮ್ಮ ಹಳೆಯ ಮಾದರಿಗಳನ್ನು ಈ ಬಾರಿ ಕೈಬಿಟ್ಟು, ಹೊಸ ಮಾದರಿ ಮತ್ತು ವಿನ್ಯಾಸ ಬಳಸಿ, ಆಗ ಜನಾಕರ್ಷಿತವಾಗಿ ನಾವು ಮಾಡಿದ ಕೆಲಸಕ್ಕೂ ಬೆಲೆ ಬರುತ್ತದೆ. ಈ ಬಾರಿಯ ಜಂಬೂಸವಾರಿ ಮತ್ತು ಪಂಜಿನ ಮೆರವಣಿಗೆಯಲ್ಲೂ ವಿಶೇಷತೆ ಎದ್ದು ಕಾಣಬೇಕು.

ಸ್ಥಳೀಯ ಕಲಾವಿದರಿಗೆ ಆದ್ಯತೆ: ಯುವ ದಸರಾದಲ್ಲೂ ಗಮನಾರ್ಹ ಬದಲಾವಣೆ ತಂದು ಸ್ಥಳೀಯ ಕಲಾವಿದರು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ. ಆದರೆ, ಇದರಲ್ಲಿ ಗೋಜಲು ಮಾಡಬೇಡಿ ಎಂದು ಹೇಳಿದರು. ಪ್ರತಿ ಬಾರಿಯು ಯುವ ದಸರಾ ಒಂದಲ್ಲ ಒಂದು ಗೋಜಲಿನಿಂದ ಕೂಡಿದ್ದು, ನಮಗೂ ಬೇಸರ ತಂದಿದೆ ಎಂದರು.

ಮೈಸೂರು ಬ್ರಾಂಡ್ ಬದಲಾಗಬೇಕು: ಇದೇ ಸಂದರ್ಭದಲ್ಲಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದಸರಾ ಹಬ್ಬದಿಂದ ಮೈಸೂರು ನಗರದ ಬ್ರಾಂಡ್ ಬದಲಾಗಬೇಕು. ನಗರದ ಶೇ.10ರಷ್ಟು ಅಭಿವೃದ್ಧಿಯ ಬೆಳವಣಿಗೆ ಕಾಣಬೇಕು. ಇದು ಕೇವಲ ಮೈಸೂರು ನಗರಕ್ಕೆ ಸೀಮಿತವಲ್ಲ. ಸುತ್ತಮುತ್ತಲ ನಾಲ್ಕು ಜಿಲ್ಲೆಗಳಿಗೆ ಸಂಬಂಧಿಸಿದೆ. ನಾಡಹಬ್ಬವನ್ನು ಜಾಗತಿಕ ಮಟ್ಟದಲ್ಲಿ ಗಮನಸೆಳೆಯುವಂತೆ ಮಾಡಿ. ಶಕ್ತಿಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣದ ವ್ಯವಸ್ಥೆ ನೀಡಿರುವುದರಿಂದ ದಸರಾ ವೀಕ್ಷಣೆಗೆ ಅವರು ಮುಗಿಬೀಳುತ್ತಾರೆ. ಎಷ್ಟೇ ಪ್ರವಾಸಿಗರು ಬಂದರೂ ಅವಕಾಶ ಕಲ್ಪಿಸಿ ಎಂದು ಜಿಲ್ಲಾಡಳಿತಕ್ಕೆ ಸೂಚನೆ ಮತ್ತು ಎಚ್ಚರಿಕೆ ನೀಡಿದ ಶಿವಕುಮಾರ್, ಪ್ರವಾಸಿಗರೆಲ್ಲರಿಗೂ ನೀರು, ಊಟ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲು ವಿಶೇಷ ಆಸಕ್ತಿ ವಹಿಸಿ ಎಂದು ಹೇಳಿದರು. ಸಭೆಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವರಾದ ಶಿವರಾಜ ತಂಗಡಗಿ, ಹೆಚ್.ಕೆ.ಪಾಟೀಲ್, ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ, ತನ್ವೀರ್ ಸೇಠ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮೇಯರ್ ಶಿವಕುಮಾರ್, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಇನ್ನಿತರರು ಭಾಗವಹಿಸಿದ್ದರು.

ಸೆ.1ರಂದು ಗಜಪಡೆ ಆಗಮನ

ಶ್ರೀ ಚಾಮುಂಡೇಶ್ವರಿ ರಥೋತ್ಸವ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ಜರುಗಲಿವೆ.

ಗಜಪೂಜೆ: ಸೆ.1 ರಂದು ಬೆಳಗ್ಗೆ 9.45 ರಿಂದ 10.15ರ ನಡುವಿನ ತುಲಾ ಲಗ್ನದಲ್ಲಿ ವೀರನಹೊಸಹಳ್ಳಿ ಗ್ರಾಮದಿಂದ ಗಜಾ ಪೂರ್ವಕ ಪ್ರಯಾಣ ಆರಂಭವಾಗಲಿದೆ. ಸೆ.4 ರಂದು ಸಂಜೆ 6 ರಿಂದ 6.30ರ ನಡುವಿನ ಕುಂಭ ಲಗ್ನ ಗೋಧೂಳೀ ಸಮಯದಲ್ಲಿ ಮೈಸೂರು ಅರಮನೆಗೆ ಗಜಲಕ್ಷ್ಮಿಯರ ಪ್ರವೇಶ ಮತ್ತು ಗಜ ಪೂಜೆ ನಡೆಯಲಿದೆ. ಅ.26 ರಂದು ಬೆಳಗ್ಗೆ 10.40 ರಿಂದ 11 ಗಂಟೆ ನಡುವಿನ ಧನುರ್ ಲಗ್ನದಲ್ಲಿ ಮೈಸೂರು ಅರಮನೆಯಿಂದ ವೀರನಹೊಸಹಳ್ಳಿಗೆ ಜಗಪಡೆ ಮರುಪ್ರಯಾಣ ಬೆಳೆಸಲಿವೆ.

ಹೃದಯಾಘಾತದಿಂದ ಡಾ.ಕೆ.ಭೈರಪ್ಪ ನಿಧನ

ಅವರ ಪತ್ನಿ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕಿ ಡಾ.ಕೆ.ಟಿ. ಸುನಿತಾ, ಪುತ್ರರಾದ ಯುಎಸ್‌ಎಯಲ್ಲಿ ಸ್ಯಾಮ್‌ಸಂಗ್ ಕಂಪನಿ ಮ್ಯಾನೇಜರ್ ಆಗಿರುವ ಡಾ.ಶಯನ್ ಭೈರಪ್ಪ, ಮೈಸೂರು ವಿಶ್ವವಿದ್ಯಾನಿಲಯದ ಸಂದರ್ಶಕ ಪ್ರಾಧ್ಯಾಪಕ ಡಾ. ನಯನ್ ಭೈರಪ್ಪ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ನಾಳೆ (ಆ.1) ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ (VTU)ದ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲೆಂದು ಡಾ. ಭೈರಪ್ಪ ಇಂದು ಮುಂಜಾನೆ 3.30 ಗಂಟೆಗೆ ಮೈಸೂರಿನಿಂದ ಕಾರಿನಲ್ಲಿ ಪ್ರಯಾಣ ಬೆಳೆಸಿ, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪುತ್ತಿದ್ದಂತೆಯೇ ಮುಂಜಾನೆ 5.30 ರಿಂದ 6 ಗಂಟೆ ವೇಳೆಗೆ ಎದೆ ನೋವಿನಿಂದ ಕುಸಿದು ಬಿದ್ದು, ಸಾವನ್ನಪ್ಪಿದರು.

ಮಧ್ಯಾಹ್ನ ಪಾರ್ಥಿವ ಶರೀರವನ್ನು ನಾಗಮಂಗಲ ತಾಲೂಕು, ಬೆಳ್ಳೂರು ಕ್ರಾಸ್ ಬಳಿಯ ಬಿಜಿಎಸ್ ನಗರದ ಆದಿ ಚುಂಚನಗಿರಿ ವಿಶ್ವವಿದ್ಯಾನಿಲಯಕ್ಕೆ ತಂದು ಸಾರ್ವಜನಿಕರ ದರ್ಶನಕ್ಕಿಡಲಾಗಿತ್ತು. ನಂತರ ರಾತ್ರಿ ಮೈಸೂರಿನ ವಿಜಯನಗರ 3ನೇ ಹಂತದ ಅವರ ನಿವಾಸಕ್ಕೆ ತರಲಾಗಿದ್ದು, ಅಮೆರಿಕಾದಲ್ಲಿರುವ ಅವರ ಪುತ್ರ ಹಾಗೂ ಸೊಸೆ ಬಂದ ನಂತರ ನಾಳೆ (ಆ.1) ಇಲ್ಲವೆ ಬುಧವಾರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ರ್‍ಯಾಂಕ್ ಹಾಗೂ ಪದಕದೊಂದಿಗೆ ಸ್ನಾತಕೋತ್ತರ ಪದವಿ ಪಡೆದಿದ್ದ, ಡಾ.ಕೆ.ಭೈರಪ್ಪ ನಂತರ ಪಿಹೆಚ್.ಡಿ ಮಾಡಿದ್ದರು. ಮೈಸೂರು ವಿವಿಯ ವಿವಿಧ ಹುದ್ದೆಗಳಲ್ಲಿ 31 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಅವರು, 2014ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕಗೊಂಡಿದ್ದರು. ನಂತರ 2018ರಿಂದ ನಾಗಮಂಗಲದ ಆದಿಚುಂಚನಗಿರಿ ವಿವಿಯ ಸಮ ಉಪಕುಲಪತಿ ಆಗಿ ಸೇವೆ ಸಲ್ಲಿಸುತ್ತಿದ್ದ ಡಾ.ಭೈರಪ್ಪ ಅವರು, ಮೆಟೀರಿಯಲ್ ಸೈನ್ಸ್ ನ್ಯಾನೋ ಟೆಕ್ನಾಲಜಿ, ಸಾಲಿಡ್ ಸ್ಟೇಟ್ ಸೈನ್ಸ್, ಕ್ರಿಸ್ಟಲ್ ಗ್ರೋತ್, ಕೆಮಿಸ್ಟ್ರಿ ಆಫ್ ಮೆಟೀರಿಯಲ್, ಕ್ರಿಸ್ಟಲೋಗ್ರಫಿ, ಕ್ರಿಸ್ಟಲ್ ಕೆಮಿಸ್ಟ್ರಿ, ಎಕ್ಸ್‌ಪೆರಿಮೆಂಟಲ್ ಮಿನರಾಲಜಿ ಹಾಗೂ ಎನ್‌ವೈರ್ನಮೆಂಟಲ್ ಸೈನ್ಸ್ ವಿಷಯಗಳಲ್ಲಿ ವಿಶೇಷ ಪ್ರಾವೀಣ್ಯತೆ ಪಡೆದಿದ್ದರು. ಡಾ. ಭೈರಪ್ಪ ನಿಧನಕ್ಕೆ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ, ಮಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಕುಲಪತಿಗಳು, ವಿಶ್ರಾಂತ ಕುಲಪತಿಗಳು, ಪ್ರಾಧ್ಯಾಪಕರು, ಅಧಿಕಾರಿವರ್ಗ, ಸಿಬ್ಬಂದಿ ತೀವ್ರ ಸಂತಾಪ ಸೂಚಿಸಿದೆ.

ರಾಜ್ಯ ಸಚಿವರು, ಪಕ್ಷದ ಮುಖಂಡರಿಗೆ ಕೈ ಹೈಕಮಾಂಡ್ ಬುಲಾವ್



ಬೆಂಗಳೂರು: ಲೋಕಸಭಾ ಚುನಾವಣೆಗೆ ಕಾರ್ಯತಂತ್ರ ರೂಪಿಸುವ ಬಗ್ಗೆ ಚರ್ಚೆ ನಡೆಸಲು ಕರ್ನಾಟಕದ ಸಚಿವರು, ಪಕ್ಷದ ಮುಖಂಡರಿಗೆ ಕಾಂಗ್ರೆಸ್ ಹೈಕಮಾಂಡ್ ಬುಲಾವ್ ನೀಡಿದೆ ಎಂದು ಉಪಮುಖ್ಯಮಂತ್ರಿಗಳೂ ಆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆ.2ರಂದು ಆಹ್ವಾನಿತ ಮುಖಂಡರು ನವದೆಹಲಿಗೆ ತೆರಳಲಿದ್ದಾರೆ. ಆಡಳಿತಾರೂಢ ಪಕ್ಷದಲ್ಲಿ ಅಸಮಾಧಾನ ತಲೆದೋರಿರುವ ಲಕ್ಷಣಗಳು ಗೋಚರಿಸಿರುವ ಬೆನ್ನಲ್ಲೇ ನಡೆಯುತ್ತಿರುವ ಈ ಸಭೆ ಕುತೂಹಲ ಮೂಡಿಸಿದೆ. ಇತ್ತೀಚೆಗೆ ಪಕ್ಷದ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿಲ್ಲ, ಕೆಲವು ಸಚಿವರು ಸರಿಯಾಗಿ ನಡೆದುಕೊಳ್ಳುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದ್ದರು.

ಸಂಸತ್ ಚುನಾವಣೆ ಕಾರ್ಯತಂತ್ರದ ಬಗ್ಗೆ ಚರ್ಚೆ ಸಾಧ್ಯತೆ

ಹೌದು, ನಮಗೆ ರಾಜಕೀಯ ಅಜೆಂಡಾ ಇದೆ. ಸಂಸತ್ ಚುನಾವಣೆಗೆ ನಾವು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕಿದೆ. ಲೋಕಸಭಾ ಚುನಾವಣೆ ಹಾಗೂ ಟಿಕೆಟ್ ಹಂಚಿಕೆ ಪ್ರಕ್ರಿಯೆಗಾಗಿ ನಾನು ನಾಯಕರಿಗೆ ಅವರ ಜವಾಬ್ದಾರಿಗಳನ್ನು ಹಂಚಿಕೆ ಮಾಡಬೇಕಿದೆ ಎಂದು ಡಿ.ಕೆ.ಶಿವಕುಮಾರ್ ಹೈಕಮಾಂಡ್ ಬುಲಾವ್ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ್ದಾರೆ.

ಸಂಸತ್ ಚುನಾವಣೆಗೆ ಅಭ್ಯರ್ಥಿಗಳನ್ನು ಹೇಗೆ ಆಯ್ಕೆ ಮಾಡಬೇಕು. ಯಾವುದೇ ಸಚಿವರು ಅಥವಾ ಶಾಸಕರನ್ನು ಕಣಕ್ಕೆ ಇಳಿಸಬೇಕೇ. ಯಾರಿಗೆ ಜವಾಬ್ದಾರಿ ನೀಡಬೇಕು ಎಂಬ ಅಂಶಗಳ ಬಗ್ಗೆ ನಾವು ಮಾನದಂಡಗಳನ್ನು ನಿಗದಿಪಡಿಸಬೇಕಿದೆ ಆದ್ದರಿಂದ ಎಲ್ಲಾ ಹಿರಿಯ ನಾಯಕರ ಸಭೆಯನ್ನು ಹೈಕಮಾಂಡ್ ಕರೆದಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲಾ ಸೇರಿದಂತೆ ಇತರರು ದೆಹಲಿ ಸಭೆಯಲ್ಲಿ ಭಾಗವಹಿಸುವ ಸಾಧ್ಯತೆಯಿದೆ. ಪಕ್ಷದಲ್ಲಿನ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ಸಭೆ ಕರೆಯಲಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿರುವ ಡಿ.ಕೆ.ಶಿವಕುಮಾರ್, ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ ಮತ್ತು ಕೆಲವು ಶಾಸಕರು ಸಿಎಲ್‌ಪಿ ಸಭೆಗೆ ಮನವಿ ಮಾಡಿದ್ದಾರೆ, ಅದರಂತೆ ಕಳೆದ ವಾರ ನಡೆದಿತ್ತು ಎಂದಷ್ಟೇ ಹೇಳಿದ್ದಾರೆ.

ಪೊಲೀಸರು ಏನು ಮಾಡುತ್ತಿದ್ದರು?: ಮಣಿಪುರ ವೈರಲ್ ವೀಡಿಯೋ ಕುರಿತು ಸುಪ್ರೀಂಕೋರ್ಟ್ ತರಾಟೆ



ನವದೆಹಲಿ: ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರ ಮತ್ತು ಮೇ 4ರಂದು ನಡೆದ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಘಟನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಸೋಮವಾರ ಕೇಂದ್ರ ಮತ್ತು ಮಣಿಪುರ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಮಣಿಪುರದಲ್ಲಿ ಇಬ್ಬರು ಮಹಿಳೆಯರ ಬೆತ್ತಲೆ ಮೆರವಣಿಗೆ ಮಾಡಿದ ವಿಡಿಯೋ "ಭಯಾನಕ" ಎಂದು ಆಕ್ರೋಶ ವ್ಯಕ್ತಪಡಿಸಿದ ಸುಪ್ರೀಂಕೋರ್ಟ್, ಪೊಲೀಸರು ಏನು ಮಾಡುತ್ತಿದ್ದರು?, ಎಫ್‌ಐಆರ್‌ಗೆ ಸಂಬಂಧಿಸಿದಂತೆ ಇದುವರೆಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ವಾಸ್ತವಿಕವಾಗಿ ಪೊಲೀಸರೇ ಮಹಿಳೆಯರನ್ನು ಗಲಭೆಕೋರರ ಗುಂಪಿಗೆ ಒಪ್ಪಿಸಿರುವುದರಿಂದ ರಾಜ್ಯ ಪೊಲೀಸರು ಈ ವಿಷಯವನ್ನು ತನಿಖೆ ಮಾಡಲು ಬಯಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಕಿಡಿಕಾರಿದೆ. ಹಿಂಸಾಚಾರ ಪೀಡಿತ ರಾಜ್ಯದ ಪರಿಸ್ಥಿತಿಯನ್ನು ಮೇಲ್ವಿಚಾರಣೆ ನಡೆಸಲು ನಾಳೆ ಕೇಂದ್ರ ಮತ್ತು ಮಣಿಪುರವನ್ನು ಪ್ರತಿನಿಧಿಸುವ ಕಾನೂನು ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ಅಥವಾ ಮಾಜಿ ನ್ಯಾಯಾಧೀಶರನ್ನು ಒಳಗೊಂಡ ಸಮಿತಿ ರಚಿಸಬಹುದು ಎಂದು ಸುಪ್ರೀಂಕೋರ್ಟ್ ಹೇಳಿದೆ. ವೈರಲ್ ವಿಡಿಯೋ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ್ದಕ್ಕಾಗಿ ಮಣಿಪುರ ಪೊಲೀಸರನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂಕೋರ್ಟ್, ಮೇ 4ರಂದು ನಡೆದ ಭಯಾನಕ ಘಟನೆ ಬಗ್ಗೆ ತಕ್ಷಣ ಎಫ್‌ಐಆರ್ ಏಕೆ ದಾಖಲಿಸಲಿಲ್ಲ ಮತ್ತು ಎಫ್‌ಐಆರ್ ದಾಖಲಿಸಲು ರಾಜ್ಯ ಪೊಲೀಸರಿಗೆ 14 ದಿನಗಳು ಏಕೆ ಬೇಕಾಯಿತು ಎಂದು ಪ್ರಶ್ನಿಸಿದೆ.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ನೇತೃತ್ವದ ಪೀಠ, ವಿಡಿಯೋದಲ್ಲಿ ತೋರಿಸಿರುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಘಟನೆಯು ಪ್ರತ್ಯೇಕ ಘಟನೆಯಲ್ಲ ಮತ್ತು ಅಂತಹ ಹಲವಾರು ಘಟನೆಗಳು ನಡೆದಿರಬಹುದು ಎಂದು ಊಹಿಸಿದೆ.

ಮೇ 4ರಂದು ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇ 18 ರಂದು ಎಫ್‌ಐಆರ್ ದಾಖಲಾಗಿತ್ತು ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆದ ಬಳಿಕವಷ್ಟೇ ಆರೋಪಿಗಳನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಅಪ್ರಾಪ್ತ ಸೇರಿದಂತೆ 7 ಆರೋಪಿಗಳನ್ನು ಬಂಧಿಸಲಾಗಿದೆ.

ಉದ್ಯೋಗಕ್ಕಾಗಿ ಭೂಮಿ ಹಗರಣ ಲಾಲು ಯಾದವ್, ಕುಟುಂಬಕ್ಕೆ ಸೇರಿದ 6 ಕೋಟಿ ಮೌಲ್ಯದ ಆಸ್ತಿ ವಶ



ಪಾಟ್ನ: ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಲಾಲೂ ಪ್ರಸಾದ್ ಯಾದವ್ ಹಾಗೂ ಕುಟುಂಬಕ್ಕೆ ಸೇರಿದ 6 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ ವಶಕ್ಕೆ ಪಡೆದಿದೆ. ಲಾಲೂ ಪ್ರಸಾದ್ ಯಾದವ್ ಹಾಗೂ ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ 3ನೇ ಬಾರಿಗೆ ವಶಕ್ಕೆ ಪಡೆಯುತ್ತಿದೆ. ಜಾರಿ ನಿರ್ದೇಶನಾಲಯ ಆಸ್ತಿಗಳನ್ನು ವಶಕ್ಕೆ ಪಡೆಯುತ್ತಿದ್ದಾಗ ಲಾಲೂ ಪ್ರಸಾದ್ ಯಾದವ್ ಬ್ಯಾಡ್ಮಿಂಟನ್ ಆಡುತ್ತಿದ್ದರು. ಈಗ ಆ ವೀಡಿಯೋ ವೈರಲ್ ಆಗತೊಡಗಿದೆ.

ಜಾರಿ ನಿರ್ದೇಶನಾಲಯದ ದಾಳಿ ಬೆನ್ನಲ್ಲೇ ಬಿಹಾರ ಬಿಜೆಪಿ ಮುಖ್ಯಸ್ಥ ಸಮರ್ಥ್ ಚೌಧರಿ ಪ್ರತಿಕ್ರಿಯೆ ನೀಡಿದ್ದು, ಈಗ ಆರ್‌ಜೆಡಿ ಜೊತೆ ಮೈತ್ರಿ ಮಾಡಿಕೊಂಡಿರುವ ಜೆಡಿಯು ಈ ಹಿಂದೆ, ಮಾಜಿ ರೈಲ್ವೆ ಸಚಿವರನ್ನು ಕ್ರಿಮಿನಲ್ ಎಂದು ಕರೆದಿತ್ತು ಅಷ್ಟೇ ಅಲ್ಲದೇ ಅವರು ರಾಜಕಾರಣ ಬಿಟ್ಟು ವಿಶ್ರಾಂತಿ ಪಡೆಯಬೇಕೆಂದು ಸಲಹೆ ನೀಡಿತ್ತು ಎಂಬುದನ್ನು ನೆನಪಿಸಿಕೊಂಡಿದ್ದಾರೆ

ಇದಕ್ಕೂ ಮುನ್ನ ಪಾಟ್ನಾದಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ್ದ ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಯಾದವ್, ತಮ್ಮ ಪಕ್ಷ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಿದ್ಧಾಂತದಲ್ಲಿ ನಂಬಿಕೆ ಹೊಂದಿದೆ. ಲೋಕಸಭಾ ಚುನಾವಣೆಗೆ, ಮುಂಬರುವ ಸಮಯದಲ್ಲಿ, ನಾವು ಮಹಾರಾಷ್ಟ್ರದಲ್ಲಿ ಸಭೆ ನಡೆಸಲಿದ್ದೇವೆ, ಅಲ್ಲಿ ನಾವು ಮುಂದಿನ ಕಾರ್ಯತಂತ್ರವನ್ನು ಅಂತಿಮ ಗೊಳಿಸುತ್ತೇವೆ ಎಂದು ಹೇಳಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	113.18 ಅಡಿ
ಒಳಹರಿವು	7464 ಕ್ಯುಸೆಕ್
ಹೊರಹರಿವು	3193 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2283.35 ಅಡಿ
ಒಳ ಹರಿವು	4252 ಕ್ಯುಸೆಕ್
ಹೊರ ಹರಿವು	3500 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2857.08 ಅಡಿ
ಒಳ ಹರಿವು	4051 ಕ್ಯುಸೆಕ್
ಹೊರ ಹರಿವು	3708 ಕ್ಯುಸೆಕ್

ಏಷ್ಯಾ ಒಲಂಪಿಕ್ ಪರಿಷತ್‌ಗೆ ರಣಧೀರ್ ಸಿಂಗ್ ಹಂಗಾಮಿ ಮುಖ್ಯಸ್ಥರಾಗಿ ಮುಂದುವರಿಕೆ

ನವದೆಹಲಿ: ಏಷ್ಯಾದ ಒಲಂಪಿಕ್ ಪರಿಷತ್‌ಗೆ ಹಂಗಾಮಿ ಮುಖ್ಯಸ್ಥರಾಗಿ ಮುಂದುವರಿಯುವಂತೆ ರಣಧೀರ್ ಸಿಂಗ್ ಅವರಿಗೆ ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ ಸೂಚನೆ ನೀಡಿದೆ ರಾಯ್ಟರ್ಸ್ ಈ ಬಗ್ಗೆ ಸುದ್ದಿ ಪ್ರಕಟಿಸಿದ್ದು, ಏಷ್ಯಾ ಒಲಂಪಿಕ್ ಪರಿಷತ್‌ನ ಚುನಾವಣೆಯನ್ನು ಮಾನ್ಯ ಮಾಡಲು ತಯಾರಿಲ್ಲದ ಕಾರಣ ಹಂಗಾಮಿ ಮುಖ್ಯಸ್ಥರನ್ನೇ ಮುಂದುವರಿಸುವ ತೀರ್ಮಾನ ಕೈಗೊಳ್ಳಲಾಗಿದೆ.

ಚೀನಾದಲ್ಲಿ ನಡೆಯಲಿರುವ, ಮುಂಬರುವ (ಸೆಪ್ಟೆಂಬರ್) ಏಷ್ಯನ್ ಗೇಮ್ಸ್‌ನಲ್ಲಿ ಒಲಂ ಪಿಕ್ ಕೌನ್ಸಿಲ್ ಆಫ್ ಏಷ್ಯಾದ ಮುಖ್ಯಸ್ಥರಾಗಿ ರಣಧೀರ್‌ಸಿಂಗ್ ಕಾರ್ಯನಿರ್ವಹಿಸಲಿದ್ದಾರೆ.

ಈ ವಾರದ ಆರಂಭದಲ್ಲಿ, IOC ಕುವೈತ್‌ನ ಶೇಖ್ ಅಹ್ಮದ್ ಅಲ್-ಫಹಾದ್ ಅಲ್-ಸಬಾಹ್ ಅವರನ್ನು ಮೂರು ವರ್ಷಗಳ ಕಾಲ ನಿಷೇಧಿಸಿತು, ಈ ತಿಂಗಳ OCA ಚುನಾವಣೆಗಳ ಮೇಲೆ ಅವರು "ನಿರಾಕರಿಸಲಾಗದ ಪ್ರಭಾವ" ಹೊಂದಿದ್ದರು.

ಭಾರೀ ಭದ್ರತೆಯೊಂದಿಗೆ ಮೈಸೂರಲ್ಲಿ ಜಿ-20ಯ ಥಿಂಕ್ 20 ಶೃಂಗಸಭೆ ಆರಂಭ

ಮೈಸೂರು, ಜು.31(ಆರ್‌ಕೆ)– ಮೈಸೂರಿನ ಎಂಜಿ ರಸ್ತೆಯ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮೂರು ದಿನಗಳ ಜಿ20ಯ ಥಿಂಕ್ 20 ಶೃಂಗಸಭೆ ಇಂದಿನಿಂದ ಆರಂಭವಾಯಿತು.





ವಿಶ್ವದ ಹಲವು ದೇಶಗಳ ಸುಮಾರು 250ಕ್ಕೂ ಹೆಚ್ಚು ಪ್ರತಿನಿಧಿಗಳು ಥಿಂಕ್ 20 ಶೃಂಗಸಭೆಯಲ್ಲಿ ಭಾಗವಹಿಸಿದ್ದು, ಪಾರಂಪರಿಕತೆ ಪ್ರವಾಸೋದ್ಯಮ, ಸುಸ್ಥಿರ ಅಭಿವೃದ್ಧಿ ಕುರಿತಂತೆ ಪಾಲಿಸಿ ವಿಷಯದ ಕುರಿತು ಚರ್ಚೆ ನಡೆಯುತ್ತಿದೆ. ಭಾನುವಾರ ಸಂಜೆಯಿಂದಲೇ ವಿದೇಶಿ ಗಣ್ಯರು, ಆಯಾಯ ರಾಷ್ಟ್ರಗಳ ರಾಯಭಾರಿಗಳು ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುತ್ತಿದ್ದು, ಅವರಿಗೆ ರ್‍ಯಾಡಿಸನ್ ಬ್ಲೂ ಪ್ಲಾಜಾ ಮತ್ತು ಸಯ್ಯಾಜಿರಾವ್ ರಸ್ತೆಯ ಹೈವೇ ಸರ್ಕಲ್‌ನಲ್ಲಿರುವ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ.

ಆ.2ರವರೆಗೆ ನಡೆಯಲಿರುವ ಶೃಂಗಸಭೆಗೆ ದಿ ಅಬ್ಸರ್‌ವರ್ ರೀಸರ್ಚ್ ಫೌಂಡೇಷನ್ (ORF) ಸಂಸ್ಥೆಯು ಪ್ರಾಯೋಜನೆ ನೀಡಿದೆ. ಜಿ 20ರ ಪಾಲಿಸಿ ವಿಷಯಗಳ ಮೇಲೆ ತಜ್ಞರು ಥಿಂಕ್ 20 ಶೃಂಗಸಭೆಯಲ್ಲಿ ಚರ್ಚಿಸಲಿದ್ದು, ವಿವಿಧ ರಾಷ್ಟ್ರಗಳ ಗಣ್ಯರು ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ.

ಸುಸ್ಥಿರ ಅಭಿವೃದ್ಧಿ, ಮೈಕ್ರೋಎಕನಾಮಿಕ್ ಅಂಡ್ ಟ್ರೇಡ್, ಮಹಿಳಾ ನೇತೃತ್ವದ ಅಭಿವೃದ್ಧಿ, ಡಿಜಿಟಲ್ ಟ್ರಾನ್ಸ್ ಫಾರ್ಮೇಷನ್, ಗ್ರೀನ್ ಟ್ರಾನ್ಸಿಷನ್, ಗ್ಲೋಬಲ್ ಫೈನಾನ್ಶಿಯಲ್ ಆರ್ಡರ್ ಮುಂತಾದ ವಿಷಯಗಳ ಬಗ್ಗೆ ಇಂದು ಮಧ್ಯಾಹ್ನದಿಂದ ಸಂಜೆವರೆಗೆ ನಡೆದ ಸಭೆಯಲ್ಲಿ ಚರ್ಚಿಸಲಾಯಿತು.



ಮಧ್ಯಾಹ್ನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಭೋಜನದ ನಂತರ ವಿದೇಶಿಗರು ಸಂಜೆ 6.30 ಗಂಟೆಗೆ ನಡೆದ ಮೊದಲ ಗೋಷ್ಠಿಯಲ್ಲಿ 'ಕಂಟಿನ್ಯುಟಿ ಕೋ ಆಪರೇಷನ್ ನ್ಯೂ ಹಾರಿಜಾನ್ಸ್ ಫಾರ್ ಟಿ20' ವಿಷಯದ ಮೇಲೆ ಸಮಾಲೋಚನೆ ನಡೆಸಿದರು. ಜಿ20 ರಾಷ್ಟ್ರಗಳ ಸಮಾಗಮ ಕುರಿತು ಸುದೀರ್ಘ ಮಾತುಕತೆ ನಡೆಯಿತು.

ಟಿ20 ಇಂಡಿಯಾ ಕೋರ್ ಗ್ರೂಪ್ ಅಧ್ಯಕ್ಷ ಮನೋಹರ್ ಪರಿಕ್ಕಾರ್ ಇನ್‌ಸ್ಟಿಟ್ಯೂಟ್ ಫಾರ್ ಡಿಫೆನ್ಸ್ ಸ್ಟಡೀಸ್ ಅಂಡ್ ಅನಾಲಿಸಿಸ್‌ನ ಡೈರೆಕ್ಟರ್ ಜನರಲ್ ಸುಜನ್ ಚಿನಾಯ್, ಬ್ರೆಜಿಲ್‌ನ ಇನ್‌ಸ್ಟಿಟ್ಯೂಟ್ ಆಫ್ ಅಪ್ಲೈಡ್ ಎಕನಾಮಿಕ್ ರೀಸರ್ಚ್ ಅಧ್ಯಕ್ಷ ಲೂಸಿಯಾನ ಸರ್ವೊ, ಇಂಡೋನೇಷಿಯಾದ ಯೂನಿವರ್ಸಿಟಿ ಆಫ್ ಇಂಡೋನೇಷಿಯಾ ಅರ್ಥಶಾಸ್ತ್ರ ಪ್ರಾಧ್ಯಾಪಕ ಬ್ಯಾಂಬರ್ಗ್ ಬ್ರೋಡ್ಜೋ ನಿಗೋರೋ, ಸೌತ್ ಆಫ್ರಿಕನ್ ಚೀಫ್ ಎಕ್ಸಿಕ್ಯೂಟಿವ್ ಎಲಿಜಬೆತ್ ಸಿಟಿರೋ ಮೆಲಸ್ ಟಿ20 ಸಮಿಟ್‌ನಲ್ಲಿ ವಿಚಾರ ಮಂಡನೆ ಮಾಡಿದರು.

ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೈಸೂರಿನ ಸಂಗೀತ, ಕಲೆ, ನೃತ್ಯ ಹಾಗೂ ಜಾನಪದ ಸೊಗಡನ್ನು ಕಂಡು ಸಂತಸಪಟ್ಟ ಪ್ರತಿನಿಧಿಗಳು, ನಾಳೆ (ಆ.1) ಬೆಳಗ್ಗೆ ಕೆಆರ್‌ಎಸ್, ಶ್ರೀರಂಗಪಟ್ಟಣಕ್ಕೆ ತೆರಳಿ ಪ್ರವಾಸಿ ತಾಣ ವೀಕ್ಷಿಸಿದ ನಂತರ ಸಂಜೆ ಮೈಸೂರು ಅರಮನೆಗೂ ಭೇಟಿ ನೀಡುವರು. ಆ.2 ರಂದು ಬೆಳಗ್ಗೆ ತಿ.ನರಸೀಪುರ ತಾಲೂಕಿನ ಸೋಮನಾಥಪುರ, ತಲಕಾಡು ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ಬಳಿಕ ರಾತ್ರಿ ಅರಮನೆ ವಿದ್ಯುದ್ದೀಪಾಲಂಕಾರ ವೀಕ್ಷಿಸುವರು.

ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ರಾಘವೇಂದ್ರ, ವಿದೇಶಿ ಗಣ್ಯರನ್ನು ಪ್ರವಾಸಿ ಕೇಂದ್ರಗಳಿಗೆ ಕರೆದೊಯ್ಯುದ್ದು ವೀಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡುತ್ತಿದ್ದಾರೆ.

ಥಿಂಕ್ 20 ಶೃಂಗಸಭೆಯಲ್ಲಿ ವಿದೇಶಿ ಗಣ್ಯರು ಭಾಗವಹಿಸಿರುವುದರಿಂದ ಅವರು ವಾಸ್ತವ್ಯ ಹೂಡಿರುವ ರ್‍ಯಾಡಿಸನ್ ಬ್ಲೂ, ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್ ಹಾಗೂ ಅವರು ಭೇಟಿ ನೀಡುವ ಪ್ರವಾಸಿ ತಾಣಗಳಿಗೆ ಭಾರೀ ಭದ್ರತೆ ಒದಗಿಸಲಾಗಿದೆ.

ದಸರಾ ಉನ್ನತ ಮಟ್ಟದ ಸಭೆಯಲ್ಲಿ ಬಿಡುಗಡೆಯಾಗದ ಗಜಪಡೆ ಪಟ್ಟಿ

- ಹೆಣ್ಣಾನೆಗಳ ಪ್ರೆಗ್ನೆನ್ಸಿ ಟೆಸ್ಟ್ ವರದಿ ಕೈ ಸೇರಿಲ್ಲ
- ಮುಂದಿನ ವಾರ ಪಟ್ಟಿ ಅಂತಿಮಗೊಳ್ಳುವ ನಿರೀಕ್ಷೆ
- ಆಗಸ್ಟ್ ಕೊನೆಯ ವಾರದಲ್ಲಿ ಗಜಪಯಣ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಜು.31– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯ ಪಟ್ಟಿ ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಬಿಡುಗಡೆಯಾಗಲಿಲ್ಲ. ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಆಯ್ಕೆ ಮಾಡುವ ಹೆಣ್ಣಾನೆಗಳಿಗೆ ಕಡ್ಡಾಯವಾಗಿ 'ಪ್ರೆಗ್ನೆನ್ಸಿ' ಟೆಸ್ಟ್ ಮಾಡಿಸಬೇಕೆಂಬ ಸೂಚನೆ ಹಿನ್ನೆಲೆಯಲ್ಲಿ ಪರೀಕ್ಷಾ ವರದಿ ಬಾರದ ಕಾರಣ ಜಂಬೋಪಡೆ ಅಂತಿಮ ಪಟ್ಟಿ ಮುಂದಿನ ವಾರ ಬಿಡುಗಡೆಯಾಗಲಿದೆ.





ದಸರಾ ಗಜಪಡೆಯ ಅಂತಿಮ ಪಟ್ಟಿ ಇನ್ನು ಸಿದ್ಧಗೊಂಡಿಲ್ಲ. ದಸರಾ ಮಹೋತ್ಸವಕ್ಕಾಗಿ ಗುರುತಿಸಿರುವ ಹೆಣ್ಣಾನೆಗಳ ಪ್ರೆಗ್ನೆನ್ಸಿ ಪರೀಕ್ಷೆ ವರದಿ ಇನ್ನು ಬಂದಿಲ್ಲ. ಇನ್ನು 3–4 ದಿನದಲ್ಲಿ ಆನೆಗಳ ಅಂತಿಮ ಪಟ್ಟಿ ಸಿದ್ಧಗೊಳಿಸಲಾಗುತ್ತದೆ. ಆ ಬಳಿಕ ಜಿಲ್ಲಾ ಸಮಿತಿಯು ಪಟ್ಟಿ ಬಿಡುಗಡೆ ಮಾಡಲಿದೆ. ಈ ಬಾರಿ 4 ಹೆಣ್ಣಾನೆ ಕರೆತರಲು ನಿರ್ಧರಿಸಲಾಗಿದೆ. ಉಳಿದಂತೆ 10 ಗಂಡಾನೆ ಗಜಪಡೆಯಲ್ಲಿರಲಿದೆ. **–ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ.**

ರಾಜ್ಯದಲ್ಲಿ ಹೊಸ ಸರ್ಕಾರ ಬಂದ ನಂತರ ಆಚರಿಸಲಾಗುತ್ತಿರುವ ಮೊದಲ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ಸರ್ಕಾರ ನಿರ್ಧರಿಸಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳುವಂತೆ ಹೈಪವರ್ ಕಮಿಟಿಯಲ್ಲಿ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಆದರೆ, ಈ ಸಭೆಯಲ್ಲಿ ಕೆಲ ಕಾರಣದಿಂದ ದಸರಾ ಗಜಪಡೆಯ ಅಂತಿಮ ಪಟ್ಟಿ ಆಯ್ಕೆಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗಲಿಲ್ಲ. ಗುರುತಿಸಲ್ಪಟ್ಟ ಹೆಣ್ಣಾನೆಗಳಿಗೆ ಮಾಡಿಸಲಾದ ಪ್ರೆಗ್ನೆನ್ಸಿ ಟೆಸ್ಟ್ ರಿಪೋರ್ಟ್ ಬರಲು ಇನ್ನು 2–3 ದಿನ ಬೇಕಾಗಿರುವುದರಿಂದ ಉನ್ನತಮಟ್ಟದ ಸಭೆಯಲ್ಲಿ ದಸರಾ ಗಜಪಡೆ ವಿಚಾರ ಚರ್ಚೆಗೆ ಬರಲಿಲ್ಲ. ಆದರೆ, ಜಂಬೂಸವಾರಿಗಾಗಿ ಉತ್ತಮ ಆನೆಗಳ ಆಯ್ಕೆಗೆ ಸೂಚನೆ ನೀಡಲಾಗಿದೆ.

10 ಗಂಡಾನೆ, 4 ಹೆಣ್ಣಾನೆ ತರಲು ನಿರ್ಧಾರ: 2023ನೇ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ 14 ಆನೆ ಕರೆತರಲು ನಿರ್ಧರಿಸಲಾಗಿದೆ. ವರಲಕ್ಷ್ಮೀ, ಲಕ್ಷ್ಮೀ (ದೊಡ್ಡಹರವೆ), ಸರಳ, ಕಾವೇರಿ, ವಿಜಯ,ಚೈತ್ರ, ರೂಪ, ಕುಮಾರಿ ಹೆಣ್ಣಾನೆಗಳಿಗೆ ಪ್ರೆಗ್ನೆನ್ಸಿ ಟೆಸ್ಟ್ ಮಾಡಿಸಲಾಗಿದೆ. ಇವುಗಳಲ್ಲಿ ನಾಲ್ಕು ಹೆಣ್ಣಾನೆಗಳನ್ನು ಆಯ್ಕೆ ಮಾಡಲಾಗುತ್ತದೆ. ಉಳಿದಂತೆ ಅಭಿಮನ್ಯು ನೇತೃತ್ವದಲ್ಲಿ 10 ಗಂಡಾನೆಗಳನ್ನು ಆಯ್ಕೆ ಮಾಡಲಾಗುತ್ತದೆ.

ಆಗಸ್ಟ್ ಕೊನೆ ವಾರ ಗಜಪಯಣ: ಅ.14ರಂದು ಮಹಾಲಯ ಅಮಾವಾಸ್ಯೆ ಇದೆ. ಅ.15ರಂದು ಬೆಳಗ್ಗೆ 10.15ರಿಂದ 10.30ರೊಳಗೆ ಸಲ್ಲುವ ಶುಭಲಗ್ನದಲ್ಲಿ ಈ ಸಾಲಿನ ದಸರಾ ಮಹೋತ್ಸವ ಉದ್ಘಾಟನೆಗೊಳ್ಳಲಿದೆ. ಅ.24ರಂದು ಜಂಬೂಸವಾರಿ ಮೆರವಣಿಗೆ ನೆರವೇರಲಿದೆ. ಈ ಹಿನ್ನೆಲೆಯಲ್ಲಿ ಜಂಬೂಸವಾರಿಗೆ 55 ರಿಂದ 60 ದಿನ ಮೊದಲೇ ಮೊದಲ ತಂಡದಲ್ಲಿ ಪ್ರಮುಖ ಆನೆಗಳನ್ನು ಕರೆ ತರಲು ನಿರ್ಧರಿಸಲಾಗಿದೆ. ಈ ಬಾರಿಯ ಗಜಪಯಣ ಆ.27ರಿಂದ 30ರೊಳಗೆ ದಿನಾಂಕ ನಿಗದಿ ಮಾಡಲಾಗುತ್ತದೆ. ಸೆಪ್ಟಂಬರ್ ಮೊದಲ ವಾರದಲ್ಲಿ ಆನೆಗಳು ಅರಮನೆ ಅಂಗಳ ಪ್ರವೇಶಿಸಲಿವೆ. ಗಂಡಾನೆ ಪಡೆಯಲ್ಲಿ ಧನಂಜಯ, ಗೋಪಿ, ಮಹೇಂದ್ರ, ಭೀಮ, ಸುಗ್ರೀವ, ಶ್ರೀರಾಮ, ಹೊಸ ಆನೆಗಳಾದ ಭೀಮ್, ಶ್ರೀಕಂಠ, ಶ್ರೀರಂಗ ಇರಲಿದೆ. ನಿರೀಕ್ಷೆ ಇದೆ. ಅಲ್ಲದೆ, ಹಿರಿಯ ಆನೆ ಅರ್ಜುನನನ್ನೂ ಕರೆತರುವ ಇಂಗಿತ ಅರಣ್ಯ ಇಲಾಖೆ ಮುಂದೆ ಇದೆ.

ಪಿಜಿ, ಹಾಸ್ಟೆಲ್‌ಗಳ ಮೇಲೆ ಶೇ.12ರಷ್ಟು ಜಿಎಸ್‌ಟಿ

ದುಬಾರಿಯಾಗಲಿವೆ ವಸತಿ ಗೃಹಗಳು

ಬೆಂಗಳೂರು: ಪೇಯಿಂಗ್ ಗೆಸ್ಟ್ (PG) ವಸತಿಗಳು ಮತ್ತು ಹಾಸ್ಟೆಲ್‌ಗಳಲ್ಲಿ ವಾಸಿಸುವವರು ಶೀಘ್ರದಲ್ಲೇ ಹೆಚ್ಚು ಶುಲ್ಕ ನೀಡಬೇಕಾಗಬಹುದು. ಅಂತಹ ವಸತಿ ಮತ್ತು ಇತರ ಸೇವೆಗಳಿಗೆ ಪ್ರತ್ಯೇಕವಾಗಿ ಪಾವತಿಸುವ ಬಾಡಿಗೆಗೆ ಶೇ.12ರಷ್ಟು ಜಿಎಸ್‌ಟಿ ವಿಧಿಸಲಾಗುತ್ತದೆ. ಹೀಗಾಗಿ ದುಬಾರಿಯಾಗಬಹುದು. ಬೆಂಗಳೂರಿನಲ್ಲಿರುವ ಅಥಾರಿಟಿ ಫಾರ್ ಅಡ್ವಾನ್ಸ್ ರೂಲಿಂಗ್ ಜು.13ರಂದು ಹಾಸ್ಟೆಲ್‌ಗಳು ವಸತಿ ಘಟಕಗಳಲ್ಲ ಮತ್ತು ಜಿಎಸ್‌ಟಿಯಿಂದ ವಿನಾಯಿತಿ ಪಡೆದಿಲ್ಲ ಎಂದು ತೀರ್ಪು ನೀಡಿತು.

ಶ್ರೀಸಾಯಿ ಐಷಾರಾಮಿ ಸ್ಟೇ ಎಲ್‌ಎಲ್‌ಪಿ ಕೋರಿ ಸಲ್ಲಿಸಿದ್ದ ಅರ್ಜಿಯಲ್ಲಿ, ಜುಲೈ 17, 2022ರವರೆಗೆ ಹೋಟೆಲ್‌ಗಳು, ಕ್ಲಬ್‌ಗಳು, ಕ್ಯಾಂಪ್‌ಸೈಟ್‌ಗಳು ಇತ್ಯಾದಿಗಳಿಂದ ದಿನಕ್ಕೆ 1,000 ರೂಪಾಯಿವರೆಗಿನ ಶುಲ್ಕದ ವಸತಿ ಸೇವೆಗಳಿಗೆ GST ವಿನಾಯಿತಿ ಅನ್ವಯಿಸುತ್ತದೆ ಎಂದು ಎಎಆರ್ ಹೇಳಿದೆ. ಅರ್ಜಿದಾರರ ಸೇವೆಗಳು ಜಿಎಸ್‌ಟಿಗೆ ವಿಧಿಸಬಹುದಾದ ಕಾರಣ ಅರ್ಜಿದಾರರು ಭೂಮಾಲೀಕರಿಗೆ ಪಾವತಿಸಬೇಕಾದ ಬಾಡಿಗೆಗೆ ಹಿಮ್ಮುಖ ಶುಲ್ಕದ ಮೇಲೆ ಜಿಎಸ್‌ಟಿ ಅನ್ವಯಿಸುತ್ತದೆ. ಆದ್ದರಿಂದ ಅರ್ಜಿದಾರರು ಜಿಎಸ್‌ಟಿ ನೋಂದಣಿಯನ್ನು ಪಡೆಯಬೇಕಾಗುತ್ತದೆ ಎಂದು ಎಎಆರ್ ಹೇಳುತ್ತದೆ.

ಟಿವಿ ಅಥವಾ ವಾಷಿಂಗ್ ಮೆಷಿನ್‌ನಂತಹ ಇತರ ಸೇವೆಗಳ ಮೇಲೆ ಪ್ರತ್ಯೇಕವಾಗಿ ಜಿಎಸ್‌ಟಿ ವಿಧಿಸಲಾಗುವುದು ಎಂದು ಬೆಂಗಳೂರು ಪೀಠ ಹೇಳಿದೆ. ನೋಯ್ಡಾ ಮೂಲದ ವಿಎಸ್ ಇನ್‌ಸ್ಟಿಟ್ಯೂಟ್ ಮತ್ತು ಹಾಸ್ಟೆಲ್‌ನ ಇದೇ ರೀತಿಯ ಪ್ರಕರಣದಲ್ಲಿ,



ಲಕ್ನೋ ಎಎಆರ್ ಪೀಠವು ದಿನಕ್ಕೆ 1,000 ರೂ.ಗಿಂತ ಕಡಿಮೆ ವೆಚ್ಚದ ಹಾಸ್ಟೆಲ್ ಕೊಠಡಿಗಳಿಗೆ ಜಿಎಸ್‌ಟಿ ಅನ್ವಯಿಸುತ್ತದೆ ಎಂದು ಹೇಳಿದೆ. ಬೆಂಗಳೂರು ಪಿಜಿ ಮಾಲೀಕರ ಸಂಘದ ಅಧ್ಯಕ್ಷ ಸಂಪತ್ ಆಲ್ಲೂರ್, ಬಾಡಿಗೆ ಮನೆಗಳ ಮೇಲೆ ಜಿಎಸ್‌ಟಿ ಅನ್ವಯಿಸುವುದು ಸಿಟಿಗಳಲ್ಲಿ ಹೆಚ್ಚಿನ ಬಾಡಿಗೆ ದರದ ಕಷ್ಟವನ್ನು ಎದುರಿಸುವ ವಿದ್ಯಾರ್ಥಿಗಳ ಕಡಿಮೆ ವೇತನ ಹೊಂದಿದವರಿಗೆ ಜೀವನ ಮತ್ತಷ್ಟು ಕಷ್ಟವಾಗುತ್ತದೆ ಎನ್ನುತ್ತಾರೆ.

ವಲಸಿಗರಿಗೆ ಹೊಸ ತೆರಿಗೆ ಹೊರೆ: ಒಂದು ಪಿಜಿ ಅಥವಾ ಹಾಸ್ಟೆಲ್ ಕೈಗೆಟಕುವ ವಸತಿ ವ್ಯಾಪ್ತಿಯ ಅಡಿಯಲ್ಲಿ ಬರುತ್ತದೆ. ಶೇ.12ರಷ್ಟು ಜಿಎಸ್‌ಟಿ ಕೂಡ ತಿಂಗಳಿಗೆ 1,000 ರೂ. ಹೆಚ್ಚುವರಿಯಾಗಿ ರುತ್ತದೆ. ಒಬ್ಬ ವ್ಯಕ್ತಿಗೆ, ವಿಶೇಷವಾಗಿ ವಿದ್ಯಾರ್ಥಿಗೆ ಹೊರೆಯಾಗುತ್ತದೆ. ಕೈಗೆಟಕುವ ದರದ ವಸತಿ ಸಿಕ್ಕರೆ ವಿದ್ಯಾರ್ಥಿಗಳಿಗೆ, ನಗರಗಳಿಗೆ ಉದ್ಯೋಗಕ್ಕೆಂದು ಬರುವ ಹೊಸಬರಿಗೆ ಅನುಕೂಲವಾಗುತ್ತದೆ. ಶ್ರೇಣಿ 2 ಮತ್ತು 3ನೇ ಹಂತದ ನಗರಗಳಿಂದ ಅನೇಕ ಜನರು ಕೆಲಸ ಅಥವಾ ಅಧ್ಯಯನಕ್ಕಾಗಿ ಬೆಂಗಳೂರಿಗೆ ಬರುತ್ತಾರೆ. ಹೊಸ ತೆರಿಗೆ ಅವರಿಗೆ ಆರ್ಥಿಕವಾಗಿ ಹೊರೆಯಾಗಲಿದೆ. ನಗರದಲ್ಲಿ ದುಬಾರಿ ಜೀವನ ವೆಚ್ಚದ ಬಗ್ಗೆ ಜನರು ಈಗಾಗಲೇ ದೂರು ನೀಡುತ್ತಿದ್ದು, ಇದು ಇನ್ನಷ್ಟು ಹದಗೆಡುತ್ತದೆ ಎಂದು ನಾಗರಿಕರು ಹೇಳುತ್ತಾರೆ.

ರಾಜ್ಯದಲ್ಲಿ ಮದ್ರಾಸ್ ಐ ಬಾಧೆ; ಮೈಸೂರಲ್ಲಿ ಕಟ್ಟೆಚ್ಚರ

ಮೈಸೂರು, ಜು.31 (ಎಸ್‌ಬಿಡಿ)– ರಾಜ್ಯದಲ್ಲಿ 'ಮದ್ರಾಸ್ ಐ' ಬಾಧಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಸದ್ಯ ಮೈಸೂರು ಜಿಲ್ಲೆಯಲ್ಲಿ ಈವರೆಗೆ ಒಂದೂ ಪ್ರಕರಣ ವರದಿಯಾಗಿಲ್ಲ. ಆದರೆ ಈ ಸಂಬಂಧ ಮುಂಜಾಗ್ರತಾ ಕ್ರಮ ವಹಿಸುವುದು ಅತ್ಯವಶ್ಯವಾಗಿದೆ.

ಪಿಂಕ್ ಐ, ಕಾಂಜಂಕ್ಟಿವಿಟಿಸ್ ಹೆಸರುಗಳಿಂದಲೂ ಗುರುತಿಸಲಾಗುವ ಮದ್ರಾಸ್ ಐ, ರಾಜ್ಯದಲ್ಲಿ ವ್ಯಾಪಿಸುತ್ತಿದೆ. ಎಲ್ಲಾ ವಯೋಮಾನದವರನ್ನೂ ಬಾಧಿಸುವ ಈ ಕಾಯಿಲೆ, ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಟ್ಟಿಗೆ ಇರುವುದರಿಂದ ವ್ಯಾಪಕವಾಗಿ ಹರಡುತ್ತಿದೆ ಎನ್ನಲಾಗಿದೆ. ಸದ್ಯ ಮೈಸೂರು ಜಿಲ್ಲೆಯಲ್ಲಿ ಒಂದೂ ಪ್ರಕರಣ ವರದಿಯಾಗದಿದ್ದರೂ ಅಗತ್ಯ ಮುಂಜಾಗ್ರತಾ ಕ್ರಮ ಅನುಸರಿಸಬೇಕಿದೆ. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ. ಆರೋಗ್ಯ ಕೇಂದ್ರಗಳ ನಿತ್ಯ ವರದಿ ಬಗ್ಗೆ ಹೆಚ್ಚು ಗಮನಹರಿಸಿದ್ದಾರೆ.



ನಿರಂತರ ಜಾಗೃತಿ: ಮದ್ರಾಸ್ ಐ ಬಗ್ಗೆ ಎಲ್ಲೆಡೆ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಕರಣಗಳು ವರದಿಯಾದಲ್ಲಿ ಚಿಕಿತ್ಸೆಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಎಲ್ಲಾ ಸಾರ್ವಜನಿಕ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಿಂದ ಸಮಗ್ರ ಆರೋಗ್ಯ ಮಾಹಿತಿ ವೇದಿಕೆ(ಐಹೆಚ್‌ಐಪಿ) ಮೂಲಕ ನಿತ್ಯ ವರದಿ ಪಡೆಯಲಾಗುತ್ತದೆ. ಆದರೆ ಈವರೆಗೆ ಒಂದೂ ಪ್ರಕರಣ ವರದಿಯಾಗಿಲ್ಲ. ಎಲ್ಲಾ ವೈದ್ಯಾಧಿಕಾರಿಗಳಿಗೂ ಈ ಬಗ್ಗೆ ವಿಶೇಷ ಗಮನಹರಿಸುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ (ಡಿಎಸ್‌ಓ) ಡಾ.ಮಹದೇವಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ರೋಗ ಲಕ್ಷಣಗಳು: ಮದ್ರಾಸ್ ಐ ವೈರಸ್‌ನಿಂದ ಹರಡುವ ಕಾಯಿಲೆ. ಕಣ್ಣಿನ ಬಿಳಿಭಾಗವನ್ನು ಆವರಿಸುವ ಮುಂಭಾಗವನ್ನು ಬಾಧಿಸುತ್ತದೆ. ಕಣ್ಣು ಕೆಂಪಾಗುವಿಕೆ, ನೀರು ಸೋರುವಿಕೆ, ಅತಿಯಾದ ಕಣ್ಣೀರು, ಕಣ್ಣಿನಲ್ಲಿ ತುರಿಕೆ, ನಿರಂತರ ನೋವು, ಚುಚ್ಚುವಿಕೆ, ದೃಷ್ಟಿ ಮಂಜಾಗುವುದು, ಕಣ್ಣಿನ ಎರಡು ರೆಪ್ಪೆಗಳು ಕೀವು ಮಿಶ್ರಿತ ದ್ರವದಿಂದ ಅಂಟಿಕೊಳ್ಳುವುದು, ರೆಪ್ಪೆ ಊದಿಕೊಳ್ಳುವುದು ಈ ರೋಗದ ಸಾಮಾನ್ಯ ಲಕ್ಷಣಗಳಾಗಿವೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಹೇಳಿದ್ದಾರೆ.

ಈವರೆಗೆ ವರದಿಯಾಗಿಲ್ಲ



ಮದ್ರಾಸ್ ಐ ಕಾಯಿಲೆ ಬಗ್ಗೆ ಹಲವು ದಿನಗಳಿಂದ ಜಾಗೃತಿ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಮುಖ್ಯವಾಗಿ ಶಾಲಾ–ಕಾಲೇಜುಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಯಾರಿಗಾದರೂ ಮದ್ರಾಸ್ ಐ ರೋಗ ಲಕ್ಷಣ ಕಾಣಿಸಿಕೊಂಡರೆ ಕೂಡಲೇ ಆಶಾ ಕಾರ್ಯಕರ್ತೆಯರು ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರ(ಪಿಹೆಚ್‌ಸಿ)ಗಳನ್ನು ಸಂಪರ್ಕಿಸಿ, ಪರೀಕ್ಷೆ ಮಾಡಿಸುವಂತೆ ಶಿಕ್ಷಕರಿಗೆ ಮಾಹಿತಿ ನೀಡಲಾಗುತ್ತಿದೆ. ಪಿಹೆಚ್‌ಸಿ ಸೇರಿದಂತೆ ಎಲ್ಲಾ ಆಸ್ಪತ್ರೆಗಳಿಂದ ನಿತ್ಯ ವರದಿ ಪಡೆಯಲಾಗುತ್ತಿದ್ದು, ಈವರೆಗೆ ಜಿಲ್ಲೆಯಲ್ಲಿ ಒಂದೂ ಪ್ರಕರಣ ವರದಿಯಾಗಿಲ್ಲ. ಆದರೂ ಜಾಗೃತಿ ಜೊತೆಗೆ ಮುಂಜಾಗ್ರತಾ ಕ್ರಮವಾಗಿ ನಿರ್ದಿಷ್ಟ ಚಿಕಿತ್ಸೆಗೆ ಅಗತ್ಯವಾದ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗಿದೆ. **–ಡಾ.ಪಿ.ಸಿ.ಕುಮಾರಸ್ವಾಮಿ, ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ**

ಎಚ್ಚರ ವಹಿಸುವುದು ಅಗತ್ಯ: ಕೈಗಳಿಂದ ಪದೇ ಪದೆ ಕಣ್ಣುಗಳನ್ನು ಮುಟ್ಟಬಾರದು. ಆಗಾಗ್ಗೆ ಸೋಪು ನೀರಿನಿಂದ ಕೈಗಳನ್ನು ತೊಳೆದುಕೊಳ್ಳಬೇಕು. ಮದ್ರಾಸ್ ಐ ರೋಗ ಲಕ್ಷಣಗಳು ಕಾಣಿಸಿಕೊಂಡರೆ ಸ್ವಯಂ ಚಿಕಿತ್ಸೆ ವಿಧಾನಗಳನ್ನು ಬಳಸದೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ, ಸೂಕ್ತ ಸಲಹೆ ಹಾಗೂ ಚಿಕಿತ್ಸೆ ಪಡೆದುಕೊಳ್ಳಬೇಕು. ಸ್ವಚ್ಛ ನೀರಿನಿಂದ ಕಣ್ಣುಗಳನ್ನು ಶುಚಿಗೊಳಿಸಬೇಕು. ಸೋಂಕಿತ ವ್ಯಕ್ತಿಯ ಕಣ್ಣಿನಿಂದ ಬರುವ ದ್ರವದ ಸಂಪರ್ಕದಿಂದ ಆರೋಗ್ಯವಂತ ವ್ಯಕ್ತಿಗೆ ಹರಡುತ್ತದೆ. ಹಾಗಾಗಿ ಸೋಂಕಿತರು ಕಪ್ಪು ಕನ್ನಡಕ ಬಳಸಬೇಕು. ಶಾಲಾ–ಕಾಲೇಜು, ವಸತಿ ನಿಲಯ, ಪಿಜಿ ಸೇರಿದಂತೆ ಹೆಚ್ಚು ಜನಸಂದಣಿ ಇರುವ ಸ್ಥಳಗಳಲ್ಲಿ ಹೆಚ್ಚಿನ ನಿಗಾ ವಹಿಸಬೇಕು. ಸೋಂಕಿತ ವ್ಯಕ್ತಿ ಪ್ರತ್ಯೇಕವಾಗಿರಬೇಕು. ಅವರು ಬಳಸಿದ ಕರವಸ್ತ್ರ, ಟವಲ್ ಇನ್ನಿತರ ವಸ್ತುಗಳನ್ನು ಬೇರೆಯವರು ಬಳಸಬಾರದು. ಆರೋಗ್ಯವಂತ ವ್ಯಕ್ತಿ ಸೋಂಕಿತರ ಕಣ್ಣಿನ ನೇರ ಸಂಪರ್ಕದಿಂದ ದೂರವಿದ್ದರೆ ಉತ್ತಮ. ಸೋಂಕಿತರಿಗೆ ಶೀತ, ಕೆಮ್ಮು, ಜ್ವರ ಇದ್ದರೆ ತಡ ಮಾಡದೆ ಸೂಕ್ತ ಚಿಕಿತ್ಸೆ ಪಡೆಯಬೇಕು. ತೀವ್ರತರದ ಸೋಂಕು ಉಂಟಾದಲ್ಲಿ ತಕ್ಷಣವೇ ನೇತ್ರ ತಜ್ಞರನ್ನು ಸಂಪರ್ಕಿಸಬೇಕು ಎಂದು ಸಲಹೆ ನೀಡಿದ್ದಾರೆ.

ಪ್ರವಾಸ ಇನ್ನಿತರ ಕಾರಣಗಳಿಂದ ಬೇರೆ ಕಡೆಗೆ ಹೋಗಿಬರುವ ಸಂದರ್ಭದಲ್ಲಿ ಮದ್ರಾಸ್ ಐ ಸೋಂಕು ತಗುಲಬಹುದು. ಹಾಗಾಗಿ ಸೋಂಕು ಬಾಧಿತರಿಲ್ಲ ಎನ್ನಲಾಗದು. ಆದರೆ ಅಧಿಕೃತವಾಗಿ ವರದಿಯಾಗಿಲ್ಲವಷ್ಟೇ. ರಾಜ್ಯದ ಕೆಲವು ಭಾಗಗಳಲ್ಲಿ ಈ ಕಾಯಿಲೆ ಹೆಚ್ಚಾಗಿದೆ. ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಪೋಷಕರು ಭಯಪಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ವೈಯಕ್ತಿಕವಾಗಿ ಜಾಗ್ರತೆ ವಹಿಸುವುದು ಬಹಳ ಮುಖ್ಯ. ಮಕ್ಕಳಿಗೆ ಈ ಬಗ್ಗೆ ಪೋಷಕರು ತಿಳಿಹೇಳಬೇಕು. ಶಿಕ್ಷಕರೂ ಹೆಚ್ಚಿನ ನಿಗಾ ವಹಿಸಬೇಕು ಎಂದು ವೈದ್ಯರೊಬ್ಬರು ಸಲಹೆ ನೀಡಿದ್ದಾರೆ.

ಶುಚಿಯಾದ ಬಟ್ಟೆ ಅಥವಾ ಹತ್ತಿಯ ಉಂಡೆಗಳನ್ನು ಉಗುರು ಬೆಚ್ಚಗಿನ ನೀರಿನಲ್ಲಿ ಅದ್ದಿ, ಅದರಿಂದ ಕಣ್ಣುಗಳನ್ನು ಸ್ವಚ್ಛಗೊಳಿಸಿಕೊಳ್ಳಬಹುದು. ಆದರೆ ವೈದ್ಯರ ಸಲಹೆಯಂತೆ ಔಷಧಿಗಳನ್ನು ಬಳಸುವುದು ಬಹಳ ಮುಖ್ಯ. ಶಾಲಾ–ಕಾಲೇಜು, ಹಾಸ್ಟೆಲ್ ವಿದ್ಯಾರ್ಥಿಗಳಲ್ಲಿ ಸೋಂಕು ಕಂಡುಬಂದರೆ ಅಂತಹವರು ಪ್ರತ್ಯೇಕವಾಗಿರಲು ವ್ಯವಸ್ಥೆ ಮಾಡಿಕೊಡಬೇಕು. ಆದರೆ ಮದ್ರಾಸ್ ಐ ಬಗ್ಗೆ ಅನಗತ್ಯವಾಗಿ ಆತಂಕಪಡಬಾರದು. ಎಲ್ಲಾ ವಯೋಮಾನದವರನ್ನೂ ಬಾಧಿಸುವ ಈ ಕಾಯಿಲೆ ಸೂಕ್ತ ಚಿಕಿತ್ಸೆ ಪಡೆದರೆ 3ರಿಂದ 5 ದಿನಗಳಲ್ಲಿ ಗುಣಮುಖವಾಗುತ್ತದೆ.

ಮೈಸೂರು ಮಿತ್ರ ಮಂಗಳವಾರ 1 ಆಗಸ್ಟ್ 2023

ಇಂದು ವ್ಯಸನ ಮುಕ್ತ ದಿನಾಚರಣೆ

ಮಡಿಕೇರಿ, ಜು.31– ಜಿಲ್ಲಾಡಳಿತ, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಇವರ ವತಿಯಿಂದ ಆಗಸ್ಟ್ 1 ರಂದು ಬೆಳಗ್ಗೆ 11 ಗಂಟೆಗೆ ಡಾ. ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಪ್ರಯುಕ್ತ 'ವ್ಯಸನ ಮುಕ್ತ ದಿನಾಚರಣೆ'ಯು ನಗರದ ಜೂನಿಯರ್ ಕಾಲೇಜಿನಲ್ಲಿ ನಡೆಯಲಿದೆ.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಎಂ.ಸತೀಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಹಿರಿಯ ನಾಗರಿಕರ ಮತ್ತು ವಿಕಲಚೇತನರ ಕಲ್ಯಾಣಾಧಿಕಾರಿ ವಿಮಲ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವಿಜಯ, ವೈದ್ಯಕೀಯ ಕಾಲೇಜಿನ ಮನೋವೈದ್ಯರಾದ ಡೆವಿನ್ ಕರ್ಕಡ ಇತರರು ಪಾಲ್ಗೊಳ್ಳಲಿದ್ದಾರೆ.

ಕೊಡವ ಜನಾಂಗ ಪಕ್ಷಾತೀತವಾಗಿ ಕಾರ್ಯ ನಿರ್ವಹಿಸಿದರೆ ಕೊಡಗಿನ ಪ್ರಗತಿ ಸಾಧ್ಯ

ಶಾಸಕ ಎ.ಎಸ್. ಪೊನ್ನಣ್ಣ ಅಭಿಮತ



ನಾಪೋಕ್ಲು, ಜು.31– ಕೊಡವ ಜನಾಂಗ ಪಕ್ಷಾತೀತವಾಗಿ ಒಗ್ಗೂಡಿ ಕಾರ್ಯ ನಿರ್ವಹಿಸಿದರೆ ಜಿಲ್ಲೆಯ ಪ್ರಗತಿ ಸಾಧ್ಯ ಎಂದು ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟೀರ ಎ.ಎಸ್.ಪೊನ್ನಣ್ಣ ಹೇಳಿದರು.

ಇಲ್ಲಿನ ಕೊಡವ ಸಮಾಜದ ಆಶ್ರಯದಲ್ಲಿರುವ ಕ್ರೀಡಾ ಸಾಂಸ್ಕೃತಿಕ ಮತ್ತು ಮನೋರಂಜನಾ ಕೂಟದ ವಾರ್ಷಿಕ ಒತ್ತೋರ್ಮೆ ಕೂಟದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಚುನಾವಣೆ ಅವಧಿಯಲ್ಲಿ ಪಕ್ಷಕ್ಕಾಗಿ, ಗೆಲುವಿಗಾಗಿ ಹೋರಾಟ ನಡೆಸುವುದು ಅನಿವಾರ್ಯ. ಬಳಿಕ ಸಾಮಾಜಿಕ ಸೇವೆಯಲ್ಲಿ ಪಕ್ಷಾತೀತವಾಗಿ ಕಾರ್ಯನಿರ್ವಹಿಸಿದರೆ ಎಲ್ಲರ ವಿಶ್ವಾಸ ಗಳಿಸಲು ಸಾಧ್ಯ ಎಂದರು.ಜನಾಂಗಗಳ ನಡುವೆ ದ್ವೇಷ ಸಾಧನೆ, ವೈಯಕ್ತಿಕ ಅವಹೇಳನ, ತೇಜೋವಧೆ ಮಾಡುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ಸಾರ್ವಜನಿಕ ವಲಯದಲ್ಲಿ ಸೇವೆ ಸಲ್ಲಿಸಲು ವಿಫಲ ಅವಕಾಶ ಇದೆ. ಅದರ ಸದ್ಬಳಕೆ ಮಾಡಿಕೊಳ್ಳಬೇಕು. ಎಂದರು.

ವಿಧಾನ ಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಮಾತನಾಡಿ, ಕೊಡವರ ಸಂಸ್ಕೃತಿ ವಿಶಿಷ್ಟವಾದುದು. ಇಲ್ಲಿನ ಪದ್ಧತಿ, ಪರಂಪರೆ, ಹವಾಮಾನ, ಜೀವನಶೈಲಿ ಪ್ರತಿಯೊಂದು ಕೂಡ ವಿಶಿಷ್ಟವಾದುದು. ಕೊಡವ ಜನಾಂಗದ ಸಂಖ್ಯೆ ಕಡಿಮೆ ಆಗುತ್ತಿದೆ. ಕೊಡವರ ಸಂಸ್ಕೃತಿ, ಪದ್ಧತಿ, ಪರಂಪರೆಯನ್ನು ಉಳಿಸಿ ಬೆಳೆಸಲು ಹಿರಿಯರು ಕಾರ್ಯಪ್ರವೃತ್ತರಾಗಬೇಕು ಎಂದರು, ಜಿಲ್ಲೆಯ ಜನರು ಎದುರಿಸುತ್ತಿರುವ ಕಾನೂನು ತೊಡಕುಗಳನ್ನು ನಿವಾರಿಸಲು ನೂತನ ಶಾಸಕರು ವಿಶೇಷ ಗಮನಹರಿಸಬೇಕು ಎಂದರು.

ಕೊಡವ ಸಮಾಜದ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತೀತೀರೆ ಎನ್. ಅಪ್ಪುಚ್ಚು ಮಾತನಾಡಿದರು. ಕೊಡವ ಸಮಾಜದ ಕ್ರೀಡಾ ಸಾಂಸ್ಕೃತಿಕ ಮತ್ತು ಮನೋರಂಜನ ಕೂಟದ ಅಧ್ಯಕ್ಷ ಬಿದ್ದಾಟಂಡ ಎಸ್.ತಮ್ಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೂಟದ ಉಪಾಧ್ಯಕ್ಷ ಕೊಂಡಿರ ನಂದ ಕುಮಾರ್, ಕಾರ್ಯದರ್ಶಿ ನಾಯಕಂಡ ದೀಪು ಚಂಗಪ್ಪ, ಖಜಾಂಚಿ ಮಂಡಿರ ರಾಜಪ್ಪ ಚಂಗಪ್ಪ, ನಿರ್ದೇಶಕರಾದ ಬಾಚಮಂಡ ಲವ ಚಿಣ್ಣಪ್ಪ, ಕೇಟೋಳಿರ ರೀನಾ ಸದಾ, ಕೇಲೇಟಿರ ದಿವ್ಯ ರತ್ನ, ಕಲಿಯಂಡ ಕೌಶಿಕ್, ಮಾಚೆಟ್ಟಿರ ಕುಶು ಕುಶಾಲಪ್ಪ, ಬದಂಜೆಟ್ಟಿರ ದೇವಿದೇವಯ್ಯ, ಬೊಪ್ಪೆರ ಜಯ ಉತ್ತಪ್ಪ, ಕರವಂಡ ಸರು ಸೋಮಣ್ಣ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಕೊಡವ ಸಮಾಜದ ಸದಸ್ಯರಿಗೆ ವಿವಿಧ ಕ್ರೀಡಾಕೂಟಗಳು ನಡೆದವು. ಕಾರ್ಯಕ್ರಮದಲ್ಲಿ ಶಾಸಕ ಅಜ್ಜಿಕುಟ್ಟಿರ ಎಸ್ ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಹಾಗೂ ಚೀಫ್ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತೀತಿರ ಎನ್.ಅಪ್ಪುಚ್ಚು ಅವರಿಗೆ ಕೊಡವ ಸಮಾಜದ ಕ್ರೀಡಾ ಸಾಂಸ್ಕೃತಿಕ ಮತ್ತು ಮನೋ ರಂಜನಾ ಕೂಟದ ವತಿಯಿಂದ ಒಡಿಕತ್ತಿ ನೀಡಿ ಸನ್ಮಾನಿಸಲಾಯಿತು.

ಪೊಲೀಸರೊಂದಿಗೆ ಗಲಾಟೆ; ನಾಲ್ವರು ಯುವಕರ ಬಂಧನ

ವಿರಾಜಪೇಟೆ, ಜು.31– ಕರ್ತವ್ಯದಲ್ಲಿದ್ದ ಪೊಲೀಸರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾದ ಆರೋಪದ ಮೇರೆಗೆ ನಾಲ್ವರು ಯುವಕರನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿದ್ದಾರೆ.

ವಿರಾಜಪೇಟೆ ಪಟ್ಟಣದ ಅರಸು ನಗರದಲ್ಲಿ ವ್ಯಕ್ತಿಯೊಬ್ಬರ ತಿಥಿ ಕಾರ್ಯ ಮಧ್ಯಾಹ್ನ ನಡೆದಿತ್ತು. ಕಾರ್ಯಕ್ಕೆ ಬಂದ ಸ್ಥಳೀಯರಾದ ವಿನೋದ, ಸಂದೀಪ್ ಜಂಗ್ಲಿ, ಮದನ್, ಗಣೇಶ್ ಎಂಬ ನಾಲ್ವರು ಯುವಕರು ರಾತ್ರಿಯಾದರೂ ಮನೆಗೆ ಹೋಗದೆ ಮದ್ಯಪಾನ ಸೇವಿಸಿ ಮಾತಿನ ಚಕಮಕಿ ನಡೆಸಿದ್ದು, ಅಕ್ಕಪಕ್ಕದವರಿಗೆ ಕಿರಿಕಿರಿ ಉಂಟಾದ ಕಾರಣ ಪೊಲೀಸರಿಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ಸ್ಥಳಕ್ಕೆ ಆಗಮಿಸಿದ ಪೊಲೀಸರು ಯುವಕರಿಗೆ ಮನೆಗೆ ಹೋಗಿ, ರಾತ್ರಿ ಏನು ಮಾಡುತ್ತಿದ್ದೀರ ಎಂದು ಬುದ್ಧಿ ಹೇಳಿದ್ದಾರೆ ಎನ್ನಲಾಗಿದೆ. ಈ ವೇಳೆ ಪಾನಮತ್ತರಾಗಿದ್ದ ಯುವಕರು ಪೊಲೀಸರಿಗೆ ಇಲ್ಲೇನು ಕೆಲಸ, ಏಕೆ ಬಂದಿದ್ದೀರಾ ಯಾರಾದರೂ ದೂರು ನೀಡಿದ್ದಾರಾ? ಎಂದು ಅವಾಜ್ ಹಾಕಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಈ ಸಂದರ್ಭ ಪೊಲೀಸರು ಮತ್ತು ಯುವಕರ ಮಧ್ಯೆ ಗಲಾಟೆ ನಡೆದಿದೆ. ಈ ವೇಳೆ ನಾಲ್ವರು ಯುವಕರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿ, ನ್ಯಾಯಾಲಯಕ್ಕೆ ಒಪ್ಪಿಸಿರುವುದಾಗಿ ತಿಳಿಸಿದ ಠಾಣಾಧಿಕಾರಿ ಶ್ರೀಧರ್ ಅವರು ಗಲಾಟೆಗೆ ಸಂಬಂಧಪಟ್ಟಂತೆ ಇನ್ನು ಕೆಲವು ಯುವಕರು ತಲೆಮರೆಸಿಕೊಂಡಿರುವುದಾಗಿ ಹೇಳಿದರು.

ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವು



ಸುಂಟಿಕೊಪ್ಪ, ಜು.31– ವಿದ್ಯುತ್ ಸ್ಪರ್ಶಗೊಂಡು 20 ವರ್ಷ ಪ್ರಾಯದ ಗಂಡಾನೆ ಮೃತಪಟ್ಟಿರುವ ಘಟನೆ ಸುಂಟಿಕೊಪ್ಪ ಸಮೀಪದ ಕಂಬಿಬಾಣೆಯಲ್ಲಿ ನಡೆದಿದೆ.

ಸುಂಟಿಕೊಪ್ಪ ಹೋಬಳಿಯ ಕಂಬಿಬಾಣೆ ಗ್ರಾಮದ ಪರ್ಚಿಕೆರೆ ಎಂಬಲ್ಲಿ ಉದಯ ಕುಮಾರ್ ಎಂಬವರಿಗೆ ಸೇರಿದ ತೋಟದಲ್ಲಿ ಕಾಡಾನೆಯ ಕಳೇಬರ ಪತ್ತೆಯಾಗಿದೆ. ಕಾಡಾನೆಯ ಕುತ್ತಿಗೆಯಲ್ಲಿ ಬೇಲಿ ಹಾಕಲು ಬಳಸುವ ಮುಳ್ಳು ತಂತಿಯು ಉರುಳಿನಂತೆ ಸುತ್ತಿಕೊಂಡಿರುವುದು ಕಂಡು ಬಂದಿದ್ದು, ಮೇಲ್ನೋಟಕ್ಕೆ ಇದು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರಬಹುದು ಎಂದು ಅರಣ್ಯಾಧಿಕಾರಿಗಳು ಶಂಕಿಸಿದ್ದಾರೆ. ಈ ಘಟನೆ ಕಳೆದ 3 ದಿನಗಳ ಹಿಂದೆ ರಾತ್ರಿ ವೇಳೆ ಸಂಭವಿಸಿದೆ ಎನ್ನಲಾಗಿದ್ದು, ಆನೆಯ ಕಳೇಬರ ಸೆಟೆದುಕೊಂಡಿದೆ. ಅರಣ್ಯ ಇಲಾಖೆಯ ಮಾಹಿತಿಯ ಪ್ರಕಾರ ಇಬ್ಬರು ಆರೋಪಿಗಳ ಸುಳಿವು ಲಭ್ಯವಾಗಿದ್ದು, ಅವರ ಪತ್ತೆಗೆ ಬಲೆ ಬೀಸಿದ್ದಾರೆ.

ಸ್ಥಳಕ್ಕೆ ಕುಶಾಲನಗರ ವಲಯ ಅರಣ್ಯಾಧಿಕಾರಿ ಕೆ.ವಿ.ಶಿವರಾಂ, ಡಿಸಿಎಫ್ ಪೂವಯ್ಯ, ಪೊಲೀಸ್ ಶ್ವಾನದಳ, ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಮತ್ತು ಸಿಬ್ಬಂದಿಗಳೂ ಭೇಟಿ ನೀಡಿ ಸ್ಥಳ ಪರಿಶೀಲನೆ ಮತ್ತು ಮಹಜರು ನಡೆಸಿದರು. ಡಾ.ಚಿಟ್ಟಿಯಪ್ಪ ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿದರು. ಬಳಿಕ ಸ್ಥಳದಲ್ಲೇ ಕಾಡಾನೆಯನ್ನು ಹೂಳಲಾಯಿತು. ಘಟನೆಗೆ ಸಂಬಂಧಿಸಿದಂತೆ ಅರಣ್ಯಾ ಇಲಾಖೆ ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದೆ.

ನ್ಯಾಯ ಒದಗಿಸುವ ಸುದ್ದಿಗಳಿಗೆ ಪತ್ರಕರ್ತ ಆದ್ಯತೆ ನೀಡಬೇಕು

ಮಾಜಿ ಶಾಸಕ ಅಪ್ಪಚ್ಚುರಂಜನ್



ಕುಶಾಲನಗರ, ಜು.31– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಪತ್ರಿಕಾ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಗಂಧದಕೋಟಿಯ ಅರಣ್ಯ ತರಬೇತಿ ಕೇಂದ್ರದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಶಾಸಕ ಅಪ್ಪಚ್ಚುರಂಜನ್ ಮಾತನಾಡಿ, ಸಮಾಜಕ್ಕೆ ಒಳಿತಾಗುವ, ನೊಂದವರಿಗೆ ನ್ಯಾಯ ಒದಗಿಸುವ, ರಾಜಕಾರಣಿಗಳನ್ನು ತಿದ್ದುವ ವರದಿಗಳು ಪತ್ರಕರ್ತರಿಂದ ಮೂಡಬೇಕಿದೆ ಯಾವುದೇ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯ ತೇಜೋವಧೆಗೆ ಮುಂದಾಗಬಾರದು. ಸಮಾಜಮುಖಿ ಚಿಂತನೆಗಳನ್ನು ಮೂಡಿಸುವ, ಉತ್ತಮ ಸಂದೇಶ ನೀಡುವ ವರದಿಗಳು ಹೆಚ್ಚು ಪ್ರಕಟಗೊಳ್ಳಬೇಕಿದೆ ಎಂದ ಅವರು, ಪತ್ರಿಕಾ ದಿನಾಚರಣೆಯಲ್ಲಿ ಕುಟುಂಬ ಮಿಲನಕ್ಕೆ ಒತ್ತು ನೀಡಿರುವುದು ಶ್ಲಾಘನೀಯ ವಿಚಾರ ಎಂದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಎಸಿಎಫ್ ಗೋಪಾಲ್ ಮಾತನಾಡಿ, ಅರಣ್ಯ ಕ್ಷೀಣಿಸಿದಂತೆ ಪರಿಸರ ಅಸಮತೋಲನ, ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತಿದೆ. ಈ ನಿಟ್ಟಿನಲ್ಲಿ ಅರಣ್ಯೀಕರಣಕ್ಕೆ ಅರಣ್ಯಾ ಇಲಾಖೆ ಹೆಚ್ಚಿನ ಒತ್ತು ನೀಡಿದೆ. ಇದಕ್ಕೆ ಪೂರಕವಾಗಿ ವರದಿಗಳನ್ನು ಮಾಡುವ ಮೂಲಕ ಪತ್ರಕರ್ತರು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಮೂಲಕ ಸಹಕಾರ ನೀಡುತ್ತಿದ್ದಾರೆ ಎಂದು ಅಭಿನಂದಿಸಿದರು.

ಉದ್ಯಮಿ ಎಸ್‌ಎಲ್‌ಎನ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ವಿಶ್ವನಾಥನ್ ಮಾತನಾಡಿ, ನಿಸರ್ಗ ರಮಣೀಯ ಕೊಡಗಿನ ಸೌಂದರ್ಯವನ್ನು ಪ್ಲಾಸ್ಟಿಕ್ ತ್ಯಾಜ್ಯಗಳು ಕಳೆಗುಂದಿಸುತ್ತಿದೆ. ಆದಷ್ಟು ಪ್ಲಾಸ್ಟಿಕ್ ತ್ಯಾಜ್ಯ ನಿರ್ಮೂಲನೆಗೆ ಎಲ್ಲರೂ ಚಿಂತನೆ ಹರಿಸಬೇಕಿದೆ ಎಂದರು.

ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಸವಿತಾ ರೈ ಮಾತನಾಡಿ, ಪತ್ರಿಕೋದ್ಯಮದ ಬದುಕು ಕಬ್ಬಿಣದ ಕಡಲೆಯಿದ್ದಂತೆ. ಹಲವು ತೊಡಕುಗಳನ್ನು ಸಮರ್ಥವಾಗಿ ಎದುರಿಸಿ, ಎದೆಗುಂದದೆ ಸಮಾಜದ ತಪ್ಪುಗಳನ್ನು ಆವಿಷ್ಕರಿಸಿ, ಬೆದರಿಕೆಗಳಿಗೆ ಜಗ್ಗದೆ ಬಿತ್ತರಿಸುವ ಧೈರ್ಯ ಅಗತ್ಯವಿದೆ.

ಕುಶಾಲನಗರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಎನ್. ಚಂದ್ರಮೋಹನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಶಾಲನಗರ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಸಬಲಂ ಭೋಜಣ್ಣ ರೆಡ್ಡಿ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಾರ್ಷಿಕ ಪ್ರಶಸ್ತಿ ವಿಜೇತರಾದ ಎಂ.ಎನ್. ಚಂದ್ರ ಮೋಹನ್, ಕೆ.ಕೆ.ನಾಗರಾಜಶೆಟ್ಟಿ, ಟಿ.ಆರ್.ಪ್ರಭುದೇವ್, ರಘು ಹೆಬ್ಬಾಲೆ, ವಿನೋದ್, ಇಸ್ಮಾಯಿಲ್ ಕಂಡಕೆರೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಈ ಸಂದರ್ಭ ರಾಷ್ಟ್ರೀಯ ಸಮಿತಿ ಸದಸ್ಯ ಸುನಿಲ್ ಪೊನ್ನೇಟಿ ಸೇರಿದಂತೆ ಕುಶಾಲನಗರ ಸಂಘದ ಆಡಳಿತ ಮಂಡಳಿ ಪದಾಧಿಕಾರಿಗಳು, ಸದಸ್ಯರು ಇದ್ದರು.

ಪತ್ರಕರ್ತನಿಗೆ ಬೆದರಿಕೆ: ಪತ್ರಕರ್ತರ ಸಂಘ ಖಂಡನೆ

ವಿರಾಜಪೇಟೆ, ಜು.31– ವಿರಾಜಪೇಟೆಯ ಪತ್ರಕರ್ತ ರವಿಕುಮಾರ್ ಅವರಿಗೆ ಪುರಸಭಾ ಸದಸ್ಯರೊಬ್ಬರು ದೂರವಾಣಿಯ ಮೂಲಕ ಬೆದರಿಕೆ ಒಡ್ಡಿದ್ದು, ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ತೀವ್ರವಾಗಿ ಖಂಡಿಸಿದೆ.

ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಅಧ್ಯಕ್ಷ ರೆಜಿತ್ ಕುಮಾರ್, ತಾಲೂಕು ಸಂಘದ ನಿರ್ದೇಶಕ ರವಿಕುಮಾರ್ ಅವರು ವಿರಾಜಪೇಟೆಯಲ್ಲಿ ನಡೆದ ಹಲ್ಲೆ ಪ್ರಕರಣದ ವರದಿ ಮಾಡಿದ್ದಾರೆ. ಈ ಬಗ್ಗೆ ಪುರಸಭೆ ಸದಸ್ಯರಾದ ಜೂನ ಸುನಿತಾ ರವಿಕುಮಾರ್ ಅವರಿಗೆ ಕರೆ ಮಾಡಿ, ಸುದ್ದಿ ಯಾಕೆ ಪ್ರಕಟಿಸಿದ್ದೀಯ ಎಂದು ಪ್ರಶ್ನಿಸಿದ್ದಾರೆ. ಇದಲ್ಲದೇ ತನ್ನ ಕ್ಯಾಂಟಿನ್ ಮುಚ್ಚಿಸುವುದಾಗಿ ರವಿ ಅವರಿಗೆ ಬೆದರಿಕೆ ಹಾಕಿದ್ದಾರೆ. ಪತ್ರಕರ್ತರಿಗೆ ಬೆದರಿಕೆ ಹಾಕಿರುವ ಘಟನೆಯನ್ನು ತಾಲೂಕು ಸಂಘ ಖಂಡಿಸಿದ್ದು, ಜನಪ್ರತಿನಿಧಿಯೊಬ್ಬರು ಹೀಗೆ ಬೆದರಿಕೆ ಹಾಕುವುದು ಶೋಭೆಯಲ್ಲ. ಪತ್ರಕರ್ತರು ನಿರ್ಭಯವಾಗಿ ವರದಿ ಮಾಡುವಂತಾಗಬೇಕು. ವರದಿ ಮಾಡಿದ ಸಂದರ್ಭ ತಪ್ಪುಗಳಿದ್ದರೆ ಕಾನೂನು ಕ್ರಮ ಕೈಗೊಳ್ಳಬಹುದು. ಆದರೇ ಕಾನೂನನ್ನು ಕೈಗೆತ್ತಿಕೊಂಡು, ಬೆದರಿಕೆ ಹಾಕುವುದು ಖಂಡನೀಯ ಎಂದು ಹೇಳಿದ್ದಾರೆ.

ನಾಳೆ ಸಿಎನ್‌ಸಿಯಿಂದ ಕಕ್ಕಡ ಪದ್‌ನೆಟ್ ಆಚರಣೆ

ಮಡಿಕೇರಿ, ಜು.31– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ಕೊಡವ ಪಂಚಾಂಗದ ಸಾರ್ವತ್ರಿಕ ಕಕ್ಕಡ ಪದ್‌ನೆಟ್ ಆಚರಣೆ ಆ.2ರಂದು ಮಡಿಕೇರಿ ಸಮೀಪ ಕ್ಯಾಪಿಟಲ್ ವಿಲೇಜ್‌ನಲ್ಲಿ ನಡೆಯಲಿದೆ.



ಈ ಕುರಿತು ಮಾಹಿತಿ ನೀಡಿರುವ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಅವರು, 28ನೇ ವರ್ಷದ ಸಾರ್ವತ್ರಿಕ ಕಕ್ಕಡ ಪದ್‌ನೆಟ್ ಆಚರಣೆ ಇದಾಗಿದ್ದು, ಕೊಡವ ಸಂಸ್ಕೃತಿ, ಆಚಾರ ವಿಚಾರಗಳನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಉದ್ದೇಶದಿಂದ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರಲಾಗುತ್ತಿದೆ ಎಂದು ತಿಳಿಸಿದ್ದಾರೆ. ಬುಧವಾರ ಬೆಳಗ್ಗೆ 10.30 ಗಂಟೆಗೆ ಸಾರ್ವಜನಿಕ ನಾಟಿನಾಡ್ಪ ಸಮಾರಂಭ (ಭತ್ತ ನಾಟಿ) ಕಾರ್ಯಕ್ರಮ ಕ್ಯಾಪಿಟಲ್ ವಿಲೇಜ್ ಗದ್ದೆಯಲ್ಲಿ ದುಡಿಕೊಟ್ ಪಾಟ್‌ನೊಂದಿಗೆ ನಡೆಯಲಿದೆ. ಭತ್ತದ ನಾಟಿ ಮಾಡಿದ ನಂತರ ಭಾಗವಹಿಸಿದ ಎಲ್ಲರೂ ಕಕ್ಕಡಕೋಳಿ, ಮದ್ದ್ ಪುಟ್ಟ್, ಮದ್ದ್ ಪಾಯಸ ಮತ್ತಿತರ ಕೊಡವ ಸಾಂಪ್ರಾಯಿಕ ಖಾದ್ಯಗಳನ್ನು ವಿತರಿಸಲಾಗುತ್ತದೆ. ಕಕ್ಕಡ ಸಮಾರಂಭ ಸೂರ್ಯ–ಚಂದ್ರ ಜಲದೇವತೆ ಕಾವೇರಿ ಹಾಗೂ ಗುರು ಕಾರೋಣರ ಆಶೀರ್ವಾದವನ್ನು ಪಡೆಯುವ ಮೂಲಕ ಆರಂಭಗೊಳ್ಳಲಿದೆ ಎಂದು ಹೇಳಿದ್ದಾರೆ.

ದ್ವಿತೀಯ ಪಿಯು ಪೂರಕ ಪರೀಕ್ಷೆಗೆ ನೋಂದಣಿ

ಚಾಮರಾಜನಗರ, ಜು.31– 2022–23ನೇ ಸಾಲಿನ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ–2 ಅನ್ನು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವತಿಯಿಂದ ನಡೆಸಲಿದ್ದು, 2022–23ನೇ ಸಾಲಿನಲ್ಲಿ ಹಾಗೂ ಅದಕ್ಕಿಂತ ಹಿಂದಿನ ಸಾಲುಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳಲ್ಲಿ ಆಗಸ್ಟ್ 10ರವರೆಗೆ ನೋಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಫಲಿತಾಂಶ ತಿರಸ್ಕರಿಸಲು ಸದರಿ ಪರೀಕ್ಷೆಯಲ್ಲಿ ಅವಕಾಶವಿರುವುದಿಲ್ಲ.

ಪರೀಕ್ಷೆಗೆ ಸಂಬಂಧಿಸಿದ ಸುತ್ತೋಲೆ ಹಾಗೂ ವೇಳಾಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್ https://kseab.karnataka.gov.in ನಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರಾದ ಸಿ. ಮಂಜುನಾಥ್ ಪ್ರಸನ್ನ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಣಿಪುರ ಘಟನೆ ಖಂಡಿಸಿ ಚಾ.ನಗರದಲ್ಲಿ ಗಿರಿಜನರ ಪ್ರತಿಭಟನೆ



ಚಾಮರಾಜನಗರ, ಜು.31– ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೇಲೆ ನಡೆಸುತ್ತಿರುವ ದೌರ್ಜನ್ಯ ಖಂಡಿಸಿ ನಗರದಲ್ಲಿ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದಿಂದ ಪ್ರತಿಭಟನೆ ನಡೆಯಿತು.

ಇಲ್ಲಿನ ಶ್ರೀಚಾಮರಾಜೇಶ್ವರಿಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು ಮಣಿಪುರ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಅಲ್ಲಿಂದ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಬಳಿಕ ಬಿ. ರಾಚಯ್ಯ ಜೋಡಿ ರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು. ಬಳಿಕ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರ ಮೂಲಕ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಸಲ್ಲಿಸಿದರು.

ಮಣಿಪುರದಲ್ಲಿ ಕಳೆದ ಮೂರು ತಿಂಗಳಿನಿಂದ ಹಿಂಸಾಚಾರಗಳು ಉಲ್ಬಣಗೊಳ್ಳುತ್ತಿವೆ. ಆಸ್ತಿಪಾಸ್ತಿ, ಮಾನವ ಜೀವ ಹಾನಿಯಾಗುತ್ತಿದೆ. 200ಕ್ಕೂ ಹೆಚ್ಚು ಜನರು ಮರಣ ಹೊಂದಿದ್ದಾರೆ. ಸಾವಿರಾರು ಜನರು ಮನೆ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಕುಕಿ ಸಮುದಾಯದ ಇಬ್ಬರು ಮಹಿಳೆಯರನ್ನು ನಗ್ನಗೊಳಿಸಿ ಮೆರವಣಿಗೆ ನಡೆಸಿದಲ್ಲದೇ, ಸಂತ್ರಸ್ತ ಮಹಿಳೆಯೊಬ್ಬರ ಸಹೋದರ ಹಾಗೂ ತಂದೆಯನ್ನು ಉದ್ರಿಕ್ತರ ಗುಂಪು ಕೊಂದಿದೆ. ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಘೋರ ದೌರ್ಜನ್ಯ ವೆಸಗಿದ್ದಾರೆ ಎಂದರು.

ಮಹಿಳೆಯರನ್ನು ನಗ್ನಗೊಳಿಸಿ ಮೆರವಣಿಗೆ ಮಾಡಿ ಅತ್ಯಾಚಾರ ಮಾಡಿರುವವರ ವಿರುದ್ಧ ಕಾನೂನಿನನ್ವಯ ಶಿಕ್ಷೆ ವಿಧಿಸಿ, ನೊಂದ ಆದಿವಾಸಿ ಮಹಿಳೆಯರಿಗೆ ನ್ಯಾಯ ಕಲ್ಪಿಸಬೇಕು. ಮಣಿಪುರ ಸರ್ಕಾರವನ್ನು ವಜಾ ಗೊಳಿಸಬೇಕು. ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಅಧ್ಯಕ್ಷೆ ಮಾದಮ್ಮ ಕಾರ್ಯದರ್ಶಿ ಡಾ.ಸಿ. ಮಾದೇಗೌಡ, ರಾಜ್ಯ ಸೋಲಿಗ ಅಭಿವೃದ್ಧಿ ಸಂಘದ ಅಧ್ಯಕ್ಷ ಎಂ. ಜಡೇಸ್ವಾಮಿ, ರಾಜ್ಯ ಮೂಲ ನಿವಾಸಿ ವೇದಿಕೆ ಕಾರ್ಯದರ್ಶಿ ವಿ. ಮುತ್ತಯ್ಯ, ಮುಖಂಡರಾದ ಕೇತಮ್ಮ, ಮಹದೇವಯ್ಯ, ಬಸವರಾಜು, ಶಿವಮಲ್ಲು ಸಿದ್ದೇಗೌಡ, ಮಹದೇವು, ನಾಗಮ್ಮ ಮಹದೇವಮ್ಮ ದಾಸೇಗೌಡ, ದೊಡ್ಡಸಿದ್ದಯ್ಯ, ಕೋಣುರೇಗೌಡ, ನಂಜೇಗೌಡ ಇತರರಿದ್ದರು.

ಮಣಿಪುರ ಸರ್ಕಾರ ವಜಾಕ್ಕೆ ಆಗ್ರಹ



ಚಾಮರಾಜನಗರ, ಜು.31– ಮಣಿಪುರದ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಸೋಮವಾರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಿಳಾ ಘಟಕದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಕಾರರು, ಮಣಿಪುರ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಅಲ್ಲಿನ ರಾಜ್ಯ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಮಣಿಪುರದಲ್ಲಿ ನಡೆದಿರುವ ಘಟನೆ ಇಡೀ ದೇಶವೇ ತಲೆತಗ್ಗಿಸುವಂತಹದ್ದು. ಆಧುನಿಕ ಯುಗದಲ್ಲಿ ಮಹಿಳೆಯರನ್ನು ಈ ರೀತಿ ಅಮಾನವೀಯವಾಗಿ ನಡೆಸಿಕೊಂಡಿರುವುದು ಖಂಡನಾರ್ಹ.

ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌಜನ್ಯ, ಅತ್ಯಾಚಾರ, ಕೊಲೆಯನ್ನು ಸಹಿಸಲು ಸಾಧ್ಯವಿಲ್ಲ. ಹಿಂಸಾಚಾರವನ್ನು ನಿಯಂತ್ರಿಸಲು ವಿಫಲವಾಗಿರುವ ಬಿರೇನ್ ಸಿಂಗ್ ನೇತೃತ್ವದ ಮಣಿಪುರ ಸರ್ಕಾರವನ್ನು ವಜಾಗೊಳಿಸಿ, ಅಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಲತಾ ಜತ್ತಿ, ರಾಜ್ಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಪದ್ಮ ಪುರುಷೋತ್ತಮ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷರಾದ ಚಿನ್ನಮ್ಮ, ಮಹಿಳಾ ಘಟಕದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ನಾಗಶ್ರೀ, ಮುಖಂಡರಾದ ಭವ್ಯ, ಕಲಾವತಿ, ನೀಲಮ್ಮ, ಸರೋಜಮ್ಮ, ಸುವರ್ಣ ಇತರರು ಇದ್ದರು.

ಧ್ರುವನಾರಾಯಣ್ ಸ್ಮರಣಾರ್ಥ ಆರೋಗ್ಯ ತಪಾಸಣಾ ಶಿಬಿರ



ಕೊಳ್ಳೇಗಾಲ, ಜು.31– ಧ್ರುವನಾರಾಯಣ್ ಅಭಿಮಾನಿಗಳ ಬಳಗ, ಸಮೃದ್ಧಿ ಫೌಂಡೇಷನ್, ಈಸ್ಟ್ ಪಾಯಿಂಟ್ ಆಸ್ಪತ್ರೆ, ಚೌಡೇಶ್ವರಿ ಧಾರ್ಮಿಕ ಸಂಸ್ಥೆಯ ವತಿಯಿಂದ ದಿ. ಆರ್. ಧ್ರುವನಾರಾಯಣ್ ಅವರ 62ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಕೊಳ್ಳೇಗಾಲದಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು. ಬಳಿಕ ಮಾತನಾಡಿ, ಧ್ರುವನಾರಾಯಣ್ ಅವರೆಂದಿಗೂ ಮರೆಯಲಾಗದ ಜನನಾಯಕ, ಅವರ ಹೆಸರಿನಲ್ಲಿ ನಡೆಯುತ್ತಿರುವ ಈ ಶಿಬಿರ ಜನರಿಗೆ ಅನುಕೂಲವಾಗಲಿ ಎಂದರು. ಮಾಜಿ ಶಾಸಕ ನರೇಂದ್ರ ಮಾತನಾಡಿ, ಗಣ್ಯರ ಜಯಂತಿಯಂತೆ ಧ್ರುವನಾರಾಯಣ್ ಅವರ ಜಯಂತಿ ಆಚರಿಸಲಾಗುತ್ತಿರುವುದು ಸಂತಸದ ವಿಷಯ. ಅವರು ಸೋತರೂ ಸಹಾ ಪಕ್ಷ ನಿಷ್ಠರಾಗಿ, ಜನಾನುರಾಗಿ ನಾಯಕರಾಗಿದ್ದರು. ಉತ್ತಮ ಸಂಸದೀಯ ಪಟುಗಳೆಂದು ಖ್ಯಾತರಾಗಿದ್ದರು. ಹಳೇ ಮೈಸೂರು ಭಾಗದ ಜವಾಬ್ದಾರಿಯನ್ನು ಅವರು ನಿಭಾಯಿಸಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಧ್ರುವ ನಾರಾಯಣ್ ಅವರ ಪರಿಶ್ರಮವೂ ಇದೆ ಎಂದರು.

ಮಾಜಿ ಶಾಸಕರಾದ ಎಸ್.ಜಯಣ್ಣ, ಜಿ.ಎನ್. ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಲಹಳ್ಳಿ ತೋಟೇಶ್, ಪ್ರಧಾನ ಕಾರ್ಯದರ್ಶಿ ಬಸ್ತಿಪುರ ರವಿ, ಮ.ಬೆಟ್ಟ ಧರ್ಮದರ್ಶಿ ಮಂಡಳಿ ಮಾಜಿ ಸದಸ್ಯ ಕೊಪ್ಪಾಳಿನಾಯಕ, ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಚೌಡೇಶ್ವರಿ ಟ್ರಸ್ಟ್ ಕಾರ್ಯದರ್ಶಿ ಶ್ರೀನಿವಾಸ್, ಡಾ.ಶಿವಕುಮಾರ ಸ್ವಾಮಿ, ಗಣೇಶಬಾಬು, ನಗರಸಭೆ ಮಾಜಿ ಅಧ್ಯಕ್ಷ ಶಾಂತರಾಜು, ಸದಸ್ಯರುಗಳಾದ ರಾಘವೇಂದ್ರ, ಎ.ಪಿ. ಶಂಕರ್, ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ಕಾಂಗ್ರೆಸ್ ಎಸ್ಸಿ ವಿಭಾಗದ ರಾಜ್ಯ ಸಂಚಾಲಕ ನಾಗರಾಜು, ಮುಡಿಗುಂಡ ಶಾಂತರಾಜು, ತಾಪಂನ ಮಾಜಿ ಅಧ್ಯಕ್ಷ ಮುರಳಿ, ಅಣಗಳ್ಳಿ ಬಸವರಾಜು, ತೇರಂಬಳ್ಳಿ ಕುಮಾರ, ಅಕ್ತರ್, ಇರ್ಷಾದ್ ಪಾಶಾ, ಚಿನ್ನಸ್ವಾಮಿ ಮಾಳಿಗೆ, ಜಿ.ಎನ್. ಲೋಕೇಶ್, ಕುಮಾರ ಇನ್ನಿತರರಿದ್ದರು.

ಗುಂಡ್ಲುಪೇಟೆಯಲ್ಲಿ ವಿಜೃಂಭಣೆಯ ಬಸವ ಜಯಂತಿ



ಗುಂಡ್ಲುಪೇಟೆ, ಜು.31– ವೀರಶೈವ ಸಂಘಟನೆಗಳ ವತಿಯಿಂದ ಪಟ್ಟಣದಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಸೋಮವಾರ ಬೆಳಗ್ಗೆ ಜೆ.ಎಸ್.ಎಸ್.ಕಾಲೇಜಿನ ಆವರಣದಲ್ಲಿ ಶ್ರೀ ಬಸವೇಶ್ವರರ ಪುತ್ಥಳಿಯನ್ನು ಸಾರೋಟಿನಲ್ಲಿ ಇರಿಸಿದ ನಂತರ ಮೆರವಣಿಗೆಗೆ ಮಾದಾಪಟ್ಟಣ ಮಠಾಧ್ಯಕ್ಷರಾದ ಶ್ರೀ ತೋಂಟದಾರ್ಯ ಸ್ವಾಮೀಜಿ ಹಾಗೂ ಸೋಮಹಳ್ಳಿ ಮಠಾಧ್ಯಕ್ಷರಾದ ಸಿದ್ದಮಲ್ಲಸ್ವಾಮೀಜಿ ಚಾಲನೆ ನೀಡಿದರು. ನಂದೀಧ್ವಜ, ಮಂಗಳವಾದ್ಯ, ಗೊರವರ ಕುಣಿತ, ಛತ್ರಿ–ಚಾಮರಗಳೊಂದಿಗೆ ಮಡಹಳ್ಳಿ ವೃತ್ತ, ಸಾರಿಗೆ ಬಸ್ ನಿಲ್ದಾಣದ ಎದುರು ರಸ್ತೆ, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ಕೊತ್ವಾಲ್ ಚಾವಡಿ, ಚಾಮರಾಜನಗರ ರಸ್ತೆ ಮೂಲಕ ಸಾಗಿತು. ಗ್ರಾಮಾಂತರ ಪ್ರದೇಶಗಳಿಂದ ಆಗಮಿಸಿದ ಸಂಘಟನೆಗಳವರು ಹಾಗೂ ಯುವಕರು ಕೈಯಲ್ಲಿ ಬಸವಧ್ವಜ ಹಿಡಿದು ಮೆರವಣಿಗೆಯುದ್ದಕ್ಕೂ ಸಾಗಿದರು. ಮಹಾಸಭಾ ಹಾಗೂ ಜಯಂತಿ ಆಚರಣೆ ಸಮಿತಿಯ ವತಿಯಿಂದ ಸೋಮೇಶ್ವರ ಹಾಸ್ಟೆಲ್‌ನಲ್ಲಿ ಪ್ರಸಾದ ವಿನಿಯೋಗ ಮಾಡಲಾಯಿತು. ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಚ್.ಎಸ್.ನಂಜಪ್ಪ ಸೇರಿದಂತೆ ಹಲವರು ಇದ್ದರು.

ಮೊಗೇರ್ ಜಾತಿ ಕೈಬಿಡುವ ಸಂಬಂಧ ಆಕ್ಷೇಪಣೆ, ತಕರಾರು ಸಲ್ಲಿಕೆಗೆ ಅವಕಾಶ

ಚಾಮರಾಜನಗರ, ಜು.31– ಮೊಗೇರ್ ಜಾತಿಯು ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎಂ 2000 ದಿನಾಂಕ 30–03–2023ರ ಪ್ರವರ್ಗ–1 ಅನುಕ್ರಮ ಸಂಖ್ಯೆ 6(ae) ರಲ್ಲಿ ಮೊಗೇರ್ (MOGER) ಜಾತಿಯನ್ನು ಕೈ ಬಿಡುವ ಬಗ್ಗೆ ಸಾರ್ವಜನಿಕರು, ಸಂಘ ಸಂಸ್ಥೆಗಳಿಂದ ಆಕ್ಷೇಪಣೆ ತಕರಾರುಗಳನ್ನು ಆಹ್ವಾನಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ 10 ದಿನಗಳೊಳಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಚೇರಿಗೆ ಲಿಖಿತವಾಗಿ ಸಲ್ಲಿಸುವಂತೆ ಪ್ರಕಟಣೆ ಕೋರಿದೆ.

ಡಿವೈಎಸ್‌ಪಿ ಪ್ರಿಯದರ್ಶಿನಿ ವರ್ಗಾವಣೆ



ಚಾಮರಾಜನಗರ, ಜು.31– ಚಾಮರಾಜನಗರ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಅವರನ್ನು ಬೆಂಗಳೂರಿನ ಮಾರತ್‌ಹಳ್ಳಿ ಉಪವಿಭಾಗಕ್ಕೆ ವರ್ಗಾವಣೆ ಮಾಡಲಾಗಿದ್ದು, ಅವರ ಸ್ಥಳಕ್ಕೆ ರಾಜ್ಯ ಗುಪ್ತವಾರ್ತೆ ಡಿವೈಎಸ್‌ಪಿ ಆಗಿದ್ದ ವಿ. ಲಕ್ಷ್ಮಯ್ಯ ಅವರನ್ನು ನಿಯೋಜಿಸಲಾಗಿದೆ.

ನಾಳೆ ಕ್ರೈಸ್ತ ಸಂಘಟನೆಗಳಿಂದ ಪ್ರತಿಭಟನೆ

ಚಾಮರಾಜನಗರ, ಜು.31– ಮಣಿಪುರದ ಘಟನೆಯನ್ನು ಖಂಡಿಸಿ ಆ.2ರಂದು ನಗರದಲ್ಲಿ ಜಿಲ್ಲೆಯ ಸಮಸ್ತ ಕ್ರೈಸ್ತ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಸಂಘಟಕ ಅಂತೋಣಪ್ಪ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಣಿಪುರದಲ್ಲಿ ಕುಕಿ ಬುಡಕಟ್ಟಿನ ಸಮುದಾಯದ ಮೇಲೆ ಬಹುಸಂಖ್ಯಾತ ಮೈತೇಯಿ ಸಮುದಾಯವು ಮೀಸಲಾತಿ ಕಸಿದುಕೊಳ್ಳುವ ವಿಚಾರದಲ್ಲಿ ನಿರಂತರವಾಗಿ ಹಲ್ಲೆ ಮಾಡುತ್ತಿದೆ. ಇಂದಿಗೂ ಅಮಾನುಷ ಕೃತ್ಯಗಳು, ಕೊಲೆಗಳು, ಮಹಿಳೆಯರು ಮತ್ತು ಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಿವೆ ಎಂದು ತಿಳಿಸಿದರು. ಮಣಿಪುರದಲ್ಲಿ ಸುಮಾರು 300 ಕ್ರೈಸ್ತ ದೇವಾಲಯಗಳು, ನೂರಾರು ಕ್ರೈಸ್ತರ ಮನೆಗಳು, ಆಸ್ತಿಪಾಸ್ತಿಗಳನ್ನು ನಾಶಪಡಿಸಲಾಗಿದೆ. ಮಹಿಳೆಯರನ್ನು ಬೆತ್ತಲೆಗೊಳಿಸಿ, ಅಲ್ಲಿನ ಬೀದಿಗಳಲ್ಲಿ ನಗ್ನ ಮೆರವಣಿಗೆ ಮಾಡಿರುವುದು, ಅತ್ಯಾಚಾರ ಮಾಡಿ ಕೊಂದಿರುವುದು, ಭಾರತ ವಿಶ್ವದ ಮುಂದೆ ತಲೆ ತಗ್ಗಿಸುವಂತೆ ಮಾಡಿದೆ. ಇದೊಂದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು, ಇದನ್ನು ಜಿಲ್ಲಾ ಕ್ರೈಸ್ತ ಸಂಘಟನೆಗಳ ಒಕ್ಕೂಟ ಖಂಡಿಸುತ್ತದೆ ಎಂದರು.

ಕೂಡಲೇ ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸಿ ಮಣಿಪುರದಲ್ಲಿ ದೌರ್ಜನ್ಯವನ್ನು ನಿಯಂತ್ರಿಸಲು ಅಲ್ಲಿನ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಬೇಕು. ಮಣಿಪುರದಲ್ಲಿ ಶಾಂತಿ ಮರು ಸ್ಥಾಪಿಸಬೇಕು ಎಂದು ಆಗ್ರಹಿಸಿ ಆ. 2ರಂದು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಚೆಲುವರಾಜ್, ವಿನ್ಸೆಂಟ್ ಇತರರಿದ್ದರು.

ಮೂರನೇ ಪುಟದಿಂದ

ಮೂಲ ಸೌಕರ್ಯಕ್ಕೆ ನಾಗರಿಕರು ಜಿಟಿಡಿ ಮೊರೆ

ನಡೆಸಿದರು. ಸಭೆಯಲ್ಲಿ ಬೋಗಾದಿ ಮಾತ್ರವಲ್ಲ, ಚಾಮುಂಡೇಶ್ವರಿ ಕ್ಷೇತ್ರದ ಬಹುತೇಕ ಬಡಾವಣೆಗಳ ನಾಗರಿಕರು ಭಾಗಿಯಾಗಿ ಜಿ.ಟಿ.ದೇವೇಗೌಡರ ಮುಂದೆ ಸಮಸ್ಯೆಗಳ ಸರಮಾಲೆಯನ್ನೆ ಮುಂದಿಟ್ಟರು.

ಬಡಾವಣೆಗಳಲ್ಲಿ ಕನಿಷ್ಟ ಮೂಲಸೌಕರ್ಯಗಳಿಲ್ಲ. ಬೀದಿ ದೀಪಗಳಿಲ್ಲ, ಒಳ ಚರಂಡಿ ವ್ಯವಸ್ಥೆ ಇಲ್ಲ, ಗುಣಮಟ್ಟದ ರಸ್ತೆಗಳಿಲ್ಲ, ಕಸ ವಿಲೇವಾರಿ ಮಾಡುವವರಿಲ್ಲ, ಮಳೆ ನೀರು ಮನೆಯೊಳಗೆ ನುಗ್ಗುತ್ತದೆ ಸೇರಿದಂತೆ ಹತ್ತಾರು ಸಮಸ್ಯೆಗಳ ಬಗ್ಗೆ ಶಾಸಕರಿಗೆ ಮನದಟ್ಟು ಮಾಡಿದರು. ಖಾಸಗಿ ಬಡಾವಣೆ ನಿರ್ಮಾಣ ಮಾಡಿರುವ ಡೆವಲಪರ್ಸ್‌ಗಳಿಂದ ತಮಗೆ ಆಗಿರುವ ಮೋಸವನ್ನು ವಿವರಿಸಿದರು. ತರುವಾಯ ಮಾತನಾಡಿದ ಜಿ.ಟಿ.ದೇವೇಗೌಡರು, ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳ ಪರಿಸ್ಥಿತಿ ಏನೆಂದು ವಿಧಾನಸೌಧದಲ್ಲಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇನೆ.

ನಿಮ್ಮ ಪರ ವಾಗಿ ಅಲ್ಲಿ ಧ್ವನಿ ಎತ್ತಿದ್ದೇನೆ. ಇದರಿಂದ ಕೆಲವು ಸಮಸ್ಯೆಗಳು ಈಗಾಗಲೇ ಪರಿಹಾರ ವಾಗಿದೆ. ಬಡಾವಣೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಾಗಿದೆ. ಆದರೆ ಸರ್ಕಾರ ಅನುಮೋ ದನೆ ನೀಡಿಲ್ಲ. ಈಗ ಯಾವುದೇ ಅಭಿ ವೃದ್ಧಿ ಕೆಲಸಕ್ಕೂ ಹಣ ಬಿಡುಗಡೆ ಮಾಡು ವುದಿಲ್ಲ ಎಂದು ಸರ್ಕಾರ ಹೇಳಿದೆ. ಇದರಿಂದ ಬಹಳಷ್ಟು ಕಡೆ ಕಾಮಗಾರಿ ಅರ್ಧಕ್ಕೆ ನಿಂತಿದೆ. ಜೊತೆಗೆ ಹೊಸ ಕಾಮಗಾರಿ ಕೈಗೆತ್ತಿಕೊಳ್ಳಲು ಗುತ್ತಿಗೆದಾರರು ಮುಂದೆ ಬರುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಎನ್‌ಓಸಿ ನೀಡಬಾರದಿತ್ತು: ಖಾಸಗಿ ಡೆವಲಪರ್ಸ್, ಮೂಲಸೌಕರ್ಯ ಕಲ್ಪಿಸದ ಹೊರತು ಮುಡಾದವರು ನಿರಪೇಕ್ಷಣಾ ಪತ್ರ (ಎನ್‌ಓಸಿ) ನೀಡಬಾರದಾಗಿತ್ತು, ಆದರೆ ನೀಡಿದ್ದಾರೆ. ಯಾವುದೇ ಸೌಲಭ್ಯಗಳಿಲ್ಲದ ಬಡಾವಣೆಗಳಲ್ಲಿ ನಿವೇಶನ ಖರೀದಿ ಮಾಡಿರುವ ನೀವು ಈಗ ಕಷ್ಟ ಪಡುತ್ತಿದ್ದೀರಾ. ಮುಡಾ ಬೇಜವಾಬ್ದಾರಿಯಿಂದ ಈಗ ಸಮಸ್ಯೆಗಳು ಎದುರಾಗಿವೆ ಎಂದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸುಮಾರು 275 ಖಾಸಗಿ ಬಡಾವಣೆಗಳಿದ್ದು, 100 ಬಡಾವಣೆಗಳಿಗೆ ಕೆಲವು ಮೂಲಸೌಕರ್ಯ ಕಲ್ಪಿಸಲಾಗಿದೆ. ಇನ್ನುಳಿದಂತೆ 175 ಬಡಾವಣೆಗಳಿಗೆ ಕನಿಷ್ಠ ಮೂಲ ಸೌಕರ್ಯಗಳಿಲ್ಲ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಈ ಎಲ್ಲಾ ಬಡಾವಣೆಗಳನ್ನು ಅಭಿವೃದ್ಧಿ ಮಾಡಲು ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಿಗೂ ಹಣ ಕೊಡುವುದಿಲ್ಲ ಎಂದು ಸರ್ಕಾರ ಹೇಳಿದೆ ಈ ಕಾರಣದಿಂದ ಈಗ ಪರ್ಯಾಯ ಮಾರ್ಗವನ್ನು ಕಂಡು ಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಅಧಿಕಾರಿಗಳ ಸಭೆ: ಸರ್ಕಾರದ ಸಂಬಂಧಿಸಿದ ಅಧಿಕಾರಿಗಳು ಸೇರಿದಂತೆ ಜಿಲ್ಲಾಧಿಕಾರಿಗಳ ಜೊತೆ ಸಭೆ ನಡೆಸುತ್ತೇನೆ. ಬಡಾವಣೆಗಳಲ್ಲಿರುವ ನಿವೇಶನ ಹಾಗೂ ಮನೆಗಳಿಗೆ ಮೊದಲು ಖಾತೆ ಮಾಡಿಸಲಾಗುವುದು. ತರುವಾಯ ಮಾಲೀಕರಿಂದ ತೆರಿಗೆ ವಸೂಲಿ ಮಾಡಿ ಆ ಹಣದಲ್ಲೆ ಬಡಾವಣೆಗಳನ್ನು ಅಭಿವೃದ್ಧಿ ಮಾಡಲಾಗುವುದು. ಈ ಬಗ್ಗೆ ಕೂಡಲೇ ಕಾರ್ಯ ಪ್ರವೃತ್ತನಾಗಿ ನಿಮ್ಮ ಸಮಸ್ಯೆ ಪರಿಹಾರ ಮಾಡುತ್ತೇನೆ ಎಂದು ಜಿ.ಟಿ.ದೇವೇಗೌಡರು ಭರವಸೆ ನೀಡಿದರು.

ಸಿದ್ದರಾಮಯ್ಯರಿಗೆ ಮನವಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ಚಾಮುಂಡೇಶ್ವರಿ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ ಆಗಿದ್ದವರು. ಅವರಿಗೆ ಕ್ಷೇತ್ರದ ಸಮಸ್ಯೆಗಳು ಮನವರಿಕೆಯಾಗಿದೆ. ಶೀಘ್ರದಲ್ಲೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನ ಮಾಡುತ್ತೇನೆ ಎಂದು ಆಶ್ವಾಸನೆ ನೀಡಿದರು.

ಉಂಡುವಾಡಿ ಯೋಜನೆ ಪ್ರಗತಿ: ಹೆಚ್. ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಉಂಡುವಾಡಿ ಬಳಿ ಕೆಆರ್‌ಎಸ್ ಹಿನ್ನೀರಿನಿಂದ ಕುಡಿಯುವ ನೀರು ಸರಬರಾಜು ಮಾಡುವ 600 ಕೋಟಿ ರೂಪಾಯಿ ಯೋಜನೆಗೆ ಚಾಲನೆ ನೀಡಲಾಗಿದೆ. ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿದೆ. ಕೆಲವೇ ದಿನಗಳಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಇಂದಿನ ಸಭೆಯಲ್ಲಿ ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಜಿ.ಜಗರೆಡ್ಡಿ, ಕಂದಾಯ ನಿರೀಕ್ಷಕ ವಿಜಯಕುಮಾರ್, ಅಸಿಸ್ಟೆಂಟ್ ಇಂಜಿನಿಯರ್ ಹರ್ಷ ಉಪಸ್ಥಿತರಿದ್ದರು. ಚಾಮುಂಡೇಶ್ವರಿ ಕ್ಷೇತ್ರದ ನೂರಾರು ಜನರು ಸಭೆಯಲ್ಲಿ ಭಾಗವಹಿಸಿದ್ದರು.

> ಚಾಮುಂಡೇಶ್ವರಿ ಕ್ಷೇತ್ರದ ಬಹುತೇಕ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಆದರೆ ಇಲ್ಲಿನ ಭೂಮಿಗೆ ಚಿನ್ನದ ಬೆಲೆ ಇದೆ. ಬೀದಿ ದೀಪ, ರಸ್ತೆ, ಒಳ ಚರಂಡಿ ಸೇರಿದಂತೆ ಹಲವು ಸಮಸ್ಯೆಗಳು ಕಣ್ಣಿಗೆ ಕಾಣುತ್ತವೆ. ಆದರೂ ನಿವೇಶನಗಳ ಖರೀದಿ ಭರಾಟೆ ನಿಂತಿಲ್ಲ ಎಂದು ಬಹಳಷ್ಟು ನಾಗರಿಕರು ದೂರಿದರು.
>
> ಮೂಲಸೌಕರ್ಯ ಕಲ್ಪಿಸದೇ ಬಡಾವಣೆ ಅಭಿವೃದ್ಧಿ ಆಗಿಲ್ಲ ಎಂದು ತಿಳಿದಿದ್ದರೂ ಬಹಳಷ್ಟು ಜನರು ನಿವೇಶನ ಖರೀದಿಗೆ ಮುಗಿ ಬೀಳುತ್ತಾರೆ. ಆದರೆ ನಿವೇಶನಗಳು ಹಾಟ್ ಕೇಕ್‌ನಂತೆ ಮಾರಾಟವಾಗುತ್ತಿವೆ. ಲಕ್ಷದಿಂದ ಕೋಟಿ ತನಕ ಇಲ್ಲಿ ನಿವೇಶನಗಳನ್ನು ಖರೀದಿಸುತ್ತಿದ್ದಾರೆ ಎಂದರು. ಬಡಾವಣೆಗಳಲ್ಲಿ ಶೇ.50 ರಷ್ಟು ಮನೆಗಳು ನಿರ್ಮಾಣವಾಗಿವೆ. ಇದರಿಂದ ನಗರದ ಬೆಳವಣಿಗೆ ವೇಗದಗತಿ ತೀವ್ರವಾಗಿದೆ. ಹಳ್ಳಿಗಳಲ್ಲಿರುವ ಜಮೀನುಗಳು ಮಾಯವಾಗಿ ನಿವೇಶನಗಳ ರೂಪ ಪಡೆಯುತ್ತಿವೆ ಎಂದು ತಿಳಿಸಿದರು.

ಸರ್ಕಾರ ಬೀಳಿಸಲ್ಲ: ಜಿ.ಟಿ.ದೇವೇಗೌಡರ ಸ್ಪಷ್ಟನೆ

ಮಾಡುವ ಅಧಿ ಕಾರಿಗಳನ್ನು ನಿಯೋಜನೆ ಮಾಡುವ ಬದಲು ತಮಗೆ ಇಷ್ಟ ಬಂದ ಅಧಿಕಾರಿ ಗಳನ್ನು ಸರ್ಕಾರ ವರ್ಗಾವಣೆ ಮಾಡು ತ್ತಿದೆ. ಇದರಿಂದ ಶಾಸಕರಿಗೆ ಸಹಜ ವಾಗಿಯೇ ಅಸಮಾಧಾನವಿದೆ. ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಹಣ ಕೂಡ ಬಿಡುಗಡೆ ಮಾಡದಿರುವುದು ಮತ್ತೊಂದು ಕಾರಣ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆ ಗಳ ಬಗ್ಗೆ ನನ್ನ ಮೆಚ್ಚುಗೆ ಕೂಡ ಇದೆ. ಆದರೆ ಅದಕ್ಕಾಗಿ ಹಣ ಕ್ರೋಢೀಕರಣ ಮಾಡಲು ಸರ್ಕಾರ ಇನ್ನಿತರೆ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡದಿರುವುದು ಸರಿಯಲ್ಲ. ಜಿಎಸ್‌ಟಿ ಸೇರಿದಂತೆ ಇತರೆ ಮೂಲದಿಂದ ಹೆಚ್ಚಿನ ಹಣ ಸರ್ಕಾರಕ್ಕೆ ಬರುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡಲು ಸರ್ಕಾರಕ್ಕೆ ಬಹಳಷ್ಟು ಮಾರ್ಗಗಳಿವೆ. ಈ ಹಿನ್ನೆಲೆ ಮುಂದಿನ ದಿನಗಳಲ್ಲಿ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತದೆ ಎಂಬ ವಿಶ್ವಾಸವಿದೆ ಎಂದು ಜಿ.ಟಿ. ದೇವೇಗೌಡರು ತಿಳಿಸಿದರು.

ಗೃಹಜ್ಯೋತಿ ಉಚಿತ ವಿದ್ಯುತ್

ಗ್ರಾಹಕರು ತಮಗೆ ಉಚಿತ ವಿದ್ಯುತ್ ಸೌಲಭ್ಯ ಬೇಕೆಂದಲ್ಲಿ ಎಂದಾದರೂ ಅರ್ಜಿ ಸಲ್ಲಿಸಬಹುದು. ವಿಧಾನಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ ನೀಡಿದ್ದ 5 ಭರವಸೆಗಳಲ್ಲಿ ಗೃಹ ಜ್ಯೋತಿ ಸೇರಿದಂತೆ 4 ಭರವಸೆಗಳನ್ನು ಸರ್ಕಾರ ಜಾರಿಗೆ ತಂದಿದೆ.

ಮನೆಯ ಯಜಮಾನಿಗೆ ಮಾಸಿಕ 2000 ರೂ. ನೀಡುವ ಗೃಹ ಲಕ್ಷ್ಮಿ ಯೋಜನೆ ಆಗಸ್ಟ್ 17ರಿಂದ ಜಾರಿಯಾಗಲಿದ್ದು, ಇದರ ಲಾಭ ಪಡೆಯುವವರು ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಕಾರ್ಯ ಆರಂಭಗೊಂಡಿದೆ.

ಈಗಾಗಲೇ ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದಾರರಿಗೆ ಹೆಚ್ಚುವರಿ 5 ಕೆ.ಜಿ.ಅಕ್ಕಿಯ ಹಣ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಆಗುತ್ತಿದೆ.

ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆಯೂ ಅನುಷ್ಠಾನಗೊಂಡಿದೆ. ಮಹಿಳೆಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

ಪದವೀಧರರು ಹಾಗೂ ಡಿಪ್ಲೊಮಾದಾರರಿಗೆ ಮಾಸಿಕ ಭತ್ಯೆ ನೀಡುವ ಗ್ಯಾರಂಟಿ ಬಾಕಿ ಉಳಿದಿದ್ದು, ಡಿಸೆಂಬರ್‌ನಿಂದ ಚಾಲನೆ ನೀಡಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಪೊಲೀಸ್ ವಶಕ್ಕೆ

ಬೈಕ್‌ನಲ್ಲಿ ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಹೆಬ್ಬಾಳು ಠಾಣೆ ಪೊಲೀಸರು, ತನಿಖೆ ನಡೆಸಿ, ಸಿಸಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಕಾಲ್ ಡೀಟೇಲ್ ರೆಕಾರ್ಡ್ಸ್ (CDR) ಸುಳಿವಿನ ಜಾಡು ಹಿಡಿದಾಗ ಪ್ರಕರಣದಲ್ಲಿ ಐವರು ಭಾಗಿಯಾಗಿದ್ದಾರೆಂಬುದು ತಿಳಿಯಿತು.

ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾದ ಇಬ್ಬರು ಈ ಕೃತ್ಯಕ್ಕೆ ಇತರ ಮೂವರ ನೆರವು ಪಡೆದಿದ್ದರು ಎಂಬುದು ತಿಳಿಯುತ್ತಿದ್ದಂತೆಯೇ ಬಲೆ ಬೀಸಿದ ಪೊಲೀಸರಿಗೆ ತಾವು ಸಂಗ್ರಹಿಸಿದ್ದ ಕಾಲ್ ಡೀಟೇಲ್ಸ್‌ನಲ್ಲಿದ್ದ ಒಂದು ಸಂಖ್ಯೆಯಿಂದ ಡಿಜಿಟಲ್ ಪೇಮೆಂಟ್ ಆಗಿರುವುದು ಪತ್ತೆಯಾಗಿದೆ. ಅದನ್ನು ಬೆನ್ನತ್ತಿದಾಗ ಟೀ ಶಾಪ್‌ವೊಂದರಲ್ಲಿ ಐವರು ಟೀ ಕುಡಿದು, ಸಿಗರೇಟ್ ಸೇದಿದ ನಂತರ ಡಿಜಿಟಲ್ ಪೇಮೆಂಟ್ ಮಾಡಿ ಹೋಗಿರುವುದು ಖಚಿತವಾಗಿದ್ದು, ಅವರಲ್ಲಿ ಓರ್ವ ಸಿಸಿ ಕ್ಯಾಮೆರಾ ದೃಶ್ಯಾವಳಿಯಲ್ಲಿದ್ದ ವ್ಯಕ್ತಿ ಎಂಬುದನ್ನು ಗುರುತಿಸಲಾಗಿದೆ. ಇದರ ಜಾಡು ಹಿಡಿದು ಪೊಲೀಸರು ಐವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಪ್ರಕರಣ ಬಯಲಾಗಿದೆ.

ಪೊಲೀಸರು ವಶಕ್ಕೆ ತೆಗೆದುಕೊಂಡಿರುವ ಐವರೂ ಮೈಸೂರಿನ ವಿವಿಧ ಅಪಾರ್ಟ್‌ಮೆಂಟ್‌ಗಳಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳಾಗಿ ಕೆಲಸ ಮಾಡುತ್ತಿದ್ದರು. ಪ್ರಕರಣದ ಪ್ರಮುಖ ಆರೋಪಿಯಾದ ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದವನು ತನ್ನ ಹೆಂಡತಿ ಬಳಿ ಹಣ ಕೊಟ್ಟು ಇರಿಸಿದ್ದು, ಅದು ಕಳವು ಮಾಡಿದ್ದ ಹಣ ಎಂಬುದು ಆಕೆಗೆ ಗೊತ್ತಿರಲಿಲ್ಲ ಎಂದು ಹೇಳಲಾಗಿದೆ.

ಹಣ ದೋಚಿದ ಬಳಿಕ ಅದನ್ನು ಐವರೂ ಹಂಚಿಕೊಂಡಿದ್ದು, ಅದರಲ್ಲಿ ಭಾಗಶಃ ಹಣವನ್ನು ಖರ್ಚು ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಇವರುಗಳು ಇದೇ ಮಾದರಿ ಕೃತ್ಯಗಳನ್ನು ಬೇರೆಡೆ ನಡೆಸಿದ್ದಾರೆಯೇ ಎಂಬುದರ ಬಗ್ಗೆ ಪೊಲೀಸರು ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ಪೀಪಲ್ ಫಾರ್ ಅನಿಮಲ್‌ನಲ್ಲಿ ಅಂಗವೈಕಲ್ಯವುಳ್ಳ ನಾಯಿಗಳಿಗೆ ಪ್ರತ್ಯೇಕ ಆಶ್ರಯತಾಣ

ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಉದ್ಘಾಟನೆ







ಮೈಸೂರು, ಜು.31(ಬಿಎಲ್‌ಯು)– ಮೈಸೂರಿನ ಬೋಗಾದಿಯಲ್ಲಿರುವ ಪ್ರಾಣಿಗಳ ಆರೈಕೆ ಸಂಸ್ಥೆ ಪೀಪಲ್ ಫಾರ್ ಅನಿಮಲ್‌ನಲ್ಲಿ ಅಂಗವೈಕಲ್ಯವುಳ್ಳ ಬೀದಿ ನಾಯಿಗಳಿಗೆ ನೂತನವಾಗಿ ನಿರ್ಮಿಸಿರುವ ಪ್ರತ್ಯೇಕ ಆವರಣವನ್ನು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪತ್ನಿ ತ್ರಿಷಿಕಾ ಕುಮಾರಿ ಇಂದು ಉದ್ಘಾಟಿಸಿದರು.



ಇದೇ ವೇಳೆ ಮಾತನಾಡಿದ ಅವರು, ಅಂಗವೈಕಲ್ಯವುಳ್ಳ ಬೀದಿನಾಯಿಗಳಿಗೆ ಈ ಆಶ್ರಯತಾಣ ಅನುಕೂಲವಾಗುತ್ತದೆ. ಅನಾಥ ಪ್ರಾಣಿಗಳಿಗೆ ಆಶ್ರಯ ನೀಡಿ ಪೋಷಣೆ ಮಾಡುತ್ತಿರುವ ಪೀಪಲ್ ಫಾರ್ ಅನಿಮಲ್ ಕಾರ್ಯ ಪ್ರಶಂಸನೀಯ. ಇಲ್ಲಿರುವ ಪ್ರಾಣಿಗಳನ್ನು ಜನರು ದತ್ತು ಪಡೆಯಬೇಕು ಎಂದು ಸಲಹೆ ನೀಡಿದರು.

ಈ ಮೊದಲು ಅಂಕವೈಕಲ್ಯವಿರುವ ನಾಯಿಗಳು ಸೇರಿದಂತೆ ಎಲ್ಲಾ ನಾಯಿಗಳನ್ನು ಒಂದೇ ಆವರಣದಲ್ಲಿರಿಸಲಾಗಿತ್ತು. ಆದರೆ ಆಹಾರ ನೀಡಿದಾಗ ಇತರೆ ನಾಯಿಗಳು ಸೇವಿಸಲು ಬಿಡುತ್ತಿರಲಿಲ್ಲ. ಅದೂ ಅಲ್ಲದೆ ಶಕ್ತಿಯುತವಾಗಿರುವ ಇತರೆ ನಾಯಿಗಳು ದಾಳಿ ಮಾಡಿದಾಗ ರಕ್ಷಣೆ ಮಾಡಿಕೊಳ್ಳಲು ಅಂಗವಿಕಲ ನಾಯಿಗಳಿಗೆ ಸಾಧ್ಯವಾಗದೆ ಇನ್ನು ಗಾಯಗೊಳ್ಳುತ್ತಿದ್ದವು.

ಈ ಹಿನ್ನೆಲೆಯಲ್ಲಿ ಅಂಗವಿಕಲ ನಾಯಿಗಳಿಗಾಗಿ ಪ್ರತ್ಯೇಕವಾದ ಆವರಣವನ್ನು ನಿರ್ಮಾಣ ಮಾಡಲಾಗಿದೆ. 15 ಕ್ಕೂ ಹೆಚ್ಚು ಅಂಗವಿಕಲ ನಾಯಿಗಳಿಗೆ ವಿಶಾಲ ಸ್ಥಳದ ವ್ಯವಸ್ಥೆ ಮಾಡಲಾಗಿದೆ

ನಾಯಿ, ಬೆಕ್ಕು, ಕೋತಿ, ಮೊಲ, ಕುದುರೆ, ಕತ್ತೆ, ಕರು, ಹಂದಿ, ಬಾತುಕೋಳಿ, ಹದ್ದು ಸೇರಿದಂತೆ 300ಕ್ಕೂ ಹೆಚ್ಚು ಪ್ರಾಣಿಗಳಿಗೆ ಪೀಪಲ್ ಫಾರ್ ಅನಿಮಲ್‌ನಲ್ಲಿ ಆಶ್ರಯ ನೀಡಲಾಗಿದೆ.

ಅಂಗವಿಕಲ ನಾಯಿಗಳ ಆವರಣ ಉದ್ಘಾಟನೆ ವೇಳೆ ಪೀಪಲ್ ಫಾರ್ ಅನಿಮಲ್ ಅಧ್ಯಕ್ಷ ಜಿ.ಪ್ರಕಾಶ್, ಮ್ಯಾನೇಜಿಂಗ್ ಟ್ರಸ್ಟಿ ಸವಿತಾ, ಟ್ರಸ್ಟಿ ಸೌಂದರ್ ರಾಜನ್, ಪಶು ವೈದ್ಯ ಡಾ.ಅಮರ್‌ದೀಪ್ ಸಿಂಗ್ ಹಾಜರಿದ್ದರು.

ನಾಯಿ, ಬೆಕ್ಕಿನ ಮರಿ ದತ್ತು ಮೇಳ ಆರಂಭ

ಮೈಸೂರು, ಜು.31(ಬಿಎಲ್‌ಯು)– ಮೈಸೂರಿನ ಪೀಪಲ್ ಫಾರ್ ಅನಿಮಲ್ ಸಂಸ್ಥೆಯಲ್ಲಿ ಪ್ರಾಣಿ ಪ್ರಿಯರಿಗಾಗಿ ನಾಯಿ, ಬೆಕ್ಕಿನ ಮರಿ ದತ್ತು ಪಡೆಯುವ ಮೇಳ ಆರಂಭವಾಗಿದೆ. ನಿನ್ನೆ ಆರಂಭವಾದ ಮೇಳದಲ್ಲಿ ಪ್ರಾಣಿ ಪ್ರಿಯರು ಆರು ಬೆಕ್ಕಿನ ಮರಿ ಹಾಗೂ ಮೂರು ನಾಯಿ ಮರಿಗಳನ್ನು ದತ್ತು ಪಡೆದಿದ್ದಾರೆ. ಆಸಕ್ತ ಪ್ರಾಣಿ ಪ್ರಿಯರು ಯಾವಾಗ ಬೇಕಾದರೂ ಪೀಪಲ್ ಫಾರ್ ಅನಿಮಲ್‌ಗೆ ಹೋಗಿ ಪ್ರಾಣಿಗಳನ್ನು ದತ್ತು ಪಡೆಯಬಹುದು.

ಹೀಗೆ ದತ್ತು ಪಡೆಯುವವರಿಗೆ ಪ್ರಾಣಿಗಳನ್ನು ಸಾಕುವ ಬಗ್ಗೆ ಪೀಪಲ್ ಫಾರ್ ಅನಿಮಲ್‌ನಲ್ಲಿರುವ ಸ್ವಯಂ ಸೇವಕರು ಮಾರ್ಗದರ್ಶನ ನೀಡಲಿದ್ದಾರೆ. ಜೊತೆಗೆ ಪ್ರಾಣಿಗಳ ಆರೋಗ್ಯ ತಪಾಸಣೆ ಕೂಡ ಮಾಡುವರು. ಪ್ರಾಣಿಗಳನ್ನು ಸಾಕುವ ಬಗ್ಗೆ ದತ್ತು ಪಡೆಯುವವರ ಬಳಿ ಇರುವ ಸುರಕ್ಷಿತ ವಾತಾವರಣ, ಪ್ರಾಣಿ ಪ್ರಿಯರ ಕಾಳಜಿ, ಅವರು ತೋರುವ ಪ್ರೀತಿ ಸೇರಿದಂತೆ ಹಲವು ವಿಚಾರಗಳನ್ನು ಮನದಟ್ಟು ಮಾಡಿಕೊಂಡು ಸೂಕ್ತ ದಾಖಲಾತಿಗಳೊಂದಿಗೆ ದತ್ತು ನೀಡಲಾಗುತ್ತದೆ.

ಕೆಎಸ್‌ಆರ್‌ಟಿಸಿಗೆ ಇಂದು 63ನೇ ವಸಂತದ ಸಂಭ್ರಮ

ಕೇಕ್ ಕತ್ತರಿಸಿ ಸಂಭ್ರಮಿಸಲಿರುವ ಸಿಬ್ಬಂದಿ



> ಈ ಹಿಂದೆ ಕಾಲ್ನಡಿಗೆಯಲ್ಲಿ ಓಡಾಡುತ್ತಿದ್ದ ಜನ ಸಾರಿಗೆ ಬಸ್‌ಗಳಲ್ಲಿ ಓಡಾಡಲಾರಂಭಿಸಿದ್ದರು. ಇದೀಗ ಕೆಎಸ್‌ಆರ್‌ಟಿಸಿಯಲ್ಲಿ ಸಾಮಾನ್ಯ ಸಾರಿಗೆ, ಸೆಮಿ ಲಕ್ಷುರಿ, ಸೂಪರ್ ಡೀಲಕ್ಸ್, ರಾಜಹಂಸ, ನಾನ್ ಎಸಿ ಸ್ಲೀಪರ್, ವಜ್ರ, ಐರಾವತ, ಐರಾವತ ಗೋಲ್ಡ್ ಕ್ಲಾಸ್, ಅಂಬಾರಿ, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಉತ್ಸವ್, ಫ್ಲೈ ಬಸ್ ಹಾಗೂ ಇವಿ ಪವರ್ ಪ್ಲಸ್ ಬಸ್‌ಗಳು ಪ್ರಯಾಣಿಕರ ಸೇವೆ ಒದಗಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಗಳೆಲ್ಲರೂ ಸೇರಿ ಕೆಎಸ್‌ಆರ್‌ಟಿಸಿ ಸಂಸ್ಥೆಯ 63ನೇ ವಾರ್ಷಿಕೋತ್ಸವ ಕಾರ್ಯಕ್ರಮ ಆಯೋಜಿಸಿದ್ದಾರೆ.
>
> -ಟಿ.ಎಂ.ದೊಡ್ಡಗೌಡ, ಸಂಚಾರ ನಿಯಂತ್ರಕ, ನಗರ ಬಸ್ ನಿಲ್ದಾಣ

ಮೈಸೂರು,ಜು.31 (ಎಂಟಿವೈ)– ರಾಜ್ಯದ ಹೆಮ್ಮೆಯ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ)ಗೆ 63 ವಸಂತದ ಸಂಭ್ರಮ. ಈ ಹಿನ್ನೆಲೆಯಲ್ಲಿ ಸಿಬ್ಬಂದಿಗಳು ಮಂಗಳವಾರ ಬೆಳಗ್ಗೆ 9ಕ್ಕೆ ನಗರ ಬಸ್ ನಿಲ್ದಾಣದಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸುವುದರೊಂದಿಗೆ ಸಾರಿಗೆ ಸಂಸ್ಥೆ ನಡೆದು ಬಂದ ಹಾದಿಯನ್ನು ಪ್ರಯಾಣಿಕರೊಂದಿಗೆ ಹಂಚಿಕೊಳ್ಳಲು ನಿರ್ಧರಿಸಿದ್ದಾರೆ.

ಪ್ರಯಾಣಿಕರಿಗೆ ಸೇವೆ ಒದಗಿಸಲು ಬೆಂಗಳೂರಲ್ಲಿ 120 ಬಸ್‌ಗಳೊಂದಿಗೆ 1948ರ ಸೆ.12ರಂದು 'ಮೈಸೂರು ಸರ್ಕಾರದ ಸಾರಿಗೆ'(ಎಂಜಿಆರ್‌ಟಿಡಿ) ಕಾರ್ಯಾರಂಭವಾಗಿತ್ತು. ಬಳಿಕ 1–1–1961ರಲ್ಲಿ ಸಿಐಆರ್‌ಟಿಸಿ ಆಕ್ಟ್ 1951ರಂತೆ ಎಂಜಿಆರ್‌ಟಿಡಿ ಸಂಸ್ಥೆಯನ್ನು ಎಂಎಸ್‌ಆರ್‌ಟಿಸಿ ಎಂದು ನಾಮಕರಣ ಮಾಡಲಾಗಿತ್ತು. ಬಳಿಕ 1973ರಲ್ಲಿ ಎಂಎಸ್‌ಆರ್‌ಟಿಸಿಯನ್ನು ಕೆಎಸ್‌ಆರ್‌ಟಿಸಿಯಾಗಿ ಹೆಸರು ಮಾರ್ಪಡಿಸಲಾಗಿತು. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಆ.1ರಂದು ಕೆಎಸ್‌ಆರ್‌ಟಿಸಿ ಸಂಸ್ಥಾಪನಾ ದಿನವನ್ನಾಗಿ ಆಚರಿಸಲಾಗುತ್ತದೆ. ಈಗ 63ನೇ ವರ್ಷಾಚರಣೆ ಸಂಭ್ರಮ.

ಕೆಎಸ್‌ಆರ್‌ಟಿಸಿ ಸಂಸ್ಥಾಪನಾ ದಿನದ ಅಂಗವಾಗಿ ಸಂಸ್ಥೆಯ ಅಧಿಕಾರಿಗಳು, ನೌಕರರು ಆ.1ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಈ ಸಂಭ್ರಮವನ್ನು ಆಚರಿಸಲಿದ್ದಾರೆ. ಅದಕ್ಕಾಗಿ ಬಸ್ಸೊಂದನ್ನು ಅಲಂಕಾರ ಮಾಡಿ, ಅದರ ಮುಂದೆ ಕೇಕ್ ಕತ್ತರಿಸಿ ಸಿಬ್ಬಂದಿಗಳಿಗೆ ಶುಭ ಕೋರಲಾಗುತ್ತದೆ. ಅಲ್ಲದೆ, ಪ್ರಯಾಣಿಕರಿಗೆ ಕೆಎಸ್‌ಆರ್‌ಟಿಸಿ ಸಂಸ್ಥೆ ನಡೆದು ಬಂದ ಹಾದಿಯ ಬಗ್ಗೆ ಮಾಹಿತಿ ನೀಡಲಾಗುತ್ತದೆ.

ಪ್ರಯಾಣಿಕರಿಗೆ ನೀಡುವ ಭಿತ್ತಿಪತ್ರದಲ್ಲಿ ಕೆಎಸ್‌ಆರ್‌ಟಿಸಿ ಸಂಸ್ಥೆಯ ಇತಿಹಾಸದ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ. 1997ರ ಆ.15ರಂದು ಕೆಎಸ್‌ಆರ್‌ಟಿಸಿಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಅದೇ ವರ್ಷ ನ.1ರಂದು ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಸ್ಥಾಪನೆ, 2000ರ ಅ.1ರಂದು ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಉಗಮವಾಯಿತು. ಪ್ರಸ್ತುತ ನಾಲ್ಕು ನಿಗಮಗಳಾಗಿ ಕೆಎಸ್‌ಆರ್‌ಟಿಸಿ ಕಾರ್ಯನಿರ್ವಹಿಸುತ್ತಿದೆ. ಭಾರತದಲ್ಲೇ ಅತ್ಯುತ್ತಮವಾದ ಸಾರಿಗೆ ಸಂಸ್ಥೆ ಎಂಬ ಹೆಗ್ಗಳಿಕೆಗೆ ಕೆಎಸ್‌ಆರ್‌ಟಿಸಿ ಪಾತ್ರವಾಗಿದೆ.

ಚಾಮರಾಜ ನಗರದಿಂದ ಲೋಕಸಭೆಗೆ ಖರ್ಗೆ ಸ್ಪರ್ಧೆಗೆ ಒತ್ತಾಯ

ಮೈಸೂರು, ಜು.31– ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ಪರ್ಧಿಸಬೇಕೆಂದು ಮೈಸೂರು ಮಾಜಿ ಕಾರ್ಪೊರೇಟರ್ ಆರ್. ಸೋಮಸುಂದರ್ ಒತ್ತಾಯಿಸಿದ್ದಾರೆ.



ಖರ್ಗೆ ಅವರು ಈಗ ರಾಜ್ಯಸಭಾ ಸದಸ್ಯರಾಗಿದ್ದಾರೆ. ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಸಂಘಟಿಸುವ ಮಹತ್ತರ ಜವಾಬ್ದಾರಿ ಅವರ ಮೇಲಿದೆ. ಅಲ್ಲದೇ ಪಕ್ಷದ ಪರವಾಗಿ ಕೇಂದ್ರದಲ್ಲಿ ದನಿ ಎತ್ತಬೇಕಾಗಿದ್ದು, ಚಾಮರಾಜನಗರ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದರೆ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಚುನಾವಣಾ ಪ್ರಚಾರ ನಡೆಸಿ ಗೆಲುವಿಗೆ ಶ್ರಮಿಸಲಿದ್ದಾರೆ. ಆದ್ದರಿಂದ ಖರ್ಗೆ ಅವರು ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧಿಸುವ ಮೂಲಕ ಇಡೀ ದೇಶದಲ್ಲಿ ಪಕ್ಷ ಸಂಘಟಿಸುವ ಕೆಲಸ ಮಾಡಲಿ ಎಂದು ಮನವಿ ಮಾಡಿದ್ದಾರೆ.

ಗಾಂಜಾ ಸಾಗಿಸುತ್ತಿದ್ದ ಮಾಜಿ ರಣಜಿ ಆಟಗಾರನ ಬಂಧನ

ಶ್ರೀಕಾಕುಳಂ: 23 ಕೆಜಿ ಗಾಂಜಾ ಸಾಗಿಸುತ್ತಿದ್ದ ಶ್ರೀಕಾಕುಳಂ ಜಿಲ್ಲೆಯ ಮಾಜಿ ರಣಜಿ ಕ್ರಿಕೆಟಿಗನನ್ನು ಆಂಧ್ರಪ್ರದೇಶ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ. ಮಾಜಿ ರಣಜಿ ಕ್ರಿಕೆಟಿಗನನ್ನು ಬುಡುಮೂರು ನಾಗರಾಜು ಎಂದು ಗುರುತಿಸಲಾಗಿದೆ ಎಂದು ಇನ್ಸ್‌ಪೆಕ್ಟರ್ ಲಕ್ಷ್ಮಣರಾವ್ ಹೇಳಿದ್ದಾರೆ.

ಖಚಿತ ಮಾಹಿತಿ ಮೇರೆಗೆ ರಾಷ್ಟ್ರೀಯ ಹೆದ್ದಾರಿಯ ವಿಜಯಾದಿತ್ಯ ಪಾರ್ಕ್‌ನಲ್ಲಿ ಸಿಬ್ಬಂದಿಯೊಂದಿಗೆ ಗಸ್ತು ತಿರುಗುತ್ತಿದ್ದಾಗ ಎರಡು ಚೀಲಗಳಲ್ಲಿ ಒಂಬತ್ತು ಪ್ಯಾಕೆಟ್‌ಗಳಲ್ಲಿ 23.475 ಕೆಜಿ ಗಾಂಜಾ ಹೊಂದಿದ್ದ ಆರೋಪಿಯನ್ನು ಬಂಧಿಸಲಾಯಿತು ಎಂದು ಇನ್ಸ್‌ಪೆಕ್ಟರ್ ರಾವ್ ತಿಳಿಸಿದ್ದಾರೆ.

ಆ.5ರಂದು ಕೊಲ್ಕತ್ತಾದಲ್ಲಿ ಶಿವದಾಸ್ ಘೋಷ್ ಜನ್ಮ ಶತಮಾನೋತ್ಸವ ಸಮಾರೋಪ

ಮೈಸೂರು,ಜು.31(ಪಿಎಂ)– ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ, ಮಾರ್ಕ್ಸ್‌ವಾದಿ ಚಿಂತಕರೂ ಆದ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ ಕಾಮ್ರೇಡ್ ಶಿವದಾಸ್ ಘೋಷ್ ಜನ್ಮ ಶತಮಾನೋತ್ಸವದ ಸಮಾರೋಪ ಸಮಾರಂಭ ಆ.5ರಂದು ಕೊಲ್ಕತ್ತಾದ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ರಾಷ್ಟ್ರಮಟ್ಟದ ಬೃಹತ್ ಕಾರ್ಯಕ್ರಮವಾಗಿ ನಡೆಯಲಿದೆ ಎಂದು ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಬಿ.ರವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2022ರ ಆ.5ರಂದು ಶಿವದಾಸ್ ಘೋಷ್ ಅವರ ಜನ್ಮ ಶತಮಾನೋತ್ಸವ ಆಚರಣೆಗೆ



ಚಾಲನೆ ನೀಡಲಾಯಿತು. ಅಂದಿನಿಂದ ದೇಶದಾದ್ಯಂತ ಜನ್ಮಶತಮಾನೋತ್ಸವ ಆಚರಿಸಲಾಗಿದೆ. ಇದೀಗ ಕೊಲ್ಕತ್ತಾದಲ್ಲಿ ನಡೆಯುವ ಸಮಾರೋಪ ಸಮಾರಂಭಕ್ಕೆ ದೇಶದ 25ಕ್ಕೂ ಹೆಚ್ಚು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಮೈಸೂರು ಜಿಲ್ಲೆಯ 250 ಮಂದಿ ಸೇರಿದಂತೆ ಕರ್ನಾಟಕದಿಂದ ಸುಮಾರು 3 ಸಾವಿರ ಮಂದಿ ಕೊಲ್ಕತ್ತಾಗೆ ಪ್ರಯಾಣ ಬೆಳೆಸಲಿದ್ದೇವೆ. ಈ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಎಸ್‌ಯುಸಿಐ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರವಾಶ್ ಘೋಷ್ ಮುಖ್ಯ ಭಾಷಣ ಮಾಡಲಿದ್ದಾರೆ. ಕೇಂದ್ರ ಪಾಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಸತ್ಯವಾನ್, ಕಾಮ್ರೇಡ್ ಕೆ.ರಾಧಾಕೃಷ್ಣ ಅವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

1923ರ ಆ.5ರಂದು ಇಂದಿನ ಬಾಂಗ್ಲಾ ದೇಶದಲ್ಲಿ ಜನಿಸಿದ ಶಿವದಾಸ್ ಘೋಷ್ ಅವರು ತಮ್ಮ ಹದಿಹರೆಯದಲ್ಲೇ ಕ್ರಾಂತಿಕಾರಿ ಸಂಘಟನೆ ಅನುಶೀಲನ್ ಸಮಿತಿಗೆ ಸೇರಿ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ತೊಡಗಿದರು. 1942ರ ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ ಢಾಕಾದಿಂದ ಕೊಲ್ಕತ್ತಾಗೆ ತಮ್ಮ ಕಾರ್ಯಕ್ಷೇತ್ರ ಬದಲಾಯಿಸಿದರು. 1948ರಲ್ಲಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದರು ಎಂದರು.

ಪಕ್ಷದ ಮುಖಂಡರಾದ ಎಂ.ಉಮಾದೇವಿ, ಚಂದ್ರಶೇಖರ ಮೇಟಿ, ವಿ.ಯಶೋಧರ, ಪಿ.ಎಸ್.ಸಂಧ್ಯಾ, ಜಿ.ಎಸ್.ಸೀಮಾ ಗೋಷ್ಠಿಯಲ್ಲಿದ್ದರು.

ಅಕ್ರಮ ಕಟ್ಟಡ ನಿರ್ಮಾಣದ ವಿಚಾರದಲ್ಲಿ ಮೈಸೂರು ನಗರ ಪಾಲಿಕೆ ದಿವ್ಯಮೌನ

ಈಗಲಾದರೂ ಪಾಲಿಕೆ ಎಚ್ಚೆತ್ತು ಕ್ರಮಕ್ಕೆ ಮುಂದಾಗದಿದ್ದರೆ ಹೈಕೋರ್ಟ್ ಮೊರೆ ಹೋಗುವುದಾಗಿ ಹೋರಾಟಗಾರರ ಎಚ್ಚರಿಕೆ

ಮೈಸೂರು,ಜು.31(ಪಿಎಂ)– ನಗರದಲ್ಲಿ ಅನಧಿಕೃತ ಕಟ್ಟಡ ಹಾಗೂ ಅನುಮೋದಿತ ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಿಸುವವರ ವಿರುದ್ಧ ಪಾಲಿಕೆ ಅಧಿಕಾರಿಗಳು ಕ್ರಮ ಜರುಗಿಸುತ್ತಿಲ್ಲ ಎಂದು ಹೋರಾಟಗಾರರಾದ ಕೆ.ವಿ.ಭಾನುಪ್ರಶಾಂತ್, ಸ್ನೇಹಮಯಿ ಕೃಷ್ಣ, ಭಾನುಮೋಹನ್ ಆರೋಪಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆ.ವಿ.ಭಾನುಪ್ರಶಾಂತ್, ಕೆಲವರು ನಿಯಮಗಳನ್ನು ಉಲ್ಲಂಘಿಸಿ ತಮಗೆ ಬೇಕಾದಂತೆ ಕಟ್ಟಡ ನಿರ್ಮಿಸುವ ಮೂಲಕ ನೆರೆಹೊರೆ ಮನೆಯವರಿಗೆ ತೊಂದರೆ ನೀಡುತ್ತಿದ್ದಾರೆ. ಇಂತಹ ಬಹುತೇಕ ಪ್ರಕರಣಗಳಲ್ಲಿ ಪಾಲಿಕೆ ಅಧಿಕಾರಿಗಳು ಲಂಚ ಪಡೆದು, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ತೊಂದರೆಗೆ ಒಳಗಾದ ನೆರೆಮನೆಯವರು ನ್ಯಾಯಕ್ಕಾಗಿ ಕಚೇರಿ ಮತ್ತು ಕೋರ್ಟ್‌ಗೆ ಅಲೆಯುವಂತಾಗಿದೆ. ವಾಣಿಜ್ಯ ಕಟ್ಟಡ ಮಾಲೀಕರು ವಾಹನ ನಿಲುಗಡೆಗೆ ಮೀಸಲಿಡಬೇಕಾದ ನೆಲಮಾಳಿಗೆಯಲ್ಲಿಯೂ ವಾಣಿಜ್ಯ ಚಟುವಟಿಕೆಗೆ ಅವಕಾಶ ನೀಡಿ ಬಾಡಿಗೆ ಪಡೆಯುತ್ತಿದ್ದಾರೆ. ಹಲವು ಪಾರ್ಕ್‌ಗಳಲ್ಲಿ ನಿಯಮಬಾಹಿರವಾಗಿ ಕಾಂಕ್ರಿಟ್ ಕಟ್ಟಡ ನಿರ್ಮಿಸಲಾಗಿದೆ ನಗರದಲ್ಲಿ ಅಕ್ರಮ ಪಿಜಿಗಳಿಂದ ಸ್ಥಳೀಯರು ಕಿರಿಕಿರಿ ಅನುಭವಿಸುತ್ತಿದ್ದಾರೆ. ಆದರೂ ಪಾಲಿಕೆಯಿಂದ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಪಾದಿಸಿದರು.

2021ರ ಸೆ.3ರಲ್ಲಿ ಅಕ್ರಮ ಕಟ್ಟಡ ನಿರ್ಮಾಣದ ವಿರುದ್ಧ ಕ್ರಮ ಕೈಗೊಳ್ಳುವ ಸಂಬಂಧ ಪಾಲಿಕೆ ಆಯುಕ್ತರು ಆದೇಶ ಹೊರಡಿಸಿದ್ದರೂ ಪಾಲಿಕೆ ಅಧಿಕಾರಿಗಳು ಅದರಂತೆ ಕ್ರಮ ವಹಿಸುತ್ತಿಲ್ಲ. ಸರಸ್ವತಿಪುರಂನಲ್ಲಿ ನನ್ನ ಮನೆ ಇದ್ದು, ಇಲ್ಲಿ ನೆರೆಮನೆಯವರು ನಿಯಮಗಳನ್ನು ಉಲ್ಲಂಘಿಸಿ ತಮ್ಮ ಮನೆಯ ಕಟ್ಟಡ ನಿರ್ಮಾಣ ಮಾಡಿದ್ದಾರೆ. 2017ರಿಂದ ಈ ಸಂಬಂಧ ಕೋರ್ಟ್‌ನಲ್ಲಿ ಪ್ರಕರಣ ನಡೆಯುತ್ತಿದೆ ಎಂದರು.

ಪಾಲಿಕೆ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುವುದರಿಂದ ಪ್ರಕರಣಗಳು ಕೋರ್ಟ್ ಮೆಟ್ಟಿಲು ಹತ್ತುವಂತೆ ಆಗುತ್ತಿದೆ. ಕೋರ್ಟ್ ವಿಚಾರಣೆಗೆ ಪಾಲಿಕೆಯವರು ಗೈರಾಗುವುದೇ ಹೆಚ್ಚು. ಅ.10ರಂದು ಉಪ ಲೋಕಾಯುಕ್ತರಿಗೆ ನಾನು ದೂರು ನೀಡಿದ ಹಿನ್ನೆಲೆಯಲ್ಲಿ ನಮ್ಮ ನೆರೆಮನೆಯ ಶೇ.60ರಷ್ಟು ಕಟ್ಟಡ ತೆರವು ಮಾಡಿದ್ದಾರೆ. ಅಷ್ಟರಲ್ಲಿ ಹೈಕೋರ್ಟ್‌ನಲ್ಲಿ ಸದರಿ ಕಟ್ಟಡದ ಮಾಲೀಕರು ತಡೆ ತಂದಿದ್ದಾರೆ. ನಮ್ಮ ಮನೆಯ ಹಿಂಭಾಗದ ರಸ್ತೆಯಲ್ಲಿ ಮರ ಕಡಿಯುತ್ತಿದ್ದ ಸಂಬಂಧ ಅನುಮತಿ ಇದೆಯೇ ಎಂದು ಪ್ರಶ್ನೆ ಮಾಡಿದ್ದಕ್ಕೆ ನಿನ್ನೆ ಮನೆ ಬಳಿ ಬಂದು ಗಲಾಟೆ ಮಾಡಿದರು. ನನ್ನ ವಿರುದ್ಧವೇ ಹಣಕ್ಕೆ ಪೀಡಿಸುತ್ತಿರುವ ಆರೋಪ ಮಾಡಿದರು ಎಂದು ಬೇಸರ ವ್ಯಕ್ತಪಡಿಸಿದರು.

ಸ್ನೇಹಮಯಿ ಕೃಷ್ಣ ಮಾತನಾಡಿ, ಅಕ್ರಮದಲ್ಲಿ ಶಾಮೀಲಾದ ಅಧಿಕಾರಿಗಳ ವಿರುದ್ಧ ಮೊಕದ್ದಮೆ ದಾಖಲಿಸುವಂತೆ ಪಾಲಿಕೆ ಆಯುಕ್ತರು ಹಾಗೂ ಮೇಯರ್ ಅವರಿಗೆ ಜು.28ರಂದು ಮನವಿ ಸಲ್ಲಿಸಿದ್ದೇವೆ. ಅದರಂತೆ ಎರಡು ತಿಂಗಳ ಒಳಗೆ ಕ್ರಮ ವಹಿಸದಿದ್ದರೆ, ರಾಜ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಲಿದ್ದೇವೆ ಎಂದು ತಿಳಿಸಿದರು. ತಮ್ಮ ನೆರೆಮನೆಯವರು ಇದೇ ರೀತಿ ಕಟ್ಟಡ ನಿರ್ಮಾಣದಲ್ಲಿ ನಿಯಮ ಉಲ್ಲಂಘಿಸಿದ್ದರಿಂದ ತಾವೂ ತೊಂದರೆ ಅನುಭವಿಸುತ್ತಿರುವುದಾಗಿ ಸರಸ್ವತಿಪುರಂ ನಿವಾಸಿಗಳಾದ ಕೆ.ಹೇಮಚಂದ್ರ, ಸುಭದ್ರಬಾಯಿ, ವಿದ್ಯಾರಣ್ಯಪುರಂ ನಿವಾಸಿ ಎಸ್.ಆರ್.ಮುರಳಿ ಆರೋಪಿಸಿದರು.

> ಅಕ್ರಮ ಕಟ್ಟಡದ ವಿರುದ್ಧ ಹೋರಾಟ ಮಾಡಿದ ಕಾರಣಕ್ಕೆ ಭಾರತ ಸರ್ಕಾರದ ಗುಪ್ತಚರ ಇಲಾಖೆಯ ನಿವೃತ್ತ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆಯೇ ನಡೆದು ಹೋಯಿತು. ಇಷ್ಟಾದರೂ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ಈ ಅಧಿಕಾರಿಗಳು ಲಂಚ ಪಡೆದು ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಇವರು ಸೂಕ್ತ ಕ್ರಮ ವಹಿಸದ ಹಿನ್ನೆಲೆಯಲ್ಲಿ ನಮ್ಮಂತಹವರು ಹೋರಾಟ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ. ಇದರಿಂದ ನಾವೂ ಬೆದರಿಕೆಗೆ ಒಳಗಾಗುವಂತೆ ಆಗಿದ್ದು, ಎಚ್ಚರ ತಪ್ಪಿದರೆ ನಾವೂ ಹತ್ಯೆಯಾಗಬೇಕಾಗುತ್ತದೆ.
>
> -ಸ್ನೇಹಮಯಿ ಕೃಷ್ಣ

ಆ.15ರಂದು ಗೋಕುಲಂ ಕೊಡವ ಸಂಘದ ವಿಶೇಷ ವಾರ್ಷಿಕ ಮಹಾಸಭೆ

ಮೈಸೂರು, ಜು. 31– ಗೋಕುಲಂ ಕೊಡವ ಸಂಘದ ವಿಶೇಷ ವಾರ್ಷಿಕ ಮಹಾಸಭೆಯನ್ನು ಆ. 15 ರಂದು ಬೆಳಗ್ಗೆ 9.30 ಗಂಟೆಗೆ ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮಾಜ (ನೆಲಮಹಡಿ)ದಲ್ಲಿ ಏರ್ಪಡಿಸಲಾಗಿದೆ.

ಸಂಘದ 17ನೇ ವಾರ್ಷಿಕ ಮಹಾಸಭೆಯು ಅದೇ ದಿನ ಬೆಳಗ್ಗೆ 10.30ಕ್ಕೆ ನಡೆಯಲಿದೆ.

ಔತಣಕೂಟ: ವಾರ್ಷಿಕ ಮಹಾಸಭೆಯ ನಂತರ ಬೆಳಗ್ಗೆ 11.30ಕ್ಕೆ ಔತಣಕೂಟ ಏರ್ಪಡಿಸಲಾಗಿದೆ. ಇದೇ ವೇಳೆ 2022–23ನೇ ಸಾಲಿನಲ್ಲಿ 7ನೇ ತರಗತಿ, 10ನೇ ತರಗತಿ ಮತ್ತು ಪಿಯುಸಿ, ಪದವಿ, ಸ್ನಾತಕೋತ್ತರ ಮತ್ತು ತಾಂತ್ರಿಕ ವಿಷಯಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಗುವುದು. ಅರ್ಹರು ತಮ್ಮ ಅಂಕಪಟ್ಟಿ ಜೊತೆಯಲ್ಲಿ ಅಗತ್ಯ ದಾಖಲೆಗಳನ್ನು ಆ.12ರಂದು ಸಂಜೆ 5 ಗಂಟೆಯೊಳಗೆ ಸಂಘದ ಕಾರ್ಯದರ್ಶಿಯವರಿಗೆ ತಲುಪಿಸಲು ಕೋರಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಅಮ್ಮಟಂಡ ಕೆ.ಚಿನ್ನಪ್ಪ ವಹಿಸುವರು ಎಂದು ಸಂಘದ ಕಾರ್ಯದರ್ಶಿ ಚೇಂಡಂಡ ನವೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ರಕ್ಷಿತಾ ಪ್ರೇಮ್



ಚಾಮುಂಡಿ ಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ನಟಿ, ನಿರ್ಮಾಪಕಿ ರಕ್ಷಿತಾ ಪ್ರೇಮ್ ಅವರು ವಿಶೇಷ ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ರಿಷಿ ವಿಶ್ವಕರ್ಮ, ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್, ಅಮರ್ ಇನ್ನಿತರರು ಹಾಜರಿದ್ದರು.

ಆ.4ರಿಂದ ನೂಪುರೋತ್ಸವ

ಮೈಸೂರು, ಜು. 31–ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆ. 4ರಿಂದ 6ರವರೆಗೆ ಆದಿಚುಂಚನಗಿರಿ ರಸ್ತೆ ಕುವೆಂಪುನಗರದ ಗಾನಭಾರತಿಯ ರಮಾಗೋವಿಂದ್ ಕಲಾವೇದಿಕೆಯಲ್ಲಿ ನೂಪುರೋತ್ಸವ ಏರ್ಪಡಿಸಲಾಗಿದೆ.

ಆ. 4 ರಂದು ಸಂಜೆ 6.30ಕ್ಕೆ ಬೆಂಗಳೂರಿನ ಕಥಕ್ ಕಲಾವಿದರಾದ ಚೇತನಾ ಮತ್ತು ಹರಿ ದಂಪತಿಯ ಶಿಷ್ಯೆ ಶ್ರೀಮತಿ ಶಿಖಾಮಾಥುರ್ ಅವರಿಂದ ಕಥಕ್ ಪ್ರದರ್ಶನವಿದೆ. ಸಂಜೆ 7.30ಕ್ಕೆ ಮೈಸೂರಿನ ನಾದ ವಿದ್ಯಾಲಯ ಅಕಾಡೆಮಿಯ ನಿರ್ದೇಶಕಿ ವಿದುಷಿ ಮಿತ್ರಾ ನವೀನ್ ಶಿಷ್ಯರಿಂದ ಭರತನಾಟ್ಯ ಪ್ರದರ್ಶನವಿದೆ.

ಆ. 5 ರಂದು ಸಂಜೆ 6.30ಕ್ಕೆ ನಾಟ್ಯಾಚಾರ್ಯ ಕೆ.ರಾಮಮೂರ್ತಿರಾವ್ ಅವರ ಪುತ್ರ ವಿದ್ವಾನ್ ಕೆ.ಆರ್. ವಿಶ್ವದೀಪ್ ಅವರಿಂದ ಭರತನಾಟ್ಯ, ನಂತರ ಅಂತಾರಾಷ್ಟ್ರೀಯ ಕಲಾವಿದ ವಿದ್ವಾನ್ ಶ್ರೀಧರ್‌ಜೈನ್ ಅವರ ಶಿಷ್ಯರಿಂದ ನೃತ್ಯವೈಭವ ನಡೆಯಲಿದೆ.

ಆ.6ರಂದು ಸಂಜೆ 6ಕ್ಕೆ ರಾಣಿಬೆನ್ನೂರಿನ ಶ್ರೀ ಮಾರ್ತಾಂಡ ನೃತ್ಯ ಶಾಲೆಯ ನಿರ್ದೇಶಕಿ ವಿದುಷಿ ಮಮತಾ ನಾಡಿಗೇರ್ ಅವರ ಶಿಷ್ಯರಿಂದ ಭರತನಾಟ್ಯ, ನಂತರ ಮೈಸೂರಿನ ಲಾಸ್ಯ ರಂಜನಾ ಸಂಸ್ಥೆ ನಿರ್ದೇಶಕಿ ವಿದುಷಿ ಜ್ಯೋತಿ ಹೆಗ್ಡೆ ಅವರ ಶಿಷ್ಯರಿಂದ ಭರತನಾಟ್ಯ ಪ್ರದರ್ಶವಿದೆ ಎಂದು ಪ್ರೊ.ಕೆ. ರಾಮಮೂರ್ತಿರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಮಹಾನಗರ ಪಾಲಿಕೆ ನೂತನ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರನ್ನು ನಗರಪಾಲಿಕೆ ಜೆಡಿಎಸ್ ಸದಸ್ಯ ಕೆ.ವಿ.ಶ್ರೀಧರ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮತ್ತಿತರರು ಅಭಿನಂದಿಸಿದರು.

ಸ್ವಾತಂತ್ರ್ಯೋತ್ಸವ ಚುಟುಕು ಕವಿಗೋಷ್ಠಿಗೆ ಚುಟುಕುಗಳ ಆಹ್ವಾನ

ಮೈಸೂರು, ಜು. 31–ಸ್ವಾತಂತ್ರ್ಯೋತ್ಸವದ ಅಂಗವಾಗಿ ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕದ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಚುಟುಕು ಕವಿಗೋಷ್ಠಿಯನ್ನು ಆಯೋಜಿಸಲಾಗಿದೆ. ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವವರು ಸ್ವರಚಿತ 4 ಸಾಲಿನ 3 ಚುಟುಕುಗಳನ್ನು ತಮ್ಮ ಪರಿಚಯದೊಂದಿಗೆ ಆ.10ರೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 98863 44524 ಸಂಪರ್ಕಿಸಬಹುದು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ 93ನೇ ವರ್ಷದ ಕರಗ ಮಹೋತ್ಸವದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರುಮಾರಿಯಮ್ಮ ದೇವಸ್ಥಾನದ ಅಧ್ಯಕ್ಷ ರಘು, ಮೈಸೂರು ಮಹಾನಗರ ಪಾಲಿಕೆಯ ಸದಸ್ಯರಾದ ಮಾ.ವಿ. ರಾಮಪ್ರಸಾದ್, ಗೀತಾ ಯೋಗಾನಂದ, ಮುಖಂಡರಾದ ಸಂದೀಪ್, ಯೋಗಾನಂದ, ಧರ್ಮೇಂದ್ರ ಕಿಶೋರ್, ರವಿತೇಜ ಹಾಗೂ ಸಹಸ್ರರು ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಂಥನ ಮೈಸೂರಿನಿಂದ ಸಂವಾದ ಕಾರ್ಯಕ್ರಮ

ಮೈಸೂರು, ಜು. 31– ಮಂಥನ ಮೈಸೂರು ವತಿಯಿಂದ ಜನಸಂಖ್ಯೆ ಅಸಮತೋಲನ ಹಾಗೂ ರಾಷ್ಟ್ರೀಯ ಸುರಕ್ಷತೆ ಮೇಲೆ ಅದರ ಪರಿಣಾಮ ಕುರಿತು ಆ. 5ರಂದು ಸಂಜೆ 5 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಎಸ್.ಪಿ. ಭಟ್ ಹಾಲ್‌ನಲ್ಲಿ ಕೇರಳದ ನಿವೃತ್ತ ಐಜಿಪಿ ಎಂ.ಎನ್. ಕೃಷ್ಣಮೂರ್ತಿ ಹಾಗೂ ಕರ್ನಾಟಕ ಸರ್ಕಾರದ ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ. ಮದನ್‌ಗೋಪಾಲ್ ಅವರಿಂದ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಆಸಕ್ತರು ತಮ್ಮ ಹೆಸರನ್ನು https://forms.gle/4ETky4UE5Ueqhtq87ರಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 9864 93998, 98804 35175 ಸಂಪರ್ಕಿಸಿ.



ಸಿಜಿಕೆ ಪ್ರಶಸ್ತಿ ಪುರಸ್ಕೃತರಾದ ರಂಗಕರ್ಮಿ ಮೈಮ್ ರಮೇಶ್ ಅವರನ್ನು ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಸನ್ಮಾನಿಸಿದರು. ಡಿ.ತಿಪ್ಪಣ್ಣ, ಯು.ಎಸ್.ರಾಮಣ್ಣ, ಅಶ್ವಥ್ ಕದಂಬ, ಕಾಳಚನ್ನೇಗೌಡ, ಹರಿದತ್ತ, ಗಣೇಶ ಅಮೀನಗಡ, ಶಿವರಾಜ್ ಉಪಸ್ಥಿತರಿದ್ದರು.

ಸಕ್ಕರೆ ಕಾಯಿಲೆ ಬಗ್ಗೆ ಅರಿವು ಅವಶ್ಯಕ

ಶ್ರೀ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿಗಳ ಸಲಹೆ



ಮೈಸೂರು, ಜು. 31– ಇಂದು ಸಕ್ಕರೆ ಕಾಯಿಲೆ ಪ್ರಪಂಚದಾದ್ಯಂತ ಶರವೇಗದಲ್ಲಿ ಹೆಚ್ಚಾಗುತ್ತಿದೆ. ಅದರ ಬಗ್ಗೆ ಅರಿವು ಮೂಡಿಸಲು ಸುಯೋಗ್ ಆಸ್ಪತ್ರೆಯಲ್ಲಿ ಸಕ್ಕರೆಕಾಯಿಲೆ ರೋಗಿಗಳು ಸದಸ್ಯರಾಗಿರುವ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಸ್ಥಾಪಿಸಿರುವುದು ಸ್ತುತ್ಯಾರ್ಹ ಎಂದು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಶ್ಲಾಘಿಸಿದರು.

ಅವರು ಸುಯೋಗ್ ಆಸ್ಪತ್ರೆಯಲ್ಲಿ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಹಾಗೂ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ನಡೆದ ಸಕ್ಕರೆ ಕಾಯಿಲೆ ಬಗ್ಗೆ ಅರಿವಿನ ಕಾರ್ಯಕ್ರಮದಲ್ಲಿ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದರು.

ಹೆಚ್ಚು ಹೆಚ್ಚು ಸಕ್ಕರೆ ಕಾಯಿಲೆ ರೋಗಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಕರೆನೀಡಿದ ಶ್ರೀಗಳು ಈ ವಿನೂತನ ಯೋಜನೆಯನ್ನು ಪ್ರಾರಂಭಿಸಿರುವ ಡಾ.ಎಸ್.ಪಿ.ಯೋಗಣ್ಣನವರನ್ನು ಹಾರೈಸಿ ಸಮಾಜಮುಖಿಯಾದ ಈ ಕಾರ್ಯಕ್ರಮ ಸಮಾಜಕ್ಕೆ ಮಾದರಿ ಎಂದು ಅಭಿಪ್ರಾಯಿಸಿದರು.

ಸಕ್ಕರೆಕಾಯಿಲೆ ಔಷಧಿಗಳ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಕಳೆದ 5 ವರ್ಷಗಳಿಂದ ಸಕ್ಕರೆಕಾಯಿಲೆ ರೋಗಿಗಳ ಸಂಘದಿಂದ ಸಕ್ಕರೆಕಾಯಿಲೆಯವರಿಗೆ ಹಲವಾರು ಬಗೆಯ ಉಚಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದನ್ನು ಮುಕ್ತಕಂಠದಿಂದ ಪ್ರಶಂಸಿಸಿ, ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಔಷಧಗಳಲ್ಲದೆ ಜೀವನಶೈಲಿಯ ಪಾಲನೆ ಅತ್ಯವಶ್ಯಕವೆಂದರು. ದುರ್ಬಲರಿಗೆ ಉಚಿತವಾಗಿ ಔಷಧವನ್ನು ನೀಡುತ್ತಿರುವ ಆಸ್ಪತ್ರೆಯ ಸೇವೆಯನ್ನು ಶ್ಲಾಘಿಸಿದರು.

ಸಕ್ಕರೆಕಾಯಿಲೆ ತಜ್ಞ ಡಾ.ಮಹೇಶ್ ಸಕ್ಕರೆಕಾಯಿಲೆಯಲ್ಲಿ ಉಪಯೋಗಿಸಲ್ಪಡುವ ಮಾತ್ರೆಗಳ ಬಗ್ಗೆ ವಿವರ ನೀಡಿ, ಪ್ರತಿಯೊಂದು ಮಾತ್ರೆ ಬೀರುವ ಪರಿಣಾಮಗಳು, ಅಡ್ಡ ಪರಿಣಾಮಗಳು ಮತ್ತು ಉಪಯುಕ್ತತೆ ಬಗ್ಗೆ ಸವಿವರವಾದ ಮಾಹಿತಿ ನೀಡಿದರು. ಮಧುಮೇಹ ತಜ್ಞ ಡಾ. ಎಸ್.ಪಿ. ಯೋಗಣ್ಣ ಮಾತನಾಡಿ, ವಿವಿಧ ಬಗೆಯ ಇನ್ಸುಲಿನ್‌ಗಳ ಬಗ್ಗೆ ವಿವರ ನೀಡಿದರಲ್ಲದೆ ಯಾವ ಯಾವ ಸಂದರ್ಭಗಳಲ್ಲಿ ಇನ್ಸುಲಿನ್ ಅನಿವಾರ್ಯ ಎಂಬುದನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ವುಮೆನ್ ಎಂಟರ್‌ಪ್ರ್ಯೂನರ್ ಲೀಡರ್ ಪ್ರಶಸ್ತಿ ಪಡೆದ ಡಾ.ಸೀಮಾ ಯೋಗಣ್ಣ ಅವರನ್ನು ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು. ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಅಧ್ಯಕ್ಷರಾದ ಎಸ್.ಕೆ.ನಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಕ್ಲಬ್‌ನ ಕಾರ್ಯಾಧ್ಯಕ್ಷರಾದ ಹೆಚ್.ಎಸ್. ರಮೇಶ್ ಚಂದ್ರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಟ್ರಸ್ಟಿ ಸುಧಾ ಯೋಗಣ್ಣ, ನಿರ್ದೇಶಕರಾದ ಡಾ.ಸೀಮಾ ಯೋಗಣ್ಣ, ಕಾರ್ಯದರ್ಶಿ ಕೃಷ್ಣ ಹಾಗೂ ಮಹಿಳಾ ವಿಭಾಗದ ಉಪಾಧ್ಯಕ್ಷೆ ಗಾಯತ್ರಿ ನಾರಾಯಣ್ ಇತರರು ಉಪಸ್ಥಿತರಿದ್ದರು.

ಹೆಣ್ಣು ಮಕ್ಕಳ ವೀಡಿಯೊ ಮಾಡುವುದು ಹುಡುಗಾಟವೇ?

ರಾಜ್ಯ ಸರ್ಕಾರದ ವಿರುದ್ಧ ಹೇಮಾ ನಂದೀಶ್ ಆಕ್ರೋಶ



ಮೈಸೂರು, ಜು. 31–ಉಡುಪಿಯ ಕಾಲೇಜೊಂದರ ಶೌಚಾಲಯದಲ್ಲಿ ಹೆಣ್ಣು ಮಕ್ಕಳ ವೀಡಿಯೊ ತೆಗೆದಿರುವುದು, ಕೆ.ಜಿ ಹಳ್ಳಿ, ಡಿ.ಜೆ ಹಳ್ಳಿಯಲ್ಲಿ ಗಲಭೆ, ಠಾಣೆಗೆ ಬೆಂಕಿ ಇಟ್ಟ ಘಟನೆ ಕಾಂಗ್ರೆಸ್ ಸರ್ಕಾರಕ್ಕೆ ಸಣ್ಣ ವಿಚಾರ ಎಂದರೆ ಹೇಗೆ? ಬೆಂಗಳೂರಿನಲ್ಲಿ ಸಿಕ್ಕಿರುವ ಆತಂಕವಾದಿಗಳಿಗೆ ಜೈಲಿನಲ್ಲಿ ವಿಐಪಿ ಮರ್ಯಾದೆ ಕೊಡುತ್ತಾರೆ ಎಂದರೆ ಈ ಸರ್ಕಾರ ಜನರ ಪ್ರಾಣ–ಮಾನಕ್ಕೆ ಎಷ್ಟರ ಮಟ್ಟಿಗೆ ಕಾಳಜಿ ಹೊಂದಿದೆ ಎಂಬುದು ಮನವರಿಕೆ ಆಗುತ್ತಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಹೇಮಾನಂದೀಶ್ ಆಕ್ರೋಶ ವ್ಯಕ್ತಪಡಿಸಿದರು. ಮಾಧ್ಯಮ ಹೇಳಿಕೆ ನೀಡಿದ ಅವರು, ಹಿಂದೂ ಹೆಣ್ಣುಮಕ್ಕಳ ವೀಡಿಯೊ ಮಾಡುವವರು ಹಾಗೂ ದೇಶ ವಿರೋಧಿ ಚಟುವಟಿಕೆಗಳನ್ನು ನಡೆಸುವವರ ಪರ ನಿಲ್ಲುವ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದು ಟೀಕಿಸಿದರು. ಇಂಥ ಘಟನೆಗಳನ್ನು ಜನರು ಸಹಿಸುವುದಿಲ್ಲ. ಅದು ಹಿಂದೂ ಹೆಣ್ಣುಮಕ್ಕಳಾಗಲೀ, ಮುಸ್ಲಿಂ ಹೆಣ್ಣುಮಕ್ಕಳಾಗಲೀ ರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿ. ಗ್ಯಾರಂಟಿಗಳ ಮೇಲೆ ಅಧಿಕಾರಕ್ಕೆ ಬಂದ ಸರ್ಕಾರ ಈ ರೀತಿ ವರ್ತಿಸುತ್ತಿದ್ದು, ಜನರು ತಕ್ಕಪಾಠ ಕಲಿಸಲಿದ್ದಾರೆ' ಎಂದು ಎಚ್ಚರಿಕೆ ನೀಡಿದರು. ದೇಶಭಕ್ತರು, ಹಿಂದೂಪರ ಸಂಘಟನೆಗಳ ಮುಖಂಡರ ಮೇಲೆ ಪ್ರಕರಣಗಳನ್ನು ದಾಖಲಿಸಿ ಬೆದರಿಸುವ ಕೆಲಸ ವನ್ನು ಮಾಡಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರು ಪೊಲೀಸರಿಗೆ ಟಾರ್ಗೆಟ್ ಕೊಟ್ಟಂತೆ ಕಾಣುತ್ತಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದ ಎಲ್ಲಾ ಠಾಣೆಗಳಲ್ಲೂ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿವೆ. ಎಲ್ಲೇ ಅನ್ಯಾಯವಾದರೂ ಎದುರಿಸಿ ಹೋರಾಟ ಮಾಡುವುದು ನಮ್ಮ ಹಕ್ಕು. ಎಷ್ಟೇ ಕೇಸ್ ಹಾಕಿಸಿಕೊಂಡರೂ ದೇಶಕ್ಕೆ, ಜನರ ಹಿತಕ್ಕೆ ಧಕ್ಕೆ ಆಗುವುದನ್ನು ವಿರೋಧಿಸಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಹೇಳಿದರು.

ಆ.6ರಂದು ವಿಜ್ಞಾನಿಗಳೊಂದಿಗೆ ಸಂವಾದ

ಮೈಸೂರು, ಜು. 31– ಮೈಸೂರ್ ಸೈನ್ಸ್ ಫೌಂಡೇಷನ್‌ನ 11 ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆ. 6 ರಂದು ಬೆಳಗ್ಗೆ 9.30ಕ್ಕೆ ವಿಜಯ ವಿಠ್ಠಲ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನಿಗಳೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಮೂವರು ಖ್ಯಾತ ವಿಜ್ಞಾನಿಗಳು ಭಾಗವಹಿಸುತ್ತಿದ್ದಾರೆ. ಬೆಳಗಿನ ಅವಧಿಯಲ್ಲಿ ಇಸ್ರೋ ಹಿರಿಯ ಮತ್ತು ವಿಶ್ರಾಂತ ವಿಜ್ಞಾನಿ ಸಿ.ಡಿ.ಪ್ರಸಾದ್ ಚಂದ್ರಯಾನ–3 ಕುರಿತು ಮತ್ತು ಬೆಂಗಳೂರು ಫೊರೆನ್ಸಿಕ್ ಲ್ಯಾಬ್‌ನ ಡೆಪ್ಯುಟಿ ಡೈರೆಕ್ಟರ್ ಡಾ.ವಿನೋದ್ ಜೆ.ಲಕ್ಕಪ್ಪನ್ ಅವರು ಡಿ.ಎನ್.ಎ ಬೆರಳಚ್ಚು ತಂತ್ರಜ್ಞಾನ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮಧ್ಯಾಹ್ನದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆರ್.ಶಂಕರ್ ಅವರು ಭೂ ವಿಜ್ಞಾನ ನಮ್ಮ ದಿನನಿತ್ಯ ಜೀವನದಲ್ಲಿ ಎಷ್ಟು ಮುಖ್ಯ ಎಂಬ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ. ಪ್ರತಿ ಉಪನ್ಯಾಸದ ನಂತರ 30 ನಿಮಿಷ ಸಂವಾದಕ್ಕೆ ಅವಕಾಶವಿರುತ್ತದೆ. ಸಂವಾದದಲ್ಲಿ ವಿದ್ಯಾರ್ಥಿಗಳು (ಪ್ರೌಢ, ಪದವಿಪೂರ್ವ, ಪದವಿ), ಶಿಕ್ಷಕರು ಮತ್ತು ಆಸಕ್ತರು ಭಾಗವಹಿಸಬಹುದು. ಭಾಗವಹಿಸುವವರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳುವುದು ಕಡ್ಡಾಯ. 300 ಜನರಿಗೆ ಮಾತ್ರ ಅವಕಾಶವಿದ್ದು, ಹೆಸರು ನೋಂದಾಯಿಸಿ ಕೊಂಡವರಿಗೆ ಮಧ್ಯಾಹ್ನದ ಉಪಾಹಾರ ಮತ್ತು ಅಭಿನಂದನಾ ಪತ್ರ ನೀಡಲಾಗುವುದು. ಹೆಸರು ನೋಂದಾಯಿಸಲು ಗೂಗಲ್ ಫಾರಂ ಭರ್ತಿ ಮಾಡಿ https://forms.gle/bmT4KQHTsMp3mugW9. ಹೆಚ್ಚಿನ ಮಾಹಿತಿಗೆ ಜಿ.ಬಿ.ಸಂತೋಷ್ ಕುಮಾರ್ ಮೊ: 8105503863 ಎಚ್.ಎಸ್.ಮಂಜುಳ ಮೊ: 9740797871 ಸಂಪರ್ಕಿಸಬಹುದು.

ಸಮಾಜದ ಉದ್ಧಾರಕ್ಕಾಗಿ ರಚಿತವಾದ ವಿಶ್ವದ ಏಕೈಕ ಸಾಹಿತ್ಯ ಪ್ರಕಾರ ವಚನ ಸಾಹಿತ್ಯ



ಮೈಸೂರು, ಜು. 31– ಸಮಾಜದ ಉದ್ಧಾರಕ್ಕಾಗಿ ರಚಿತವಾದ ವಿಶ್ವದ ಏಕೈಕ ಸಾಹಿತ್ಯ ಪ್ರಕಾರವೆಂದರೆ ವಚನ ಸಾಹಿತ್ಯ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಬಿ.ಇ.ಎಂ.ಎಲ್ ಬಸವ ಸಮಿತಿ ಶ್ರೀ ಹೊಸಮಠದ ನಟರಾಜ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಮತ್ತು ಸಮಿತಿಯ 32ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಬಸವಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ವಚನಗಳು ಯಾವುದೇ ಪ್ರಚಾರ, ಪ್ರಶಸ್ತಿ ಮತ್ತು ರಾಜರ ಮೆಚ್ಚುಗೆ ಗಳಿಸಲು ರಚನೆಯಾಗದೆ ಜನಸಾಮಾನ್ಯರು ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಿ ಬದುಕಿನ ಜಂಜಾಟದಿಂದ ನೆಮ್ಮದಿ ಪಡೆಯಲು ರಚಿಸಲ್ಪಟ್ಟವು.

ಶೈವರಿಗೆ ಕೈಲಾಸ, ವೈಷ್ಣವರಿಗೆ ವೈಕುಂಠ, ಬೌದ್ಧರಿಗೆ ಮೋಕ್ಷ ಗಾಮಿನಿಯೆಂಬ ಭಿನ್ನ ಭಿನ್ನ ಸ್ವರ್ಗಗಳನ್ನು ನಾವು ಕಲ್ಪಿಸಿಕೊಂಡಿರುವುದು. ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶಗಳು ಎಲ್ಲರಿಗೂ ಒಂದೇ ಎಂದು ವಚನಕಾರರು ನಮಗೆ ಮನವರಿಕೆ ಮಾಡಿಕೊಟ್ಟು ನಿರಾಕಾರ ಪರಶಿವನನ್ನು ಆರಾಧಿಸಲು ಕರೆ ನೀಡುವ ಮೂಲಕ ಎಲ್ಲರನ್ನು ಒಟ್ಟುಗೂಡಿಸಲು ಪ್ರಯತ್ನಿಸಿದರು ಎಂದರು. ಈ ದಿನ ಸಮಿತಿಯವರು ನೀಡಿರುವ ಬಸವಶ್ರೀ ಪ್ರಶಸ್ತಿ ನನ್ನ ಜೀವನದ ಇತಿಹಾಸದ ಸುವರ್ಣಾಕ್ಷರಗಳಲ್ಲಿ ಬರೆಯುವ ಸುಸಂದರ್ಭ. ನಮ್ಮ ವಚನ ಸೇವೆಯನ್ನು ಇಮ್ಮಡಿಗೊಳಿಸಲು ಇದು ಸಹಕಾರಿಯಾಗಿದೆ ಎಂದರು.

ಊಟಿಯ ಗುರುಬಸವ ಶಾಂತಿನಿಕೇತನ ಮಠದ ಶ್ರೀ ಬಸವಯೋಗಿಪ್ರಭುಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಬಸವ ಎಂದರೆ ಎತ್ತಲ್ಲ. ಕೆಳಗೆ ಬಿದ್ದವರನ್ನು ಮೇಲೆತ್ತಿದ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ಕರುಣಾಳು. ಕಾಯಕ ಮತ್ತು ದಾಸೋಹಕ್ಕೆ ಮಹತ್ವ ನೀಡಿದ ಶರಣರು ವಿಚಾರವಂತರಾಗುವುದರ ಜೊತೆಗೆ ಆಚಾರವಂತರಾಗಬೇಕು ಎಂದು ತಿಳಿಸಿದರು. ಹೆಣ್ಣನ್ನು ಕೀಳಾಗಿ ಕಾಣುತ್ತಿದ್ದ ಸಂದರ್ಭದಲ್ಲಿ ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಹೇಳುವುದರ ಮೂಲಕ ಗೌರವದಿಂದ ಕಂಡು ಸಾಹಿತ್ಯ ರಚನೆಯಲ್ಲಿ ತೊಡಗಿಸಿ ಸಾಕ್ಷರರನ್ನಾಗಿ ಮಾಡಿದರು.

ನಂತರ ವಚನ ಕುಮಾರ ಸ್ವಾಮಿ ಮತ್ತು ರೂಪ ಕುಮಾರ ಸ್ವಾಮಿ ದಂಪತಿಗಳಿಗೆ ಬಸವಶ್ರೀ ಪ್ರಶಸ್ತಿ ಪ್ರದಾನ ಮಾಡಿದರು. ಇದೇ ಸಂದರ್ಭದಲ್ಲಿ ಇಲಾಖೆಯಲ್ಲಿ ನಿವೃತ್ತಿ ಹೊಂದಿದ ನೌಕರರನ್ನು ಗೌರವಿಸಲಾಯಿತು. ವಚನ ಕಂಠಪಾಠ, ವ್ಯಾಖ್ಯಾನ, ರಸಪ್ರಶ್ನೆ ಮತ್ತು ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದಸ್ವಾಮಿಗಳು, ಕರ್ನಾಟಕ ವಾಣಿಜ್ಯ ಕೈಗಾರಿಕೆ ಮಹಾಸಂಸ್ಥೆಯ ನಿರ್ದೇಶಕ ಡಾ. ರವೀಂದ್ರಸ್ವಾಮಿ ದೊಡ್ಮನೆ, ಬಿ.ಇ.ಎಂ.ಎಲ್ ಬಸವಸಮಿತಿ ಅಧ್ಯಕ್ಷ ಎಂ.ಸಿ.ದೇವರಾಜಪ್ಪ, ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

'ಕರ್ನಾಟಕ ಪ್ರಜಾಭೂಷಣ ಪ್ರಶಸ್ತಿ' ಪ್ರದಾನ



ಮೈಸೂರು, ಜು.31– ವಿಶಾಲವಾದ ಪ್ರಪಂಚದಲ್ಲಿ ಸಾಧಕರು ಶಾಶ್ವತವಲ್ಲ, ಸಾಧನೆ ಮಾತ್ರ ಶಾಶ್ವತ. ಯಾರು ತಮ್ಮಲ್ಲಿರುವ ಜ್ಞಾನವನ್ನು ಸರಿಯಾದ ದಿಕ್ಕಿನಲ್ಲಿ ಸದ್ಬಳಕೆ ಮಾಡಿಕೊಳ್ಳುವರೋ, ಅವರು ಜೀವನದಲ್ಲಿ ಅದ್ಭುತ ಸಾಧಕರಾಗಬಲ್ಲರು. ಅವರ ಸಾಧನೆ ಉಳಿಯುತ್ತದೆ ಎಂದು ನಿವೃತ್ತ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಡಾ.ಕೆ. ಶಂಕರೇಗೌಡ ಅಭಿಪ್ರಾಯಪಟ್ಟರು.

ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಶ್ರೀರಂಗಪಟ್ಟಣದ ಸುಮಂಗಲಿ ಸೇವಾ ಟ್ರಸ್ಟ್ ವತಿಯಿಂದ ನಡೆದ 'ಕರ್ನಾಟಕ ಪ್ರಜಾಭೂಷಣ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿ ಮಾತನಾಡಿದ ಅವರು, ಸಾಧನೆ ಮಾಡಲು ಜ್ಞಾನ, ತಾಳ್ಮೆ, ಪರಿಶ್ರಮ ಹಾಗೂ ತ್ಯಾಗದ ಮನೋಭಾವ ಅಗತ್ಯ. ಹೀಗೆ ವಿವಿಧ ಕ್ಷೇತ್ರದಲ್ಲಿ ಸಾಧನೆಯ ಕೃಷಿ ಮಾಡಿದ, ಬದ್ಧತೆಯಿಂದ ಸೇವೆ ಸಲ್ಲಿಸುವ ಪ್ರಾಮಾಣಿಕ ಸಾಧಕರ ಗುರುತಿಸಿ ಅಭಿನಂದನೆ ಸಲ್ಲಿಸುವುದು ತುಂಬಾ ಮುಖ್ಯ ಎಂದು ಕಾರ್ಯಕ್ರಮ ಸಂಘಟಕರಿಗೆ ಸಲಹೆ ನೀಡಿದರು. ಸಾಧಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಡಾ.ಬಿ.ಆರ್. ಅಂಬೇಡ್ಕರ್, ಕುವೆಂಪು, ಎಪಿಜೆ ಅಬ್ದುಲ್ ಕಲಾಂ, ಡಾ. ಸಿ.ಎನ್.ಮಂಜುನಾಥ್ ಅವರ ಸೇವೆ ಮತ್ತು ಸಾಧನೆಯನ್ನು ಜನರು ಸದಾ ಗೌರವಿಸಬೇಕು. ಈ ಸಾಧಕರು ಮಾಡಿದ ಸಾಧನೆ, ಸಾರಿದ ಸಂದೇಶಗಳನ್ನು ಯುವಜನರಿಗೆ ತಿಳಿಸಬೇಕು. ಆ ಮೂಲಕ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಿ, ಅವರಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಬೇಕು ಎಂದು ಸಲಹೆ ನೀಡಿದರು.

ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಮಾತನಾಡಿ, ಕಾಯಕ ಸಂಸ್ಕೃತಿಯನ್ನು ಉಳಿಸುವ ಜೊತೆಗೆ ಅರ್ಪಣಾ ಮನೋಭಾವದಿಂದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ಸಾಧಕರು ಸಮಾಜದ ಆಸ್ತಿ. ಇಂತಹ ನಿಸ್ವಾರ್ಥ ಸೇವಾ ಸಾಧಕರಿಗೆ ಸಲ್ಲಿಸುವ ಪ್ರಶಸ್ತಿಯ ಗೌರವ ಅವರ ಜವಾಬ್ದಾರಿಯ ವೃದ್ಧಿಸುತ್ತದೆ.

ಸಮಾಜಮುಖಿ ಕಾರ್ಯಗಳಲ್ಲಿ ಮುಂದಡಿಯಿಡಲು ಚಿಮ್ಮುಹಲಗೆಯಾಗುವುದಲ್ಲದೆ ಹೊಸ ಹುರುಪು ತುಂಬಿ, ಜೀವನದಲ್ಲಿ ಮತ್ತಷ್ಟು ಸಾಧಿಸಲು ಪ್ರೇರಣೆ ನೀಡುತ್ತದೆ ಎಂದರು. ಮೇಲುಕೋಟೆಯ ವೆಂಗೀಪುರದ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಸಮಾರಂಭವನ್ನು ಯುವ ಮುಖಂಡ ಲೋಕೇಶ್ವರ್ ಎಂ. ನಾಯಕ್ ಉದ್ಘಾಟಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕೆ.ಆರ್.ಪೇಟೆ ತಾಲೂಕಿನ ಸಂಘಟನಾ ಕಾರ್ಯದರ್ಶಿ ಬಿ.ಎಸ್. ಮಂಜು, ಲಯನ್ಸ್ ಕ್ಲಬ್ ಆಫ್ ಮೈಸೂರು ಗೋಲ್ಡನ್ ಸಿಟಿಯ ಅಧ್ಯಕ್ಷ ಸುರೇಶ್ ಗೋಲ್ಡ್, ರೂಪದರ್ಶಿ ವಿ. ಅನಿತಾ, ಟ್ರಸ್ಟ್ ಅಧ್ಯಕ್ಷ ಹೆಚ್.ವಿ.ಪುಟ್ಟಸ್ವಾಮಿ, ಸಾಹಿತಿ ಅಪ್ಪಾಜಿ ಕೆ.ಶೆಟ್ಟಹಳ್ಳಿ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರಾದ ಮಂಡ್ಯದ ಮಹಿಳಾ ಹೋರಾಟಗಾರ್ತಿ ರಜನಿ ರಾಜ್, ಕನ್ನಡ ಉಪನ್ಯಾಸಕ ಮಂಜುನಾಥ ರಾಜೇ ಅರಸ್, ನಿವೃತ್ತ ಮುಖ್ಯ ಶಿಕ್ಷಕ ಯೋಗೇಂದ್ರ, ಸಮಾಜಸೇವಕಿ ಶೀಲಾವತಿ, ಯುವ ಪ್ರತಿಭೆ ಯಶಿಕ ಮಹಾಜನ್, ರಂಗನಟ ಸಿ.ಆರ್. ಪುಟ್ಟರಾಜು, ಕನ್ನಡ ಹೋರಾಟಗಾರ ಕೆ.ವಿ.ಕೃಷ್ಣಮೂರ್ತಿ ಸೇರಿದಂತೆ 30 ಮಂದಿಗೆ 'ಕರ್ನಾಟಕ ಪ್ರಜಾಭೂಷಣ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಆ.3ರಂದು ವಿದ್ಯುತ್ ವ್ಯತ್ಯಯ

ಮೈಸೂರು, ಜು.31–ಬನ್ನೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ. 3 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬನ್ನೂರು ಪಟ್ಟಣ, ಕೊಡಗಳ್ಳಿ, ಬೀಸೀಹಳ್ಳಿ, ಹೆಗ್ಗೂರು, ಅತ್ತಳ್ಳಿ, ಕೇತುಪುರ, ರಂಗಸಮುದ್ರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಮಟ್ಟದ ಸೈಕಲ್ ಪೋಲೋ, ನಿಧಾನ ಸೈಕಲಿಂಗ್ ಸ್ಪರ್ಧೆ

ಮೈಸೂರು, ಜು.31–ಕರ್ನಾಟಕ ಸೈಕಲ್ ಪೋಲೋ ಸಂಸ್ಥೆಯು ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಧ್ಯಾನಚಂದ್ ಅವರ ಹುಟ್ಟುಹಬ್ಬದ ಅಂಗವಾಗಿ ಮಾನಸ ಗಂಗೋತ್ರಿಯ ವಿಲೇಜ್ ಹಾಸ್ಟೆಲ್ ಆಟದ ಮೈದಾನದಲ್ಲಿ ಆ. 6 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಮಟ್ಟದ ಸೈಕಲ್ ಪೋಲೋ, ನಿಧಾನ ಸೈಕಲಿಂಗ್ ಸ್ಪರ್ಧೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448266315, 8281322660 ಸಂಪರ್ಕಿಸಬಹುದು.

ಪ್ರವಾಸ ಎಂದಿಗೂ ಆಯಾಸವಲ್ಲ, ವಿಕಾಸ

ಪ್ರವಾಸಕಥನ– ಗಮಕ ವಾಚನ–ವಿಚಾರಗೋಷ್ಠಿಗೆ ಚಾಲನೆ



ಮೈಸೂರು, ಜು.31–ಪ್ರವಾಸ ಎಂದರೆ ಆಯಾಸವಲ್ಲ, ವಿಕಾಸ ಎಂದು ಕವಿ ಜಯಪ್ಪ ಹೊನ್ನಾಳಿ ಬಣ್ಣಿಸಿದರು.

ಅಭಿರುಚಿ ಬಳಗ, ಎನ್.ವಿ. ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗ, ಬೆಂಗಳೂರಿನ ಮೀಡಿಯಾ ಐಕಾನ್‌ನ ವೈದ್ಯಲೋಕ ಹಾಗೂ ಹೆಲ್ತ್ ವಿಷನ್ ಆರೋಗ್ಯ ಮಾಸಿಕ ವತಿಯಿಂದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ್ದ ಕಾಶಿಯಿಂದ ಲಕ್ನೋವರೆಗೆ ರಾಮಾಯಣ ಸ್ಥಳಗಳು, ಶರಣರ ನಾಡಿನಲ್ಲಿ ಪ್ರವಾಸ ಕಥನ–ಗಮಕ ವಾಚನ– ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು. ಪ್ರವಾಸ ವಿಶೇಷ ಅನುಭವವನ್ನು ನೀಡುತ್ತದೆ. ಅನುಭವ ಜ್ಞಾನವನ್ನು ಕಲಿಸಿಕೊಡುತ್ತದೆ. ಹೊಸ ಜೀವನ ವಿಧಾನವನ್ನು ತಿಳಿಸಿಕೊಡುತ್ತದೆ. ಹೊಸ ಹೊಸ ಭಾಷೆ, ಸಂಸ್ಕೃತಿ, ವಿದೇಶದ ರೀತಿ–ನೀತಿ, ಕಾನೂನು ಕಟ್ಟಳೆಯನ್ನು ಕಲಿಸಿಕೊಡುತ್ತದೆ. ನಾವು ದೇಶ ಸುತ್ತದಿದ್ದಲ್ಲಿ ಬಾವಿಯೊಳಗಿನ ಕಪ್ಪೆಯಂತಾಗುತ್ತೇವೆ ಎಂದು ಹೇಳಿದರು. ಮನುಷ್ಯ ಇಂದು ಮಂಗಳ, ಚಂದ್ರಗ್ರಹಕ್ಕೂ ತಲುಪಿದ್ದಾನೆ. ದೇವರು ನಮ್ಮನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟಿದ್ದಾನೆ ಎಂದು ತಿಳಿದು, ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ ಎಂದು ಇರುವಷ್ಟು ದಿನ ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಭೇಟಿ ನೀಡಿ, ಲೋಕಾನುಭವ ಹೆಚ್ಚಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ವಿಚಾರಗೋಷ್ಠಿ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಕೋಶ ಓದು, ದೇಶ ಸುತ್ತು ಎಂಬ ಗಾದೆ ಇದೆ. ಪ್ರವಾಸದಿಂದ ಆಯಾ ಪ್ರದೇಶಗಳ ಇತಿಹಾಸ, ಪರಂಪರೆ, ಸಂಸ್ಕೃತಿ, ಆಹಾರ, ಆಚಾರ, ವಿಚಾರ ತಿಳಿದುಕೊಳ್ಳಬಹುದು ಎಂದರು. ಮುಖ್ಯ ಅತಿಥಿಯಾಗಿದ್ದ ವೈದ್ಯಲೋಕ ಹಾಗೂ ಹೆಲ್ತ್ ವಿಷನ್ ಮಾಸಿಕ ಸಂಪಾದಕ ಶ್ರೀಕೃಷ್ಣ ಮಾಯ್ಲೆಂಗಿ, ಪ್ರವಾಸದಿಂದ ಮಾನಸಿಕ ಒತ್ತಡಕ್ಕೆ ಪರಿಹಾರ ಸಿಗುತ್ತದೆ ಎಂದರು. ಪ್ರವಾಸದ ಜೊತೆಗೆ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಕೂಡ ಹೆಚ್ಚಾಗಬೇಕು ಎಂದು ಅವರು ಹೇಳಿದರು. ಅಭಿರುಚಿ ಬಳಗದ ಸಂಚಾಲಕ ಎನ್.ವಿ. ರಮೇಶ್ ಮಾತನಾಡಿ, ಪ್ರವಾಸಕಥನದಲ್ಲಿ ಪುರಾಣವೂ ಇರುತ್ತದೆ. ಹೀಗಾಗಿಯೇ ಕಾಶಿಯಿಂದ ಲಕ್ನೋವರೆಗಿನ ಪ್ರವಾಸಕಥನದಲ್ಲಿ ರಾಮಾಯಣದ ಸ್ಥಳಗಳ ಬಗ್ಗೆ ಅಧ್ಯಯನ ಮಾಡಿದ್ದೇನೆ ಎಂದರು. ಪ್ರವಾಸ ಸಾಹಿತ್ಯ ಕುರಿತು ಸುಶೀಲಾ ಶ್ಯಾಮಸುಂದರ್, ಉಷಾ ನರಸಿಂಹನ್ ಮಾತನಾಡಿದರು. ಚುಟುಕು ಸಾಹಿತ್ಯ ಪರಿಷತ್ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಉಮಾ ಸ್ವಾಗತಿಸಿದರು. ಕೆ. ಪರಮೇಶ್ ಉತ್ತನಹಳ್ಳಿ ನಿರೂಪಿಸಿದರು. ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದ ಎ. ಖಾಸಿಂ ಗಮಕ ವಾಚನ, ಲೀಲಾವತಿ ಭಾವಗೀತೆ ಹಾಡಿದರು. ಅಂಬುಜಾ. ಪುಟ್ಟಸ್ವಾಮಿ ಮೊದಲಾದವರು ಇದ್ದರು.

ಮೈಸೂರು ಮಿತ್ರ

ವಿವಿಧೆಡೆ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ

ರಕ್ತದಾನ ಮಾಡಿ ಅಮೂಲ್ಯ ಜೀವ ಉಳಿಸಿ: ಶಾಸಕ ದರ್ಶನ್



ನಂಜನಗೂಡು, ಜು.31– ರಕ್ತದಾನ ಮಹಾದಾನ. ರಕ್ತ ಕೊಟ್ಟು ಅಮೂಲ್ಯ ಜೀವ ಉಳಿಸಲು ನೆರವಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಮಹದೇಶ್ವರ ಪ್ಯಾಲೇಸ್‌ನಲ್ಲಿ ಸೋಮವಾರ ಧ್ರುವನಾರಾಯಣ್ ಅಭಿಮಾನಿ ಬಳಗ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಕ್ತದಾನದಿಂದ ವ್ಯಕ್ತಿಯ ಆರೋಗ್ಯ ಉತ್ತಮಗೊಳ್ಳುವ ಜೊತೆಗೆ ಅಗತ್ಯ ಸಮಯದಲ್ಲಿ ಇನ್ನೊಂದು ಜೀವಕ್ಕೆ ರಕ್ತ ಕೊಟ್ಟು ಆ ಜೀವ ಉಳಿಸಿದ ಪುಣ್ಯ ನಿಮಗೆ ಲಭಿಸಲಿದೆ. ಆದ್ದರಿಂದ ಯುವಕರು ರಕ್ತದಾನ ಮಾಡಿ ಎಂದು ಸಲಹೆ ನೀಡಿದರು.

2 ಬಾರಿ ಸಂಸದರಾಗಿದ್ದ ನನ್ನ ತಂದೆ ಧ್ರುವನಾರಾಯಣ್ ಬಡಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ದುಡಿದಿದ್ದರು. ಅಲ್ಲದೆ ತಮ್ಮ ಹುಟ್ಟುಹಬ್ಬವನ್ನು ಆರೋಗ್ಯ ಹಾಗೂ ರಕ್ತದಾನ ಶಿಬಿರ, ಉದ್ಯೋಗ ಮೇಳಗಳನ್ನು ಆಯೋಜಿಸುವ ಮೂಲಕ ಸರಳವಾಗಿ ಆಚರಿಸಿಕೊಳ್ಳುತ್ತಿದ್ದರು. ಹೀಗಾಗಿ ಅವರ 62ನೇ ಹುಟ್ಟುಹಬ್ಬವನ್ನು ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಉದ್ಯೋಗ ಮೇಳಗಳಂತಹ ಸಾಮಾಜಿಕ ಸೇವಾ ಕಾರ್ಯಗಳನ್ನು ಆಯೋಜಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ನಿನ್ನೆ ನಡೆದ ಉದ್ಯೋಗ ಮೇಳದಲ್ಲಿ 450 ಮಂದಿಗೆ ಉದ್ಯೋಗ ದೊರಕಿದೆ. ರಕ್ತದಾನ ಶಿಬಿರದಲ್ಲಿ 55ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದ್ದಾರೆ. ತಾಲೂಕಿನ ಹುಲ್ಲಹಳ್ಳಿಯ ಚಂದ್ರೋದಯ ಕಲ್ಯಾಣ ಮಂಟಪದಲ್ಲಿ ಯಶಸ್ವಿಯಾಗಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗಿದೆ ಎಂದರು.

ತಾಲೂಕು ಆಸ್ಪತ್ರೆ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನೀಗಿಸಲು ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ತಾಲೂಕು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಸಭಾ ಉಸ್ತುವಾರಿ ಶ್ರೀಕಂಠು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ನಗರಸಭಾ ಮಾಜಿ ಸದಸ್ಯ ಎನ್.ಎಂ.ಮಂಜುನಾಥ್, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ, ಕೆಪಿಸಿಸಿ ಸದಸ್ಯ ಅಕ್ಬರ್ ಅಲೀಂ, ಮುಖಂಡರಾದ ವಿಜಯ್ ಕುಮಾರ್, ಶ್ರೀನಿವಾಸ ಮೂರ್ತಿ, ಮಂಜುನಾಥ್, ಕುಳ್ಳಯ್ಯ, ನಂಜುಂಡಸ್ವಾಮಿ, ದೊರೆಸ್ವಾಮಿ ನಾಯಕ, ನಾಗರಾಜಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಮುದ್ದು ಮಾದಶೆಟ್ಟಿ, ರಾಜೇಶ್, ನಗರಸಭೆ ಸದಸ್ಯರಾದ ಪ್ರದೀಪ್ ಕುಮಾರ್, ಎಸ್.ಪಿ.ಮಹೇಶ್, ಗಂಗಾಧರ್, ಗಾಯಿತ್ರಿ ಮೋಹನ್ ಉಪಸ್ಥಿತರಿದ್ದರು.

ಜನಪ್ರತಿನಿಧಿಗಳಿಗೆ ಧ್ರುವನಾರಾಯಣ್ ಕಾರ್ಯವೈಖರಿ ಮಾದರಿ



ತಿ.ನರಸೀಪುರ, ಜು.31– ಪ್ರತಿಯೊಬ್ಬ ಜನಪ್ರತಿನಿಧಿಗಳಿಗೂ ಧ್ರುವನಾರಾಯಣ್ ವ್ಯಕ್ತಿತ್ವ ಹಾಗೂ ಕಾರ್ಯವೈಖರಿ ಮಾದರಿ ಎಂದು ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ತಿಳಿಸಿದರು. ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬದ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಮಾತನಾಡಿದ ಅವರು, ಅಭಿವೃದ್ಧಿ ಕಾಣದ ಹಲವು ಹಳ್ಳಿಗಳು ಅವರು ಸಂಸದರಾಗಿದ್ದಾಗ ಕೇಂದ್ರ ಪುರಸ್ಕೃತ ಯೋಜನೆಯಿಂದ ಪ್ರಗತಿಯಾಗಿವೆ ಎಂದರು.

ಶಾಸಕ, ಸಂಸದರಾಗಿದ್ದ ಆರ್.ಧ್ರುವನಾರಾಯಣ್ ಜನಸಾಮಾನ್ಯರಿಗೆ ಸ್ಪಂದಿಸುವ ರಾಜಕಾರಣಿಯಾಗಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ರಾಜ್ಯಾದ್ಯಂತ ಪಕ್ಷ ಸಂಘಟಿಸಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವಷ್ಟರಲ್ಲಿ ನಮ್ಮೆಲ್ಲರನ್ನು ಬಿಟ್ಟು ಬಾರದ ಲೋಕಕ್ಕೆ ಹೋಗಿದ್ದು ನಿಜಕ್ಕೂ ದುರ್ದೈವ. ಅವರು ನಮ್ಮ ಜೊತೆ ಭೌತಿಕವಾಗಿ ಇಲ್ಲದಿದ್ದರೂ, ಅವರು ಮಾಡಿರುವ ಅಭಿವೃದ್ಧಿ ಹಾಗೂ ಜನರ ಮನಸ್ಸಿನಲ್ಲಿ ಚಿರಾಯುವಾಗಿದ್ದಾರೆ ಎಂದರು.

ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕಟ್ಟಕಡೆ ಹಳ್ಳಿಗಳಿಗೂ ತರುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಬದ್ಧರಾಗಿ, ಸಾಮಾನ್ಯ ಜನರ ಅಹವಾಲು ಆಲಿಸಿ ಸ್ಪಂದಿಸುವ ಗುಣ ಹೊಂದಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ನಾಡು ಕಂಡ ಅಪರೂಪದ ರಾಜಕಾರಣಿ ಎಂದರು. ಈ ವೇಳೆ ವೈದ್ಯಾಧಿಕಾರಿ ಡಾ.ಅಭಿಲಾಷ್, ಯುವ ಕಾಂಗ್ರೆಸ್ ಅಧ್ಯಕ್ಷ ಅಮಾಸೆಗೌಡ, ಜೀಮರಹಳ್ಳಿ ಜಗದೀಶ್, ಜೀಸನ್, ಮರಯ್ಯ, ಉಮೇಶ, ರವಿ, ಕಿಶೋರ್, ಕ್ರೇಜಿ ಸುರೇಶ್, ಜಯಶಂಕರ್, ಧ್ರುವನಾರಾಯಣ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಹಾಜರಿದ್ದರು.

ಹುಲ್ಲಹಳ್ಳಿಯಲ್ಲಿ ಆರೋಗ್ಯ ತಪಾಸಣೆ ಶಿಬಿರ

ಹುಲ್ಲಹಳ್ಳಿ, ಜು.31– ಗ್ರಾಮದ ಚಂದ್ರೋದಯ ಕಲ್ಯಾಣ ಮಂಟಪದಲ್ಲಿ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಶಾಸಕ ದರ್ಶನ್ ಧ್ರುವನಾರಾಯಣ್, ಗ್ರಾಮೀಣ ಜನತೆ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ನೀಡಬೇಕು. ಗ್ರಾಮೀಣ ಜನತೆ ಅನುಕೂಲಕ್ಕಾಗಿ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರು ಗ್ರಾಮೀಣ ಜನರು ಆರೋಗ್ಯದಿಂದ ಇದ್ದರೆ ಮಾತ್ರ ನಾವು ಬದುಕಲು ಸಾಧ್ಯ ಎನ್ನುತ್ತಿದ್ದರು. ಅವರ ಆಸೆಯಂತೆ ಆರೋಗ್ಯ ಶಿಬಿರ ಆಯೋಜಿಸಿದ್ದು, ಜನತೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಧೀರಾಜ್ ಧ್ರುವನಾರಾಯಣ್ ಸೇರಿದಂತೆ ಇನ್ನಿತರರಿದ್ದರು.



ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ ಸರಗೂರು ತಾಲೂಕಿನ ದೇವಲಾಪುರ ಗ್ರಾಮದ ಸರ್ಕಾರಿ ಶಾಲಾ ಮಕ್ಕಳಿಗೆ ಪೆನ್ನು, ಪುಸ್ತಕ ಹಾಗೂ ಸಿಹಿ ವಿತರಿಸಲಾಯಿತು. ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಯಜಮಾನರಾದ ಶಿವಣ್ಣ, ಮಹೇಶ್, ಶಿವಮಲಯ್ಯ, ಗ್ರಾಪಂ ಸದಸ್ಯ ಶಿವಶಂಕರ್, ಮುಖ್ಯಶಿಕ್ಷಕ ಬಿ.ಎಸ್.ಮೂರ್ತಿ, ಸಹ ಶಿಕ್ಷಕರಾದ ಲಕ್ಷ್ಮಮ್ಮ, ರಾಜು, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು, ಸದಸ್ಯರಾದ ಮಹೇಶ್, ನವೀನ್, ನಾಗರಾಜು, ಚಲುವರಾಜು ಇನ್ನಿತರರಿದ್ದರು.

ನಾನು ಮತ್ತೆ ಶಾಸಕನಾಗಲು ಧ್ರುವನಾರಾಯಣ್ ಕಾರಣ: ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆ, ಜು.31– ನಾನು ಮತ್ತೆ ಶಾಸಕನಾಗಿದ್ದೇನೆ ಎಂದರೆ ಅದಕ್ಕೆ ನನ್ನ ಗುರು ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಮಾರ್ಗದರ್ಶನ, ಆಶೀರ್ವಾದವೇ ಕಾರಣ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕಾಯಕಯೋಗಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಧ್ರುವನಾರಾಯಣ್ ಅವರ 62ನೇ ಹುಟ್ಟುಹಬ್ಬ ಕಾರ್ಯಕ್ರಮ ಉದ್ಘಾಟಿಸಿದ ಅವರು, ಧ್ರುವನಾರಾಯಣ್ ಅವರಿಗೆ ಕೋಟೆ ಹಾಗೂ ಸರಗೂರು ತಾಲೂಕಿನ ಅಭಿವೃದ್ಧಿ ಬಗ್ಗೆ ಅಪಾರ ಕಾಳಜಿ ಇತ್ತು. ಜನರ ಕಷ್ಟಗಳಿಗೆ ಸ್ಪಂದಿಸುವ ಜೊತೆಗೆ ಅವಳಿ ತಾಲೂಕುಗಳ ಅಭಿವೃದ್ಧಿಗೆ ಶ್ರಮಿಸುವಂತೆ ಅವರು ಮಾರ್ಗದರ್ಶನ ನೀಡಿದ್ದರು. ಅದರಂತೆ ನಾನು ಅಭಿವೃದ್ಧಿ ಕಾರ್ಯ ಕೈಗೊಂಡು ಅವರ ಹೆಸರು ಉಳಿಸುವ ಕೆಲಸ ಮಾಡುತ್ತೇನೆ ಎಂದರು.

ಶಾಸಕ ದರ್ಶನ್ ಮಾತನಾಡಿ, ನಮ್ಮ ತಂದೆ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಇಂದು ನಮ್ಮ ಜೊತೆ ಇಲ್ಲದಿದ್ದರೂ, ಅವರು ಹಾಕಿಕೊಟ್ಟ ದಾರಿ ಹಾಗೂ ಮಾರ್ಗದರ್ಶನದಂತೆ ನಡೆಯುತ್ತಿದ್ದೇವೆ. ನಮ್ಮ ತಂದೆಗೆ ಕೋಟೆ ಅಚ್ಚುಮೆಚ್ಚಾಗಿತ್ತು. ಅದರಂತೆ ಇಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ ಎಂದರು.

ಇದೇ ವೇಳೆ ಧ್ರುವನಾರಾಯಣ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಯಿತು. ಇದೇ ವೇಳೆ ಕೆವಿಸಿ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ವತಿಯಿಂದ ರಕ್ತದಾನ ಶಿಬಿರ, ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ, ಚಿತ್ತಧಾಮದಲ್ಲಿರುವ ಮಾನಸಿಕ ಅಸ್ವಸ್ಥರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಈ ವೇಳೆ ಕಾಯಕಯೋಗಿ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಕೆಪಿಸಿಸಿ ಮಹಿಳಾಧ್ಯಕ್ಷೆ ಪುಷ್ಪಾ ಅಮರ್‌ನಾಥ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಧೀರನ್ ಧ್ರುವನಾರಾಯಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ನಿಗಮ ಮಂಡಳಿ ಮಾಜಿ ಅಧ್ಯಕ್ಷ ಡಿ. ಸುಂದರ ದಾಸ್, ಜೈ ಕರ್ನಾಟಕ ಸಂಘಟನೆ ಉಪಾಧ್ಯಕ್ಷ ಸತೀಶ್‌ಗೌಡ ಸೇರಿದಂತೆ ಇನ್ನಿತರರಿದ್ದರು.

ಟಿ.ದೊಡ್ಡಪುರ ಗ್ರಾಪಂ: ಪುಟ್ಟಸ್ವಾಮಿ ಅಧ್ಯಕ್ಷ, ಮಂಜುಳಾ ಉಪಾಧ್ಯಕ್ಷೆ



ತಲಕಾಡು, ಜು.31– ತಾಲೂಕಿನ ಟಿ.ದೊಡ್ಡಪುರ ಗ್ರಾಪಂ ನೂತನ ಅಧ್ಯಕ್ಷರಾಗಿ ಪುಟ್ಟಸ್ವಾಮಿ, ಉಪಾಧ್ಯಕ್ಷೆಯಾಗಿ ಮಂಜುಳಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸೋಮವಾರ ನಡೆದ ಚುನಾವಣೆಯಲ್ಲಿ ಪ.ಜಾತಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಪುಟ್ಟಸ್ವಾಮಿ ಹಾಗೂ ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಮಂಜುಳಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭ, ಸಹಾಯಕ ಚುನಾವಣಾಧಿಕಾರಿ ವಿಶ್ವನಾಥ ರೆಡ್ಡಿ ಘೋಷಿಸಿದರು.


ಗ್ರಾಪಂನ ಒಟ್ಟು 15 ಸದಸ್ಯರ ಪೈಕಿ 11 ಮಂದಿ ಚುನಾವಣೆಯಲ್ಲಿ ಭಾಗವಹಿಸಿದ್ದರು. ಅವಿರೋಧ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಬೆಂಬಲಿಗರು ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಗ್ರಾಮದ ಹೊರವಲಯದ ಶ್ರೀಕರಿಬಸವೇಶ್ವರ ರೈಸ್‌ಮಿಲ್ ಆವರಣದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಹಾಗೂ ಹಿರಿಯ ಮುಖಂಡ ದೊಡ್ಡನಹುಂಡಿ ನಂಜುಂಡಸ್ವಾಮಿ ನೂತನ ಅಧ್ಯಕ್ಷ, ಉಪಾಧ್ಯಕ್ಷೆ ಮತ್ತು ಸದಸ್ಯರನ್ನು ಸನ್ಮಾನಿಸಿದರು.

ಈ ವೇಳೆ ಮಾಜಿ ಅಧ್ಯಕ್ಷೆ ಚಿಕ್ಕತಾಯಮ್ಮ, ಸದಸ್ಯರಾದ ಜಯಬಸವಣ್ಣ, ನಿಜಗುಣ, ರಾಜಮ್ಮ, ಆರ್.ಮಹೇಶ್, ಎಂ.ರಾಜೇಶ್, ಪ್ರತಾಪ್, ಮಹದೇವಮ್ಮ, ಮುಖಂಡರಾದ ಸುಂದರ ನಾಯಕ, ಶಿವಣ್ಣ, ಮಾಜಿ ಸದಸ್ಯ ಸಿದ್ದೇಗೌಡ, ಸೋಮಣ್ಣ, ಶಿವಸ್ವಾಮಿ, ಮಲ್ಲು, ಶೇಷಾದ್ರಿ, ನರಸಿಂಹ ಮಾದನಾಯಕ, ಮಹೇಂದ್ರ, ಎಂ.ಮಾದೇಗೌಡ, ಚರಣ್, ರಮೇಶ್, ಕರಿಬಸವೇಗೌಡ, ಎಂ.ಸಿ.ರಾಜಣ್ಣ, ಮಹೇಶ್, ಸಿದ್ದಪ್ಪ, ಚಿಕ್ಕರಂಗ, ಪಿಡಿಓ ರಾಜಶೇಖರಮೂರ್ತಿ ಮತ್ತಿತರರಿದ್ದರು.

ಬೀಜಗನಹಳ್ಳಿ ಡೈರಿಗೆ 11 ಮಂದಿ ನಿರ್ದೇಶಕರ ಆಯ್ಕೆ

ಹುಣಸೂರು, ಜು.31– ತಾಲೂಕಿನ ಬೀಜಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಬಸವರಾಜಪ್ಪ, ತಿಮ್ಮಯ್ಯರೆಡ್ಡಿ, ಕೆಂಡರೆಡ್ಡಿ, ಶಿವಣ್ಣಗೌಡ, ಲಕ್ಷ್ಮಣ್ ರಾವ್ ಹಾಗೂ ಸಿದ್ದಶೆಟ್ಟಿ ಸೇರಿದಂತೆ 6 ಮಂದಿ ನಿರ್ದೇಶಕರು ಚುನಾವಣೆಯಲ್ಲಿ ಜಯಗಳಿಸಿದರೆ ಇನ್ನುಳಿದ 5 ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ತಾಪಂ ಮಾಜಿ ಸದಸ್ಯ ರವಿಪ್ರಸನ್ನ, ಕಾಂಗ್ರೆಸ್ ಮುಖಂಡರಾದ ರಾಜಶೇಖರ್, ಮಲ್ಲಿಕಾರ್ಜುನಚಾರ್, ಎಂ.ಎಚ್ ಮಹದೇವ್, ರವಿರೆಡ್ಡಿ, ದುರ್ಗೇಶ್, ಜನಾರ್ಧನ್, ಬಸವರಾಜೇಗೌಡ, ಗ್ರಾಪಂ ಸದಸ್ಯರಾದ ಮರಿಲಿಂಗಯ್ಯ, ಚೇತನ್ ರಾವ್, ದರ್ಶನ್ ಇತರರಿದ್ದರು.



ನಂಜನಗೂಡು ತಾಲೂಕು ತಾಂಡವಪುರ ಗ್ರಾಮ ಪಂಚಾಯತಿಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಶಿವಣ್ಣ ಅವರನ್ನು ಮೈಸೂರಿನ ಅವರ ಸ್ನೇಹ ಬಳಗದಿಂದ ಅಭಿನಂದಿಸಲಾಯಿತು.

ಗುಣಮಟ್ಟದ ಹಾಲು ಪೂರೈಸಿ, ಹೆಚ್ಚು ಲಾಭ ಗಳಿಸಿ

ಉತ್ಪಾದಕರಿಗೆ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಸಲಹೆ



ತಿ.ನರಸೀಪುರ, ಜು.31– ಹಾಲು ಉತ್ಪಾದಕರು ಗುಣಮಟ್ಟದ ಹಾಲು ಪೂರೈಸುವ ಮೂಲಕ ಹೆಚ್ಚು ಲಾಭ ಗಳಿಸಬೇಕು. ರೈತರು ಸಹಕಾರ ಸಂಘದ ಮೂಲಕ ವಹಿವಾಟು ನಡೆಸಿದರೆ ಸಂಘ ಹಾಗೂ ಉತ್ಪಾದಕರಿಬ್ಬರೂ ಉತ್ತಮ ಲಾಭ ಪಡೆಯಬಹುದು ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ನೆರಗ್ಯಾತನಹಳ್ಳಿಯಲ್ಲಿ ಕರ್ನಾಟಕ ಹಾಲು ಮಹಾಮಂಡಲ ಹಾಗೂ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಘದ ಅನುದಾನದಲ್ಲಿ ನಿರ್ಮಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತರಿಗೆ ಹೈನೋದ್ಯಮ ಆದಾಯದ ಮೂಲವಾಗಿದ್ದು, ರೈತರು ಮನೆಗೊಂದು ಹಸು ಸಾಕುವ ಮೂಲಕ ಆರ್ಥಿಕಾಭಿವೃದ್ಧಿ ಹೊಂದುವುದು ಸೇರಿದಂತೆ ಸಂಘ ಹಾಗೂ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಲು ಮುಂದಾಗಬೇಕಿದೆ ಎಂದರು.

ಮೊನ್ನೆ ತುಂಬಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆ ಅನುಷ್ಠಾನಕ್ಕಾಗಿ ಹಾಲಿಗೆ ಹೆಚ್ಚುವರಿ ಹಣ ನೀಡಲು ಸಾಧ್ಯವಾಗುತ್ತಿಲ್ಲ ಎಂದಿದ್ದರು. ಆದರೆ ಸರ್ಕಾರ ನೀಡುತ್ತಿದ್ದ 5 ರೂ.ಗಳ ಪ್ರೋತ್ಸಾಹಧನ ಮುಂದುವರೆಸಲಾಗುತ್ತದೆ ಎಂದ ಅವರು, ಮತ್ತೆ 3 ರೂ. ಹೆಚ್ಚಳ ಮಾಡಬೇಕೆಂಬ ಉದ್ದೇಶ ಸರ್ಕಾರದ್ದಾಗಿತ್ತಾದರೂ, ಗ್ಯಾರಂಟಿ ಯೋಜನೆಯಿಂದ ಹೆಚ್ಚುವರಿ ಹಣ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಯತೀಂದ್ರ ಹೇಳಿದ್ದು, ಪ್ರೋತ್ಸಾಹಧನ ಮುಂದುವರೆಯಲಿದ್ದು, ಯಾವುದೇ ಗೊಂದಲ ಬೇಡ ಎಂದರು.

ಮುಂದಿನ ದಿನಗಳಲ್ಲಿ ಸಂಘದ ಚುನಾವಣೆ ನಡೆಯಲಿದ್ದು, ಗ್ರಾಮಸ್ಥರು ಹಾಗೂ ರೈತರು, ಅಧ್ಯಕ್ಷರು ಹಾಗೂ ಸದಸ್ಯರ ಆಯ್ಕೆಯಲ್ಲಿ ರಾಜಕೀಯ ಮಾಡದೇ ನಿಷ್ಪಕ್ಷಪಾತವಾಗಿ, ಸ್ವಇಚ್ಛೆಯಿಂದ ಸಂಘದ ಕೆಲಸ ಮಾಡುವ ಆಸಕ್ತಿ ಹೊಂದಿದ್ದಾರೋ ಅಂತಹವರನ್ನು ಗುರುತಿಸಿ ಆಯ್ಕೆ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಮೈಮುಲ್ ಮಾಜಿ ಅಧ್ಯಕ್ಷ ಸಿ.ಓಂಪ್ರಕಾಶ್ ಮಾತನಾಡಿ, ಹಾಲಿನ ಗುಣಮಟ್ಟ ಹೆಚ್ಚಿಸುವ ಜವಾಬ್ದಾರಿ ರೈತರದ್ದಾಗಿದೆ. ಉತ್ಪಾದಕರು ಡೈರಿಗೆ ಹಾಕುವ ಹಾಲಿನ ಗುಣಮಟ್ಟ ಉತ್ತಮವಾಗಿದ್ದಲ್ಲಿ ಉತ್ಪಾದಕರಿಗೆ ಉತ್ತಮ ಬೆಲೆ ಸಿಗಲಿದೆ. ಜಿಲ್ಲೆಯ ರೈತರು ಉತ್ಪಾದಿಸುವ ಹಾಲಿನ ಗುಣಮಟ್ಟ ಮತ್ತಷ್ಟು ಸುಧಾರಣೆಯಾಗಬೇಕಿದೆ ಎಂದರು.

ಈ ವೇಳೆ ಡೈರಿ ಅಧ್ಯಕ್ಷ ಎನ್.ಆರ್.ಚಂದ್ರಶೇಖರ್, ಉಪಾಧ್ಯಕ್ಷೆ ಮಂಜುಳ, ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ಡಾ.ಸಿ.ದಿವಾಕರ್, ಜಿಲ್ಲಾ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಸೋಸಲೆ ಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಗ್ರಾಪಂ ಸದಸ್ಯೆ ಪೂರ್ಣಿಮಾ, ನಿರ್ದೇಶಕರಾದ ನಂದೀಶ, ನಟರಾಜಪ್ಪ, ಶಿವಕುಮಾರ್, ಬಸವರಾಜಪ್ಪ, ಚಂದ್ರಶೇಖರಪ್ಪ, ಪುಟ್ಟತಾಯಮ್ಮ, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಜಯಪ್ಪ, ಶೀಲಾ, ರವಿಪ್ರಸಾದ್, ದುಂಡಪ್ಪ, ಮಹದೇವಸ್ವಾಮಿ, ಡೈರಿ ಗುರುಮೂರ್ತಿ, ಎನ್.ಆರ್.ನಂಜುಂಡಪ್ಪ, ಪುಟ್ಟಮಾದಪ್ಪ, ರಾಜಣ್ಣ, ಪುಟ್ಟಮಾದಪ್ಪ, ಶಿವನಂಜಪ್ಪ, ಸಂಘದ ಸಿಇಓ ಜಿ.ನೇತ್ರ ಸೇರಿದಂತೆ ಗ್ರಾಮದ ಯಜಮಾನರು, ಹಾಲು ಉತ್ಪಾದಕರ ಸಂಘದ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಹುರ ಗ್ರಾಮ ಪಂಚಾಯತಿ ಕಾಂಗ್ರೆಸ್ ವಶ

ತಾಯಮ್ಮ ಅಧ್ಯಕ್ಷೆ, ಮಹದೇವಸ್ವಾಮಿ ಉಪಾಧ್ಯಕ್ಷ



ಮಲ್ಲುಂಡಿ, ಜು.31– ಇಲ್ಲಿಗೆ ಸಮೀಪದ ಹುರ ಗ್ರಾಮ ಪಂಚಾಯತಿ ಅಧಿಕಾರ ಕಾಂಗ್ರೆಸ್ ವಶವಾಗಿದ್ದು, ನೂತನ ಅಧ್ಯಕ್ಷೆಯಾಗಿ ತಾಯಮ್ಮ, ಉಪಾಧ್ಯಕ್ಷರಾಗಿ ಮಹದೇವಸ್ವಾಮಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯೆ ತಾಯಮ್ಮ, ಬಿಜೆಪಿ ಬೆಂಬಲಿತ ಸದಸ್ಯೆ ಜಯಲಕ್ಷ್ಮಿ ನಾಮಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಸ್ವಾಮಿ ಹಾಗೂ ಶಿವಕುಮಾರ್ ನಾಮಪತ್ರ ಸಲ್ಲಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ ತಲಾ 9 ಮತಗಳನ್ನು ಪಡೆದು ಅಧ್ಯಕ್ಷೆಯಾಗಿ ತಾಯಮ್ಮ, ಉಪಾಧ್ಯಕ್ಷರಾಗಿ ಮಹದೇವ ಸ್ವಾಮಿ ಆಯ್ಕೆಯಾದರೆ, 6 ಮತಗಳನ್ನು ಪಡೆದ ಜಯಲಕ್ಷ್ಮಿ, ಶಿವಕುಮಾರ್ ಪರಾಭವಗೊಂಡರು. ಚುನಾವಣಾಧಿಕಾರಿ ಭೀಮನಾಯಕ್ ಒಡ್ಡರ್ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಬಡವರ ಪರ ಕೆಲಸ ಮಾಡುತ್ತಿದೆ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಹೆಚ್ಚು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಿದ್ದಾರೆ. ಇಲ್ಲಿನ ಗ್ರಾಪಂನ ನೂತನ ಆಡಳಿತ ಮಂಡಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಗ್ರಾಪಂ ಸದಸ್ಯರಾದ ನಿಂಗರಾಜು, ಮಣಿಕಂಠ ಶ್ರೀನಿವಾಸ್, ಯಮುನಾ, ಪುಷ್ಪರಾಣಿ, ದೇವನಾಯಕ, ಚಿಕ್ಕತಾಯಮ್ಮ, ಮುಖಂಡರಾದ ಕೆಮಾರುತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಗ್ರಾಪಂ ಮಾಜಿ ಅಧ್ಯಕ್ಷ ಎಂ.ಶಿವಣ್ಣ, ಶಿವಪ್ಪದೇವರು, ಮಂಜು, ಸುರೇಂದ್ರ ವೀರಭದ್ರ ಸೇರಿದಂತೆ ಹಲವರಿದ್ದರು.

ಆ.5ರಂದು ವಾರ್ಷಿಕ ಮಹಾಸಭೆ

ತಿ.ನರಸೀಪುರ, ಜು.31– ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಆ.5ರಂದು ಬೆಳಗ್ಗೆ 10 ಗಂಟೆಗೆ ನಂಜನಗೂಡು ಮುಖ್ಯರಸ್ತೆಯಲ್ಲಿರುವ ಹೆಳವರಹುಂಡಿ ಗ್ರಾಮದ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಬಿ.ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಭೆಗೆ ಸಂಘದ ನಿರ್ದೇಶಕರು, ರೈತ ಬಾಂಧವರು ಆಗಮಿಸಬೇಕೆಂದು ಸಿಇಓ ಸೋಮಣ್ಣ ಮನವಿ ಮಾಡಿದ್ದಾರೆ.

ಮುಂದೂಡಿಕೆ: ಹೆಳವರಹುಂಡಿಯಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡ ಉದ್ಘಾಟನಾ ಕಾರ್ಯಕ್ರಮವನ್ನು ಆ.5ರಂದು ನಿಗದಿಪಡಿಸಲಾಗಿತ್ತು. ಕಾರಣಾಂತರಗಳಿಂದ ಉದ್ಘಾಟನೆ ಕಾರ್ಯಕ್ರಮ ಮುಂದೂಡಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪ ತಿಳಿಸಿದ್ದಾರೆ.

ಯಾವುದೇ ಗೋಜಲುಗಳಿಗೆ ಅವಕಾಶವಿಲ್ಲದಂತೆ ಜಂಬೂಸವಾರಿ ಅತ್ಯಾಕರ್ಷಕವಾಗಿರುವಂತೆ ಮಾಡಿ

● ದಸರಾ ಉನ್ನತ ಸಭೆಯಲ್ಲಿ ಜಿ.ಟಿ.ದೇವೇಗೌಡರ ಸಲಹೆ ● ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾತಂಡ, ಸ್ತಬ್ಧಚಿತ್ರ, ತಾಯಿ ಚಾಮುಂಡೇಶ್ವರಿ ಕಣ್ತುಂಬಿಕೊಳ್ಳಲು ಜನರಿಗೆ ಅವಕಾಶವಿರಬೇಕು

ಬೆಂಗಳೂರು, ಜು.31– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅತ್ಯಾಕರ್ಷಕ ಜಂಬೂ ಸವಾರಿಯಲ್ಲಿ ಯಾವುದೇ ಗೋಜಲುಗಳಾಗದಂತೆ ಕ್ರಮ ವಹಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಮುಖ್ಯಮಂತ್ರಿ ಸಿದ್ದರಾಮಯ್ಯನವರಲ್ಲಿ ಮನವಿ ಮಾಡಿದ್ದಾರೆ.



ಸೋಮವಾರ ನಡೆದ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದ ಜಿಟಿಡಿ, ನವರಾತ್ರಿಯ ಪ್ರಮುಖ ಘಟ್ಟ ಜಂಬೂಸವಾರಿ. ಅತ್ಯಾಕರ್ಷಕ ಮೆರವಣಿಗೆಯನ್ನು ಕಣ್ತುಂಬಿಕೊಳ್ಳಲು ದೇಶ–ವಿದೇಶಗಳಿಂದ ಲಕ್ಷಾಂತರ ಜನ ಆಗಮಿಸುತ್ತಾರೆ. ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಳ್ಳಲು ಕಾತುರರಾಗಿರುತ್ತಾರೆ. ಸುಪ್ರೀಂಕೋರ್ಟ್, ಹೈಕೋರ್ಟ್ ನ್ಯಾಯಾಧೀಶರುಗಳು, ರಾಜ್ಯಪಾಲರು ಸೇರಿದಂತೆ ಗಣ್ಯಾತಿಗಣ್ಯರೂ ಆಗಮಿಸುತ್ತಾರೆ. ಹಾಗಾಗಿ ಜಂಬೂಸವಾರಿ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ತಿಳಿಸಿದ್ದಾರೆ.

ಮೆರವಣಿಗೆಯಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದವಾಗಬಾರದು. ಸಾಂಸ್ಕೃತಿಕ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳನ್ನು ವ್ಯವಸ್ಥಿತವಾಗಿ ಸಾಗುವಂತೆ ನೋಡಿಕೊಳ್ಳಬೇಕು. ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಪಕ್ಷದ ಮುಖಂಡರಾಗಲೀ, ಕಾರ್ಯಕರ್ತರಾಗಲೀ ಮೆರವಣಿಗೆಯೊಂದಿಗೆ ಸಾಗಲು ಅವಕಾಶ ನೀಡಿರಲಿಲ್ಲ. ಮೆರವಣಿಗೆಯಲ್ಲಿ ಅವರೇ ತುಂಬಿದ್ದರೆ ನಿಜವಾದ ಕಳೆ ಇರುವುದಿಲ್ಲ. ಅದರಿಂದ ಜನರಿಗೂ ಬೇಸರವಾಗುತ್ತದೆ. ಮೆರವಣಿಗೆಯಲ್ಲಿ ಜನರನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಹೇಳಿದ್ದಾರೆ.

ನೀನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗಲೇ ವಿದ್ಯುತ್ ದೀಪಾಲಂಕಾರ, ಯುವ ಸಂಭ್ರಮ ಕಾರ್ಯಕ್ರಮ ಆರಂಭವಾಗಿದ್ದು ಎಂದು ಇದೇ ವೇಳೆ ಸ್ಮರಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಈ ಬಾರಿಯೂ ಕಾಲೇಜು ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಿಸುವ ಯುವ ಸಂಭ್ರಮಕ್ಕೆ ಆದ್ಯತೆ ನೀಡಿ. ಯುವ ದಸರಾಗೆ ಹೆಚ್ಚಿನ ಹಣ ವ್ಯಯಿಸದೆ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಿ ಎಂದು ಸೂಚನೆ ನೀಡಿದರು. ಈ ವೇಳೆ ಪಶ್ಚಿಮ ಬಂಗಾಳ ಹಾಗೂ ಸಿಂಗಾಪುರ ಮಾದರಿಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಬೇಕು. ಗೋಲ್ಡ್ ಪಾಸ್ ಪಡೆದವರಿಗೆ ತೊಂದರೆಯಾಗದಂತೆ ಎಲ್ಲಾ ಕಾರ್ಯಕ್ರಮಗಳಲ್ಲೂ ಸೂಕ್ತ ಆಸನ ವ್ಯವಸ್ಥೆ ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾಗಿ ಜಿ.ಟಿ.ದೇವೇಗೌಡರು ತಿಳಿಸಿದ್ದಾರೆ.

ದೋಬಿಘಾಟ್ ಪ್ರದೇಶ ಸ್ವಚ್ಛತೆ, ಶೌಚಾಲಯ ನಿರ್ಮಾಣಕ್ಕೆ ಮನವಿ

ಮೈಸೂರು, ಜು.31(ಸಿಎನ್)– ಮೈಸೂರಿನ ಸರಸ್ವತಿಪುರಂ ವಾರ್ಡ್ ನಂ. 21ರ ಕುಕ್ಕರಹಳ್ಳಿ ಕೆರೆ ದಕ್ಷಿಣ ದಿಕ್ಕಿನಲ್ಲಿರುವ, 'ಮೈಸೂರು ಸಿಟಿ ವೀರ ಮಡಿವಾಳ ಮಾಚಿದೇವರ ಸಂಘ'ದ ದೋಬಿಘಾಟ್ ಪ್ರದೇಶದಲ್ಲಿ ಸೋಮವಾರ ಟ್ರ್ಯಾಕ್ಟರ್ ಹಾಗೂ ಜೆಸಿಬಿ ಮೂಲಕ ಸ್ವಚ್ಛಗೊಳಿಸಲಾಯಿತು. ಅಲ್ಲದೇ ಚರಂಡಿಯಲ್ಲಿ ತುಂಬಿದ್ದ ತ್ಯಾಜ್ಯ, ಗಿಡ–ಗಂಟಿಗಳನ್ನು ತೆರವು ಮಾಡಿ ಸ್ವಚ್ಛಗೊಳಿಸಲಾಯಿತು.

ಮಿತ್ರನ ಫಲಶ್ರುತಿ

ಜು.14ರ 'ಮೈಸೂರು ಮಿತ್ರ'ನಲ್ಲಿ '**ಬಟ್ಟೆ ಶುಚಿ ಮಾಡುವ ಜನರ ಬದುಕು ಮೂರಾಬಟ್ಟೆ– ಮಡಿವಾಳ ಮಾಚಿದೇವರ ಸಂಘದ ಪ್ರದೇಶದ ದೋಬಿಘಾಟ್‌ನಲ್ಲಿ ಸಮಸ್ಯೆಗಳ ಆಗರ**' ಶೀರ್ಷಿಕೆಯಡಿ 'ದೋಬಿಘಾಟ್ ಅವ್ಯವಸ್ಥೆ ಕುರಿತು ಸುದ್ದಿ ಪ್ರಕಟವಾದ ಬೆನ್ನಲ್ಲೆ ಎಚ್ಚೆತ್ತುಕೊಂಡ ಪಾಲಿಕೆ ಸದಸ್ಯೆ ವೇದಾವತಿ, ಅಲ್ಲಿನ ಸ್ಥಿತಿಗತಿಗಳನ್ನು ಗಮನಿಸಿ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಲ್ಲದೇ, ರಾಜಕಾಲುವೆ, ಒಳಚರಂಡಿಗಳಲ್ಲಿ ತುಂಬಿದ್ದ ತ್ಯಾಜ್ಯ, ಹೂಳೆತ್ತಿಸಿದ್ದಾರೆ. ಈ ಹಿಂದೆ ಇಲ್ಲಿನ 4 ಎಕರೆ ಪ್ರದೇಶದಲ್ಲಿ ಗಿಡ–ಗಂಟಿಗಳು ಬೆಳೆದು ಎಲ್ಲೆಡೆ ಅನೈರ್ಮಲ್ಯ ತಾಂಡವವಾಡುತ್ತಿತ್ತು. ದೋಬಿಘಾಟ್‌ನ



ಮುಂದೆಯೇ ಇರುವ ರಾಜಕಾಲುವೆಯಲ್ಲಿ ತ್ಯಾಜ್ಯ ಶೇಖರಣೆಯಾಗಿ, ಮೂರು ಕಡೆಗಳಿಂದ ಬಂದ ಕೊಳಚೆ ನೀರು ಸರಾಗವಾಗಿ ಹರಿಯದೆ, ಚರಂಡಿಗಳಲ್ಲೇ ನಿಂತು ದುರ್ವಾಸನೆ ಬೀರುತ್ತಿತ್ತು.

ಇದೀಗ ಚರಂಡಿಯನ್ನು ಸ್ವಚ್ಛಗೊಳಿಸಿರುವುದರಿಂದ ಮಳೆ ನೀರು ನಿಲ್ಲದೇ ಹರಿಯುವಂತಾಗಿದೆ. ಅಲ್ಲದೇ ಪ್ರದೇಶದ ತುಂಬೆಲ್ಲಾ ಗಿಡ–ಗಂಟಿ ಬೆಳೆದು, ಹಗಲು ಹೊತ್ತಿನಲ್ಲೇ ಸೊಳ್ಳೆಗಳ ಕಾಟ ಹೆಚ್ಚಾಗಿತ್ತು, ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿತ್ತು ಇದೀಗ ಸ್ವಚ್ಛಗೊಳಿಸಿದ್ದರಿಂದ ಆತಂಕ ನಿವಾರಣೆಯಾಗಿದೆ ಎಂದು ಮಡಿವಾಳರು 'ಮೈಸೂರು ಮಿತ್ರ'ನಿಗೆ ಧನ್ಯವಾದ ತಿಳಿಸಿದರು.

ಯುಜಿಡಿ ಸಮಸ್ಯೆ ಸರಿಪಡಿಸಿಲ್ಲ: ಇಲ್ಲಿನ ಬಹುದೊಡ್ಡ ಸಮಸ್ಯೆಯಾಗಿದ್ದ ಶೌಚಾಲಯ ಸಮಸ್ಯೆಗೆ ಪರಿಹಾರವೇ ಸಿಕ್ಕಿಲ್ಲ. ಯುಜಿಡಿ ಇಲ್ಲವಾದ್ದರಿಂದ ಶೌಚಾಲಯ ವಿದ್ದರೂ, ಬಳಸದ ಸ್ಥಿತಿ ನಿರ್ಮಾಣವಾಗಿದೆ. ಪಾಲಿಕೆ ಸಿಬ್ಬಂದಿ ತಕ್ಷಣ ಎಚ್ಚೆತ್ತು ಸಮಸ್ಯೆ ಬಗೆಹರಿಸಬೇಕಿದೆ. ಮಹಿಳೆಯರು ಕಾರ್ಯ ನಿರ್ವಹಿಸುತ್ತಿರುವುದರಿಂದ ತೆರಳಲು ಸಮಸ್ಯೆಯಾಗುತ್ತಿದೆ. ತಕ್ಷಣ ಯುಜಿಡಿ ಸಂಪರ್ಕ ಮಾಡಬೇಕಾಗಿದೆ.

ಸೋರುತ್ತಿರುವ ಚಾವಣಿ ಶೀಟ್: ಪಾಲಿಕೆ ಸದಸ್ಯರು ಸೂಚನೆ ನೀಡಿದ್ದರೂ ಕೂಡ ಹಳೆ ಸಿಮೆಂಟ್ ಶೀಟ್‌ಗಳ ತೆರವುಗೊಳಿಸಿ, ಹೊಸ ಶೀಟ್‌ಗಳನ್ನು ಅಳವಡಿಸಿಲ್ಲ. ಇರುವ ಶೀಟ್‌ಗಳಿಗೆ ಪ್ಲಾಸ್ಟಿಕ್ ತೇಪೆ ಹಚ್ಚಿ ಕೈ ತೊಳೆದುಕೊಂಡಿದ್ದಾರೆ. ಸುಮಾರು 30 ವರ್ಷಗಳ ಹಿಂದಿನ ಶೀಟ್‌ಗಳು ಯಾವ ಕ್ಷಣದಲ್ಲಾದರೂ ಕೆಳಗೆ ಬಿದ್ದು ಅನಾಹುತ ಸಂಭವಿಸಬಹುದು. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಚಾವಣಿ ಶೀಟ್‌ಗಳನ್ನು ಬದಲಾಯಿಸಿಕೊಡುವಂತೆ ಮಡಿವಾಳರು ಆಗ್ರಹಿಸಿದ್ದಾರೆ.

ಶಾಸಕ ಜಿ.ಡಿ.ಹರೀಶ್‌ಗೌಡರ ತೆಕ್ಕೆಗೆ ಆಸ್ಪತ್ರೆ ಕಾವಲ್ ಗ್ರಾಮ ಪಂಚಾಯಿತಿ



ತೀವ್ರ ಕುತೂಹಲ ಕೆರಳಿಸಿದ್ದ ಹುಣಸೂರು ತಾಲೂಕಿನ ಅತೀ ಹೆಚ್ಚು ಸದಸ್ಯರನ್ನು ಹೊಂದಿರುವ ಆಸ್ಪತ್ರೆ ಕಾವಲ್ ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆ ಸೋಮವಾರ ನಡೆಯಿತು. ಅಧ್ಯಕ್ಷರಾಗಿ ಕೆ.ರಮೇಶ್ ಆಯ್ಕೆಯಾದರು. ಈ ಸಂದರ್ಭದಲ್ಲಿ ಸದಸ್ಯರಾದ ಗಂಗಮ್ಮ, ಶ್ರೀನಿವಾಸ್, ಮನುಸೂದನ್ ಭಾನು, ನಿರೋಷ, ಚಿಕ್ಕಮಾದು, ನಿಂಗಮ್ಮ, ಸುವರ್ಣ, ರಾಜೇಶ್ವರಿ, ಹೊನ್ನಮ್ಮ, ಭಾರತಿ, ಆನಂದ, ಗೋಪಿನಾಥ್, ತುಳಸಿರಾಮ್, ನಾಗರಾಜು, ಮೋಹನಚಾರಿ ಹಾಗೂ ಜಿಪಂ ಮಾಜಿ ಸದಸ್ಯ ಬಿ.ಟಿ.ರತ್ನಯ್ಯ, ಸುರೇಂದ್ರ, ಮೈಮುಲ್ ನಿರ್ದೇಶಕರಾದ ಶಿವಗಾಮಿ, ತಾಪಂ ಸದಸ್ಯರಾದ ಪ್ರಭಾಕರ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಅಧ್ಯಕ್ಷ ಕೆಂಪೇಗೌಡ,ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ರವಿಕುಮಾರ್, ವೆಂಕಟಪತಿ, ಆಂಜನೇಯ, ಗೋವಿಂದಯ್ಯ ಇನ್ನಿತರರು ಉಪಸ್ಥಿತರಿದ್ದರು.

ಐರ್ಲೆಂಡ್ ವಿರುದ್ಧದ ಟಿ20 ಸರಣಿಗೆ ಬುಮ್ರಾ ನಾಯಕ!

ನವದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಐರ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಗೆ ಭಾರತ ತಂಡವನ್ನು ಪ್ರಕಟಿಸಿದೆ. ಈ ತಂಡದ ನಾಯಕತ್ವವನ್ನು ಜಸ್ಪ್ರೀತ್ ಬುಮ್ರಾ ಅವರಿಗೆ ನೀಡಲಾಗಿದೆ.

ಸುಮಾರು 10 ತಿಂಗಳ ನಂತರ ಬುಮ್ರಾ ಟೀಂ ಇಂಡಿಯಾಗೆ ಮರಳುತ್ತಿದ್ದು, ಅವರು ಬಂದ ತಕ್ಷಣ ನಾಯಕತ್ವದ ಜವಾಬ್ದಾರಿಯನ್ನು ನೀಡಲಾಗಿದೆ ಈ ಭಾರತೀಯ ವೇಗದ ಬೌಲರ್ ಸೆಪ್ಟೆಂಬರ್ 2022ರಲ್ಲಿ ಭಾರತಕ್ಕಾಗಿ ತನ್ನ ಕೊನೆಯ ಪಂದ್ಯವನ್ನು ಆಡಿದರು. ನಿರಂತರ ಬೆನ್ನು ನೋವಿನಿಂದ ತೊಂದರೆಗೊಳಗಾಗಿರುವ ಬುಮ್ರಾ ಈಗ ಶಸ್ತ್ರಚಿಕಿತ್ಸೆಯ ನಂತರ ಪುನರಾಗಮನ ಮಾಡುತ್ತಿದ್ದಾರೆ. ಐರ್ಲೆಂಡ್ ವಿರುದ್ಧದ ಈ ಸರಣಿಯು ಅವರ ಏಷ್ಯಾ ಕಪ್ ಮತ್ತು ವಿಶ್ವಕಪ್‌ನ ಭವಿಷ್ಯವನ್ನು ನಿರ್ಧರಿಸುತ್ತದೆ.

ಶಾಸಕ ತನ್ವೀರ್ ಸೇಠ್ ಕುರಿತು ಸಂಸದ ಮುನಿಸ್ವಾಮಿ ಹೇಳಿಕೆಗೆ ಖಂಡನೆ



ಮೈಸೂರು,ಜು.31(ಪಿಎಂ)– ಶಾಸಕ ತನ್ವೀರ್‌ಸೇಠ್ ಅವರನ್ನು ಉಗ್ರಗಾಮಿ ಸಂಘಟನೆ ಮುಖ್ಯಸ್ಥ ಎಂದು ಬಿಜೆಪಿ ಸಂಸದ ಎಸ್.ಮುನಿಸ್ವಾಮಿಯವರು ಹೇಳಿಕೆ ನೀಡಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್, ಮುನಿಸ್ವಾಮಿಯವರ ವಿರುದ್ಧ ಮೈಸೂರಿನ ಎನ್‌ಆರ್ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಡಿಜೆ ಹಳ್ಳಿ, ಕೆಜಿ ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿಯ ಗಲಭೆಗಳ ಸಂಬಂಧ ಪರಿಶೀಲಿಸಿ ಅಮಾಯಕರನ್ನು ಬಿಡುಗಡೆ ಮಾಡುವಂತೆ ಕೋರಿ ಶಾಸಕ ತನ್ವೀರ್‌ಸೇಠ್ ಗೃಹ ಸಚಿವರಿಗೆ ಪತ್ರ ಬರೆದಿದ್ದಾರೆ. ಪರಿಶೀಲಿಸಿ ಸರ್ಕಾರದ ನಿರ್ದೇಶನದಂತೆ ಪೊಲೀಸರು ಮುಂದಿನ ಕ್ರಮ ವಹಿಸುತ್ತಾರೆ. ಹೀಗೆ ಸರ್ಕಾರಕ್ಕೆ ಮನವಿ ಸಲ್ಲಿಸುವುದು ಸಹಜ ಪ್ರಕ್ರಿಯೆ ಎಂದರು.

ಗಲಭೆಗಳಲ್ಲಿ ಭಾಗಿಯಾದವರನ್ನು ಬಿಡುಗಡೆ ಮಾಡುವಂತೆ ತನ್ವೀರ್‌ಸೇಠ್ ಅವರು ಪತ್ರದಲ್ಲಿ ಹೇಳಿಲ್ಲ. ಆದರೆ ಈ ಸಂಬಂಧ ಅವರನ್ನು ಉಗ್ರಗಾಮಿ ಸಂಘಟನೆ ಮುಖ್ಯಸ್ಥ ಎಂದು ಮುನಿಸ್ವಾಮಿಯವರು ಟೀಕಿಸಿದ್ದಾರೆ. ಆ ಮೂಲಕ ತನ್ವೀರ್‌ಸೇಠ್ ಅವರ ತೇಜೋವಧೆ ಮಾಡಿದ್ದಾರೆ. ಇದು ಖಂಡನೀಯ. ಮುನಿಸ್ವಾಮಿಯವರ ವಿರುದ್ಧ ಎನ್‌ಆರ್ ಪೊಲೀಸರಿಗೆ ಮಂಗಳವಾರ ದೂರು ನೀಡಲಾಗುವುದು. ಕಾಂಗ್ರೆಸ್ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಿದರು.

ಅವಹೇಳನಕಾರಿ ಮತ್ತು ಪ್ರಚೋದನಕಾರಿ ಹೇಳಿಕೆ ನೀಡುವ ಮೂಲಕ ತನ್ವೀರ್‌ಸೇಠ್ ಅವರ ವಿರುದ್ಧ ಪ್ರತಿಕೂಲ ವಾತಾವರಣ ಸೃಷ್ಟಿಸಲು ಎಸ್.ಮುನಿಸ್ವಾಮಿ ಪ್ರಯತ್ನಿಸಿದ್ದಾರೆ ಎಂದು ದೂರಿದರು.

ಕಾಂಗ್ರೆಸ್ ಮುಖಂಡರಾದ ಕುರುಬಾರಹಳ್ಳಿ ಪ್ರಕಾಶ್, ರಸೂಲ್, ಎಸ್.ಎ.ರಹೀಮ್, ವಿವಿ ಸಂಶೋಧಕರ ಸಂಘದ ರಾಜ್ಯಾಧ್ಯಕ್ಷ ಮರಿದೇವಯ್ಯ ಗೋಷ್ಠಿಯಲ್ಲಿದ್ದರು.

ಭ್ರಷ್ಟಾಚಾರ ಪ್ರಕರಣ: ಡಿಕೆಶಿ ವಿರುದ್ಧದ ತನಿಖೆಗೆ ತಡೆ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ: ಆದಾಯ ಮೀರಿ ಆಸ್ತಿ ಗಳಿಕೆಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ಮಧ್ಯಂತರ ತಡೆ ನೀಡಿರುವ ಕರ್ನಾಟಕ ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂಕೋರ್ಟ್ ಸೋಮವಾರ ನಿರಾಕರಿಸಿದೆ.



ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ ಸಿ.ಟಿ. ರವಿಕುಮಾರ್ ಮತ್ತು ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರನ್ನೊಳಗೊಂಡ ಪೀಠವು, ಈ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ಫೆಬ್ರವರಿ 10 ರಂದು ನೀಡಿದ್ದ ಆದೇಶದ ವಿರುದ್ಧ ಕೇಂದ್ರೀಯ ತನಿಖಾ ದಳ (ಸಿಬಿಐ) ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಮಾತನಾಡಿ, ಸಂಸ್ಥೆಯ ಪರವಾಗಿ ಆದೇಶವಿದ್ದರೂ, ಹೈಕೋರ್ಟ್‌ನ ವಿಭಾಗೀಯ ಪೀಠವು ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ವಿಚಾರಣೆಗೆ ಮಧ್ಯಂತರ ತಡೆ ನೀಡಿದೆ ಎಂದರು. ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ಸಿಬಿಐ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದೆ. ಆದರೆ, ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ ಮಧ್ಯಂತರ ಆದೇಶಗಳನ್ನು ಪ್ರಶ್ನಿಸಲು ನಿರಾಕರಿಸಿದೆ ಎಂದು ಹೇಳಿದರು.

ಆಗ ಸುಪ್ರೀಂ ಕೋರ್ಟ್ ಪೀಠವು, ಈ ವಿಚಾರದಲ್ಲಿ ತಾನು ಮಧ್ಯಪ್ರವೇಶಿಸಲು ಹೋಗುವುದಿಲ್ಲ ಎಂದಿತು ಮತ್ತು ತನ್ನ ಮುಂದಿರುವ ಪ್ರಕರಣವನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಹೈಕೋರ್ಟ್‌ಗೆ ಮನವಿ ಮಾಡಲು ಸಿಬಿಐಗೆ ಅವಕಾಶ ನೀಡಿತು. ಫೆಬ್ರವರಿ 10 ರಂದು ಕರ್ನಾಟಕ ಹೈಕೋರ್ಟ್ ಡಿಕೆ ಶಿವಕುಮಾರ್ ವಿರುದ್ಧದ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ವಿಚಾರಣೆಗೆ ಮಧ್ಯಂತರ ತಡೆ ನೀಡಿದೆ.

ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತಾವು ಕ್ರಮ ಕೈಗೊಂಡಿರುವ ವರದಿಯನ್ನು ಸಲ್ಲಿಸುವಂತೆ ತನಿಖಾ ಸಂಸ್ಥೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ. ಅಲ್ಲದೆ, ಶಿವಕುಮಾರ್ ವಿರುದ್ಧ ದಾಖಲಾಗಿರುವ ಪ್ರಕರಣಗಳು 2020ರದ್ದಾಗಿವೆ ಎಂದು ಸೂಚಿಸಿದ ಹೈಕೋರ್ಟ್, ಕಳೆದ ಎರಡು ವರ್ಷಗಳ ತನಿಖೆಯ ಪ್ರಗತಿ ಕುರಿತು ಸಿಬಿಐ ಅನ್ನು ಪ್ರಶ್ನಿಸಿದೆ.

ಅಂತಿಮ ವರದಿಯನ್ನು ಯಾವಾಗ ಸಲ್ಲಿಸುತ್ತೀರಿ ಎಂದು ಹೈಕೋರ್ಟ್ ತನಿಖಾ ಸಂಸ್ಥೆಯನ್ನು ಕೇಳಿದ್ದು, ಮುಂದಿನ ವಿಚಾರಣೆವರೆಗೆ ಡಿಕೆ ಶಿವಕುಮಾರ್ ವಿರುದ್ಧದ ಪ್ರಕರಣದ ಸಿಬಿಐ ವಿಚಾರಣೆಗೆ ತಡೆ ನೀಡಿ ಪ್ರಕರಣವನ್ನು ಮುಂದೂಡಿದೆ. ಶಿವಕುಮಾರ್ ಮೇಲೆ ಆದಾಯ ತೆರಿಗೆ ಇಲಾಖೆ 2017ರಲ್ಲಿ ದಾಳಿ ನಡೆಸಿತ್ತು. ಐಟಿ ಇಲಾಖೆ ನೀಡಿದ ಮಾಹಿತಿಯನ್ನು ಆಧರಿಸಿ ಜಾರಿ ನಿರ್ದೇಶನಾಲಯವು (ಇಡಿ) ಶಿವಕುಮಾರ್ ವಿರುದ್ಧ ತನಿಖೆ ಆರಂಭಿಸಿದೆ.

ಇ.ಡಿ ತನಿಖೆಯನ್ನು ಆಧರಿಸಿ, ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಲು ಸಿಬಿಐ ರಾಜ್ಯ ಸರ್ಕಾರದ ಅನುಮತಿ ಕೋರಿತ್ತು. ಈ ಸಂಬಂಧ ಸಿಬಿಐ ತನಿಖೆ ನಡೆಸಲು ರಾಜ್ಯ ಸರ್ಕಾರ 2019ರ ಸೆಪ್ಟೆಂಬರ್ 25ರಂದು ಅಧಿಸೂಚನೆ ಹೊರಡಿಸಿತ್ತು ಮತ್ತು 2020ರ ಅಕ್ಟೋಬರ್ 3ರಂದು ಸಿಬಿಐ ಎಫ್‌ಐಆರ್ ದಾಖಲಿಸಿತ್ತು.

ಮಕ್ಕಳ ಶಾಲಾ ಪ್ರವೇಶಕ್ಕೆ ಆಧಾರ್ ಕಡ್ಡಾಯವಲ್ಲ: ಕೇಂದ್ರ ಸ್ಪಷ್ಟನೆ

ನವದೆಹಲಿ: ಮಕ್ಕಳ ಶಾಲಾ ಪ್ರವೇಶಕ್ಕೆ ಆಧಾರ್ ಕಡ್ಡಾಯವಲ್ಲ. ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಯಾವುದೇ ಮಗುವಿಗೆ ಶಾಲೆಗೆ ಪ್ರವೇಶ ನಿರಾಕರಿಸಬಾರದು ಎಂದು ಕೇಂದ್ರ ಸರ್ಕಾರ ಸೋಮವಾರ ಸ್ಪಷ್ಟಪಡಿಸಿದೆ.

2018 ಮತ್ತು 2021ರಲ್ಲಿ ಈ ಕುರಿತು ಹಿಂದಿನ ಪ್ರಕಟಣೆಗಳನ್ನು ಪುನರುಚ್ಚರಿಸಿದ ಕೇಂದ್ರ, ಕೆಲವು ಶಾಲೆಗಳು ಇನ್ನೂ ಪ್ರವೇಶಕ್ಕಾಗಿ ಆಧಾರ್ ಕಡ್ಡಾಯವಾಗಿ ನೀಡಬೇಕು ಎಂದು ಒತ್ತಾಯಿಸುತ್ತಿರುವ ವರದಿಗಳ ಹಿನ್ನಲೆಯಲ್ಲಿ ಈ ಸ್ಪಷ್ಟನೆ ನೀಡಿದೆ.

2ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಪುಟ್ಟನಂಜಮ್ಮ

(ಲೇಟ್ ನಂಜಯ್ಯನವರ ಧರ್ಮಪತ್ನಿ, ಹೊರಳಹಳ್ಳಿ, ಸೋಸಲೆ ಹೋ॥)



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಸೋಮಶೇಖರ್, ಭಾಗ್ಯ, ಶ್ರಾವ್ಯ, ಮನ್ವಿತ್‌ಮೌರ್ಯ

ನೈರುತ್ಯ ರೈಲ್ವೆ

ಇ-ಟೆಂಡರ್ ಸೂಚನೆ ಸಂ: Y/E.29/2023-24/22 ದಿನಾಂಕ: 25.07.2023

[illegible] ಮೊತ್ತ: ರೂ. 10,89,322/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.08.2023, 11:00 ಗಂಟೆಯವರೆಗೆ

ಇ-ಟೆಂಡರ್ ಸೂಚನೆ ಸಂ: Y/E.29/2023-24/23 ದಿನಾಂಕ: 27.07.2023

[illegible] ಮೊತ್ತ: ರೂ. 9,33,43,841.01

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.08.2023, 11:00 ಗಂಟೆಯವರೆಗೆ

ಇ-ಟೆಂಡರ್ ಸೂಚನೆ ಸಂ: Y/E.29/2023-24/24 ದಿನಾಂಕ: 27.07.2023

[illegible] ಮೊತ್ತ: ರೂ. 8,89,52,577.09

...ಟಿಆರ್‌ಡಿ ನಿರ್ವಹಣೆ ಮತ್ತು ಬ್ರೇಕ್‌ಡೌನ್ ಚಟುವಟಿಕೆಗಳ ಹೊರ ಗುತ್ತಿಗೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.08.2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಮೈಸೂರು

PUB/275/AAD/PRB/SWR/2023-24

S.W.Railways SWRRLY SWRRLY

ಸಾರ್ವಜನಿಕ ತಿಳುವಳಿಕೆ

ನನ್ನ ಕಕ್ಷಿದಾರ ಸಂಸ್ಥೆಯಾದ ಪಂಜಾಬ್ ರಾಜ್ಯದ ಓಷಿಯಾರ್‌ಪುರ್, ಮರೂಫ್ ಸಿಯಾಲ್ಲನ್, ಬಸ್ಸಿ ಗ್ರಾಮದ ಖಾತಾ ನಂಬರ್ 20/26, ಕಸ್ರ ನಂಬರ್ 25/8-13-28/1/2 ರಲ್ಲಿ ನೊಂದಾಯಿತ ಕಛೇರಿ ಹೊಂದಿರುವ ಸಾವಿತ್ರಿ ಪ್ಲೇ ಬೋರ್ಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರ ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಸಂಖ್ಯೆ 2 ರಲ್ಲಿ 17ನೇ ಪ್ಲಾಟ್‌ನಲ್ಲಿ ಇರುವ ಶಾಖಾ ಕಛೇರಿಯ ಆಥರೈಸ್‌ಡ್ ಸಿಗ್ನೇಟರಿ ಆದ ಪ್ರಮೋದ್‌ಕುಮಾರ್ ಎಂ.ಎಲ್ ರವರ ಇರಾದೆಯ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ; ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಬೇಡರಪುರ ಗ್ರಾಮದ, ಮಹದೇವಪ್ಪರವರ ಮಗ ಎಂ.ರಾಜೇಂದ್ರಕುಮಾರ್ ರವರಿಗೆ ಸೇರಿದ ಸದರಿ ಬೇಡರಪುರ ಗ್ರಾಮದ ಸ.ನಂ. 43 ರಲ್ಲಿ 05 ಎಕರೆ 39 ಗುಂಟೆ ಪೈಕಿ ಉತ್ತರ ಪಾರ್ಶ್ವದ 2 ಎಕರೆ 20 ಗುಂಟೆ ಜಮೀನನ್ನು ನನ್ನ ಕಕ್ಷಿದಾರ ಸಂಸ್ಥೆಯು ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತದೆ. ಆದ್ದರಿಂದ ಸದರಿ ಜಮೀನಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಅಥವಾ ಹಿತಾಶಕ್ತಿ ಇದ್ದಲ್ಲಿ ಈ ತಿಳುವಳಿಕೆ ನೀಡಿದ 15 ದಿನಗಳ ಒಳಗಾಗಿ ಈ ಕೆಳಕಂಡ ಅವರಿಗೆ ಲಿಖಿತವಾಗಿ ತಿಳಿಸುವುದು. ತಪ್ಪಿದಲ್ಲಿ ಸದರಿ ಜಮೀನನ್ನು ಕ್ರಯಕ್ಕೆ ಪಡೆಯಲು ಯಾರ ತಕರಾರು ಇರುವುದಿಲ್ಲವೆಂದು ತಿಳಿದು ಕ್ರಯಕ್ಕೆ ಪಡೆಯಲಾಗುವುದು.

ಪ್ರಮೋದ್‌ಕುಮಾರ್.ಎಂ.ಎಲ್
ಪ್ಲಾಟ್ ನಂ.17, ರಸ್ತೆ ನಂ.2 ಬದನಗುಪ್ಪೆ-ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ, ಬದನಗುಪ್ಪೆ ಅಂಚೆ, ಕಸಬಾ ಹೋಬಳಿ, ಚಾಮರಾಜನಗರ ತಾಲ್ಲೂಕು. ಮೊ. 9844012821.

ವಕೀಲರು.
ಆರ್.ವಿರೂಪಾಕ್ಷ ಬಿ.ಕಾಂ.ಎಲ್‌ಎಲ್.ಎಂ.,
ಹೆಚ್.ಕೆ.ಆರ್.ಬಿಲ್ಡಿಂಗ್,
2ನೇ ಚಮಾಲ್ ಬೀದಿ, ಚಾಮರಾಜನಗರ.
ಮೊ.9449509795.
ಮೇಲ್: rvadv.kal@gmail.com.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸ್ಥಾಪನೆ : 1919 ಫೋ :2520894, 4259665

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್, ನಿಯಮಿತ

ಎನ್. ಮಾಧವರಾವ್‌ವೃತ್ತ, ಮೈಸೂರು-570 004, ಕಂಪ್ಯೂಟರೀಕರಣದ ಬ್ಯಾಂಕ್

Sri Krishnarajendra Co-operative Bank Ltd.

N. Madhava Rao Circle, Mysuru - 570 004.

ಪ್ರಕಟಣೆ ದಿ: 31.07.2023

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2022-23 ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ 85ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ಅರ್ಹ ವಿದ್ಯಾರ್ಥಿಗಳು ಬ್ಯಾಂಕಿನಲ್ಲಿ ಅರ್ಜಿ ಪಡೆದು ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿ, 2 ಭಾವಚಿತ್ರ ಮತ್ತು ಸದಸ್ಯರ ಪಾಸ್ ಪುಸ್ತಕದ ನಕಲು ಪ್ರತಿಯೊಂದಿಗೆ ಆಗಸ್ಟ್ 12 ರೊಳಗೆ ಸಲ್ಲಿಸಲು ಕೋರಲಾಗಿದೆ.

1. ಚಿನ್ನಾಭರಣಗಳ ಮೇಲೆ ಶೇ 9.5 ರಂತೆ ಗ್ರಾಂಗೆ ರೂ. 4000– ಸಾಲ ನೀಡಲಾಗುತ್ತಿದೆ.
2 ಮನೆ ಹಾಗೂ ನಿವೇಶನಗಳ ಮೇಲೆ ಶೇ 12.5 ರಂತೆ ಗರಿಷ್ಠ 20 ಲಕ್ಷ ಸಾಲ ನೀಡಲಾಗುತ್ತಿದೆ. (ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು)
3. ಠೇವಣಿಗಳ ಮೇಲೆ ಗರಿಷ್ಠ ಶೇ 7.0 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 7.5 ರಂತೆ ಬಡ್ಡಿ ನೀಡಲಾಗುತ್ತಿದೆ. ಸಂಪರ್ಕಿಸಿ: 9880371421, 9844775166

ಪ್ರತಿಧ್ವನಿಪ್ರಸಾದ್ ಅಧ್ಯಕ್ಷರು	ಡಿ.ಬಸವರಾಜು(ಬಸಪ್ಪ) ಉಪಾಧ್ಯಕ್ಷರು	ಡಿ. ಅನಂತವೀರಪ್ಪ ಪ್ರ. ವ್ಯವಸ್ಥಾಪಕರು

BEFORE THE HON'BLE VI ADDL. DISTRICT AND SESSIONS JUDGE COURT, AT MYSURU
R.A. No. 05/2023

Appellants: Smt. Rajamma & others V/S
Respondents: Sri. Chinnaswamy Gowda & others
Respondent No.1: Chinnaswamy Gowda S/o. Late. Lakshmipathi Gowda, Aged about 71 years, R/at: No. 2, Siddappaji Lights & Sounds, upstairs, 2nd Main Road, K.D. Road, V.V. Mohalla, Mysuru.
Respondent No.2: Govinde Gowda, S/o. Late. Lakshmipathi Gowda, Aged about 68 years, R/at: No. 89/8, 12th Main, 1st Cross, T.K. Layout, Mysuru. Respondent No.6: Nagendra Gowda, S/o. Late. Lakshmipathi Gowda, Aged about 61 years, R/at: Hulikere Village, Srirangapattana Taluk, Mandya District.

PUBLIC NOTICE

Whereas, the appellants in the above case have filed the above appeal against all of you and other respondents. Hence the above named Respondents No.1, 2 & 6 are hereby directed to appear before this Hon'ble Court either in person or through your counsel on 29/08/23 at 11 A.M, failure of which, the same will be heard and disposed off exparte.

Given under my hand and seal of the court on this 28 day of July 2023

Advocate For Appellants
Sd/- H.S. KUMAR, B.A.L, LL.B.,
Advocate, No. 1411/1, 1st Floor,
6th Cross, Thyagaraja Road, Mysuru,
Mob:9448797546

By the order of the Court
Sd/- Cheif Administrator Officer
District & Sessions Court, Mysuru.

ಪಟ್ಟಣ ಪಂಚಾಯಿತಿ ಕಾರ್ಯಾಲಯ ಶ್ರೀರಾಂಪುರ

ಮೈಸೂರು ಜಿಲ್ಲೆ -570089

ದೂರವಾಣಿ ಸಂ.: 0821-2330109 ಇ-ಮೇಲ್ : itstaff_ulb_srirampura@yahoo.com

ಶ್ರೀ.ಪ.ಪ./ಶಿ.ಆ.ನಿ/ಹಿಎಚ್./ಘತ್ಯಾನಿ/ಬೆಳಗಿನ ಉಪಹಾರ/ ಟೆ.ಪ್ರ./01/2023-24 ದಿನಾಂಕ :28-07-2023

ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ ಶ್ರೀರಾಂಪುರ ಮುಖ್ಯಾಧಿಕಾರಿರವರು, ಶ್ರೀರಾಂಪುರ ಪಟ್ಟಣ ಪಂಚಾಯಿತಿ ಸ್ವಚ್ಛತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಉತ್ತಮ ಗುಣಮಟ್ಟದ ಶುಚಿ-ರುಚಿಯಾದ ಬೆಳಗಿನ ಉಪಹಾರವನ್ನು ಸರಬರಾಜು ಪಡೆಯುವ ಸಂಬಂಧ ಆದೇಶವಾಗಿರುತ್ತದೆ. ಸದರಿ ಆದೇಶವನ್ನು ತುರ್ತಾಗಿ ಪಾಲಿಸಬೇಕಾಗಿರುವುದರಿಂದ ಮುಚ್ಚಿದ ಲಕೋಟೆ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ನೋಂದಾಯಿತ ಅಡುಗೆ ಗುತ್ತಿಗೆದಾರರು ಕಾಮಗಾರಿಗಳಿಗೆ ಇ.ಎಂ.ಡಿ ಹಾಗೂ ದರಗಳನ್ನು ಮುಚ್ಚಿದ ಲಕೋಟೆ ಪದ್ಧತಿಯಲ್ಲಿ ಪಾವತಿ ಹಾಗೂ ನಮೂದಿಸುವುದು ಮತ್ತು ಸ್ಥಳೀಯ ಅರ್ಹತಾ ಗುತ್ತಿಗೆದಾರರಿಗೆ ಮೊದಲ ಆದ್ಯತೆಯನ್ನು ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಕಛೇರಿಗೆ ಸಂಬಂಧಿಸಿದವರ ಹತ್ತಿರ ಪರಿಶೀಲಿಸಬಹುದು. ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ 07-08-2023 ಸಂಜೆ 5.00 ಗಂಟೆ. ಸ್ವೀಕೃತವಾದ ಟೆಂಡರ್ ತೆರೆಯುವ ದಿನಾಂಕ 09-08-2023 ಸಂಜೆ 5.00 ಗಂಟೆಗೆ.

ಸಹಿ/– (ಗಿರೀಶ್ ಜಿ.ಎನ್.)ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಸಹಿ/– (ಎ.ಎಮ್. ಶ್ರೀಧರ್), ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಶ್ರೀರಾಂಪುರ

ಷರತ್ತುಗಳು:–
1) ನೋಂದಾಯಿತ ಅಡುಗೆ ಗುತ್ತಿಗೆದಾರರಾಗಿರಬೇಕು
2) ಪ್ರತಿದಿನ ಬೆಳಗ್ಗೆ 9.00 ಘಂಟೆಗೆ ಕಚೇರಿಗೆ ಉಪಹಾರ ಸರಬರಾಜು ಮಾಡುವುದು
3) ಪ್ರತಿ ಮಾಹೆಯ ಬಿಲ್ಲನ್ನು ಅನುದಾನದ ಲಭ್ಯತೆ ಆಧಾರದ ಮೇಲೆ ಪಾವತಿಸಲಾಗುವುದು
4) ಉಪಹಾರದ ಗುಣಮಟ್ಟದ ಬಗ್ಗೆ ಪೌರಕಾರ್ಮಿಕರು ಅತೃಪ್ತಿಯಲ್ಲಿ ವ್ಯಕ್ತಪಡಿಸಿದ್ದಲ್ಲಿ ಟೆಂಡರನ್ನು ರದ್ದುಪಡಿಸಲಾಗುವುದು